ಸಾರಾ ಅಬೂಬಕ್ಕರ್ ಅವರ ಕಾದಂಬರಿಗಳಲ್ಲಿ ಸಂವೇದನೆಯ ಸ್ವರೂಪ

ಕನ್ನಡ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸಿದ ನಿಬಂಧ

ಸಂಶೋಧಕರು

ಕಮಲ.ವೈ.ಪಿ.

ಮಾರ್ಗದರ್ಶಕರು

ಡಾ. ಪಿ.ಕೆ.ರಾಜಶೇಖರ್

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿಶ್ವ ವಿದ್ಯಾನಿಲಯದ ಮಾನ್ಯತೆ ಪಡೆದಿದೆ)

681

2008–09

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

68

AKSHARA GRANTHALAYA

ACC.NO. 130315

681

681

ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಾರಾ ಅಬೂಬಕ್ಕರ್ ಅವರ ಕಾದಂಬರಿಗಳಲ್ಲಿ ಸಂವೇದನೆಯ ಸ್ವರೂಪ

ಕನ್ನಡ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸಿದ ನಿಬಂಧ

ಸಂಶೋಧಕರು

ಕಮಲ.ವೈ.ಸಿ.

ಮಾರ್ಗದರ್ಶಕರು

ಡಾ. ಪಿ.ಕೆ.ರಾಜಶೇಖರ್

ಕನ್ನಡ ವಿಶ್ವವಿದ್ಯಾಲಯ, ಹಂಪಿ
ಅಧ್ಯಯನಾಂಗ

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿಶ್ವ ವಿದ್ಯಾನಿಲಯದ ಮಾನ್ಯತೆ ಪಡೆದಿದೆ)

2008–09

8K0.9
KML.S
130315

ಮಾರ್ಗದರ್ಶಕರ ಪ್ರಮಾಣ ಪತ್ರ

"ಸಾರಾ ಅಬೂಬಕ್ಕರ್‌ರವರ ಕಾದಂಬರಿಗಳಲ್ಲಿ ಸಂವೇದನೆಯ ಸ್ವರೂಪ" ಎಂಬ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯದ **ಎಂ.ಫಿಲ್.**, ಪದವಿಗಾಗಿ ವೈ.ಸಿ.ಕಮಲರವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಮೈಸೂರು
ದಿನಾಂಕ : ೨೪-೦೬-೨೦೦೬

ಪಿ. ಕೆ. ರಾಜಶೇಖರ್

(ಡಾ॥ ಪಿ.ಕೆ. ರಾಜಶೇಖರ್)
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು,
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮಾನಸಗಂಗೋತ್ರಿ, ಮೈಸೂರು.

ಸಂಶೋಧಕರ ಪ್ರಮಾಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಯುತ್ತಿರುವ ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ೨೦೦೮-೦೯ ನೇ ಸಾಲಿಗೆ ಕನ್ನಡ ಎಂ.ಫಿಲ್ ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **"ಸಾರಾ ಅಬೂಬಕ್ಕರ್ ಅವರ ಕಾದಂಬರಿಗಳಲ್ಲಿ ಸಂವೇದನೆಯ ಸ್ವರೂಪ"** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ॥ ಪಿ.ಕೆ.ರಾಜಶೇಖರ್‌ರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವುದೇ ಗ್ರಂಥ ಅಥವಾ ನಿಯತ ಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ. ಕನ್ನಡ ವಿಶ್ವ ವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಸಲ್ಲಿಸುತ್ತಿದ್ದೇನೆ.

ಕಮಲ ವೈ.ಸಿ.

ಸ್ಥಳ : ಮಂಡ್ಯ
ದಿನಾಂಕ : ೨೪-೦೯-೨೦೦೯

(ಕಮಲ.ವೈ.ಸಿ.)
ಸಂಶೋಧನ ವಿದ್ಯಾರ್ಥಿ
ಕರ್ನಾಟಕ ಸಂಘ (ರಿ) ಮಂಡ್ಯ
ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ.

ಪರಿವಿಡಿ

ಅಧ್ಯಾಯ-೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರಪಂಚದಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಧರ್ಮಗಳೂ ಸ್ಥಾಪನೆಗೊಂಡಿರುವುದು ಪುರುಷ ನೆಲೆಯಿಂದ. ಧರ್ಮ, ಸಂಪ್ರದಾಯಗಳ ಹೆಸರಿನಲ್ಲಿ ಅನುಷ್ಠಾನಗೊಂಡ ನೀತಿ, ನಿಯಮಗಳು, ಆಚರಣೆಗಳು, ಕಟ್ಟುಪಾಡುಗಳೆಲ್ಲವೂ ಪುರುಷಪರ ದೃಷ್ಟಿಯಿಂದಲೇ ರಚನೆಯಾಗಿವೆ. ಧರ್ಮವನ್ನು ಮುಂದಿಟ್ಟುಕೊಂಡು ಪರೋಕ್ಷವಾಗಿ ಸ್ತ್ರೀಯರ ಮೇಲೆ ಹಿಡಿತ ಸಾಧಿಸಲು ರೂಪು ತಳೆದ ಧರ್ಮಶಾಸ್ತ್ರಗಳು, ಗ್ರಂಥಗಳು, ಕಾನೂನುಗಳು, ಪುರುಷನನ್ನು ಪ್ರಧಾನವಾಗಿರಿಸಿ, ಸ್ತ್ರೀಯರನ್ನು ಅಧೀನವಾಗಿಸುವ ನಿಟ್ಟಿನಲ್ಲಿಯೇ ಬೆಳೆದು ಬಂದಿರುವುದು ಸರ್ವವಿಧಿತ. ಇಸ್ಲಾಂ ಧರ್ಮವೂ ಕೂಡ ಈ ಧೋರಣೆಯಿಂದ ಹೊರತಾಗಿಲ್ಲ. ಇಲ್ಲಿಯೂ ಪುರುಷಾಧಿಪತ್ಯವೇ ಪ್ರಧಾನವಾಗಿದ್ದು, ಸ್ತ್ರೀಯರಿಗೆ ಕಲ್ಪಿಸಿರುವ ಸ್ಥಾನಮಾನಗಳು ಅನ್ಯ ಧರ್ಮಗಳೊಡನೆ ಹೋಲಿಕೆ ಮಾಡಿಕೊಂಡಲ್ಲಿ ತೀರಾ ನಿಕೃಷ್ಟವಾಗಿವೆ.

ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆಗಳು ಮೈದಾಳಿದ್ದು ಈ ಶತಮಾನದ ಎಪ್ಪತ್ತರ ದಶಕದಲ್ಲಿ. ಅಲ್ಲಿಯವರೆಗೆ ಸಾಹಿತ್ಯಿಕವಾಗಿ ಗೈರು ಹಾಜರಿಯಲ್ಲಿದುದಕ್ಕೆ ಹಲವಾರು ಅಂಶಗಳು ಕಾರಣವಾಗಿವೆ. ಅವುಗಳಲ್ಲಿ ಬಹುಸಂಖ್ಯಾತರಿಗೆ ಇದ್ದ ತಾತ್ಸಾರ, ನಿರಾಶಕ್ತಿ ಒಂದು ಕಾರಣವಾದರೆ, ಸಮಾಜದ ಮುಖ್ಯವಾಹಿನಿಯಲ್ಲಿ ತಮ್ಮನ್ನು ತಾವು ಒಳಪಡಿಸಿಕೊಳ್ಳದೇ ಮುಸ್ಲಿಂ ಸಮಾಜವು ಪ್ರತ್ಯೇಕವಾಗಿ ಒಂದು ನಿರ್ಧಿಷ್ಟ ವಲಯಕ್ಕೆ ಸೀಮಿತವಾದುದು ಮತ್ತೊಂದು ಕಾರಣವೆನ್ನಬಹುದು.

ಅದುವರೆಗಿನ ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಪಾತ್ರಗಳು ಅಲ್ಲೊಂದು ಇಲ್ಲೊಂದು ಎಂಬಂತೆ ಕಾಣಿಸಿಕೊಂಡಿತ್ತಾದರೂ, ಮುಖ್ಯ ಭೂಮಿಕೆಯಲ್ಲಿ ಮುಸ್ಲಿಂ ಸಮಾಜದ ನೈಜ ಚಿತ್ರಣ ಮೂಡಿಬಂದಿರಲಿಲ್ಲ. ಹೀಗೆ ಸಾಹಿತ್ಯದಿಂದ ದೂರ ಉಳಿದ ಅಜ್ಞಾತವಾಗಿಯೇ ಇದ್ದ ಮುಸ್ಲಿಂ ಸಮಾಜದ ಸ್ಪಷ್ಟ ಚಿತ್ರಣವನ್ನು ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸಿದವರು ಬಂಡಾಯ ಸಂದರ್ಭದಲ್ಲಿ ಬಂದ ಮುಸ್ಲಿಂ ಬರಹಗಾರರು. ಬಂಡಾಯ ಸಾಹಿತ್ಯವು ಮಾತಿಲ್ಲದೆ, ಧ್ವನಿಯಿಲ್ಲದೆ, ದಾಖಲೆಯಿಲ್ಲದೆ ಮೂಕವಾಗಿದ್ದ ಅನೇಕ ಜನಾಂಗಗಳಿಗೆ ವೇದಿಕೆಯೊದಗಿಸಿತು. ಈ ಹಿನ್ನೆಲೆಯಲ್ಲಿ ಮುಸ್ಲಿಂ ಸಮಾಜದ ವಾಸ್ತವತೆಗಳನ್ನು ಸಾಹಿತ್ಯದಲ್ಲಿ ದಾಖಲುಗೊಳಿಸುವುದರ ಮೂಲಕ ಜಗತ್ತಿಗೆ ತೆರೆದಿಟ್ಟವರು, ಅದೇ ಸಮಾಜದಿಂದ ಹುಟ್ಟಿ ಬೆಳೆದು ಬಂದ ಅನೇಕ ಪ್ರಜ್ಞಾವಂತ ಲೇಖಕ-ಲೇಖಕಿಯರು. ಇವರು ತಮ್ಮ ಸಮಾಜದಲ್ಲಿನ ಮೌಢ್ಯ, ಕಂದಾಚಾರ, ಧರ್ಮಾಂಧತೆ, ಧಾರ್ಮಿಕ ಬಿಗಿಬಂಧನಗಳನ್ನು ನಿಸ್ಸಂಕೋಚವಾಗಿ, ನಿಷ್ಪಕ್ಷಪಾತವಾಗಿ ಬಹುಸಂಖ್ಯಾತರ ಎದುರು ಅನಾವರಣಗೊಳಿಸಿದರು. ಈ ಮೂಲಕ

ಕನ್ನಡ ಸಾಹಿತ್ಯ ಸಾಗರಕ್ಕೆ ಮುಸ್ಲಿಂ ಸಂವೇದನೆಯ ಹೊಸ ನೀರ ಝರಿಯನ್ನು ಹರಿಸಿದರು. ಹೀಗೆ ತಮ್ಮ ಜನಾಂಗದಲ್ಲಿರುವ ಧಾರ್ಮಿಕ ನಂಬಿಕೆ, ಆಚರಣೆ, ಖುರಾನಿನ ವ್ಯಾಖ್ಯಾನಗಳು, ಮಹಿಳೆಯರ ಕುರಿತಾದ ಕಟ್ಟುಪಾಡುಗಳು, ಶೋಷಣೆ ಎಲ್ಲವನ್ನು ಕನ್ನಡ ಲೋಕಕ್ಕೆ ಪರಿಚಯಿಸಿದವರಲ್ಲಿ ಲೇಖಕಿ ಸಾರಾ ಅಬೂಬಕ್ಕರ್ ಅವರು ಪ್ರಮುಖರಾಗಿದ್ದಾರೆ.

ಎಂ.ಫಿಲ್. ಪದವಿಯ ಅಧ್ಯಯನದಲ್ಲಿ ನಿಬಂಧ ರಚನೆಯ ನಿಯಮವಿರುವುದರಿಂದ ನನಗೆ "ಸಾರಾ ಅಬೂಬಕ್ಕರ್ ಅವರ ಕಾದಂಬರಿಗಳಲ್ಲಿ ಸಂವೇದನೆಯ ಸ್ವರೂಪ" ಎಂಬ ಶೀರ್ಷಿಕೆಯಡಿ ನಿಬಂಧ ರಚನೆಗೆ ಅವಕಾಶ ದೊರೆಯಿತು. ಕಣ್ಣೆದುರಿಗೇ ಇರುವ ಒಂದು ಧರ್ಮವೇ ಆದರೂ ನಿಗೂಢವಾಗಿಯೇ ಉಳಿದ ಇಸ್ಲಾಂ ಧರ್ಮದ ನೀತಿ–ನಿಯಮ, ಸಂಪ್ರದಾಯ, ಆಚರಣೆಗಳ ಒಳಹೊಕ್ಕು ಆಳವಾಗಿ ಅಧ್ಯಯನ ಮಾಡಬೇಕೆಂಬ ಆಸಕ್ತಿ ಈ ಒಂದು ವಿಷಯದ ಆಯ್ಕೆಗೆ ಕಾರಣವಾಯಿತು. ಎಲ್ಲಾ ಧರ್ಮಗಳಲ್ಲಿಯೂ ಸ್ತ್ರೀ ಶೋಷಣೆಯೆಂಬುದು ಅವ್ಯಾಹತವಾಗಿ ನಡೆಯುತ್ತಲೇ ಇದೆಯಾದರೂ, ಇಸ್ಲಾಂ ಧರ್ಮದಲ್ಲಿ ಸ್ತ್ರೀಯರಿಗಿರುವ ಕೆಲವು ವಿಶಿಷ್ಟ ಸಮಸ್ಯೆಗಳು ಹಾಗೂ ತೀರಾ ಭಿನ್ನವಾದ ಸಂದಿಗ್ಧತೆಯ ಸಂಕೀರ್ಣ ಸನ್ನಿವೇಶಗಳಿಂದ ಅಲ್ಲಿನ ಸ್ತ್ರೀಯರು ಅನುಭವಿಸುತ್ತಿರುವ ಶೋಷಣೆ, ಸಂಕಟಗಳು ಆಸಕ್ತಿ ಕುತೂಹಲಕ್ಕೆ ಹಾದಿ ಮಾಡಿದವು. ಈ ನಿಟ್ಟಿನಲ್ಲಿ ನೆಚ್ಚಿನ ಪೂಜ್ಯ ಗುರುಗಳಾದ ಡಾ. ಪಿ.ಕೆ. ರಾಜಶೇಖರ್‌ರವರ ಮಾರ್ಗದರ್ಶನದಲ್ಲಿ ಈ ನಿಬಂಧ ರೂಪುಗೊಂಡಿದೆ.

ಸಾರಾ ಅಬೂಬಕ್ಕರ್ ಅವರ 'ಚಂದ್ರಗಿರಿಯ ತೀರದಲ್ಲಿ', 'ಸಹನಾ', 'ವಜ್ರಗಳು', 'ಕದನ ವಿರಾಮ', 'ತಳ ಒಡೆದ ದೋಣಿಯಲಿ', 'ಪ್ರವಾಹ–ಸುಳಿ', 'ಪಂಜರ'– ಇವೇ ಮೊದಲಾದ ಕಾದಂಬರಿಗಳಲ್ಲಿ ನನ್ನ ಆಯ್ಕೆಯ ನಿಬಂಧದ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಕಾದಂಬರಿಗಳನ್ನು ಆರಿಸಿಕೊಂಡು ಅಧ್ಯಯನದ ದೃಷ್ಟಿಯಿಂದ ಮುಖ್ಯವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅವುಗಳಲ್ಲಿ 'ಚಂದ್ರಗಿರಿಯ ತೀರದಲ್ಲಿ', 'ಸಹನಾ', 'ವಜ್ರಗಳು'– ಈ ಮೂರು ಕಾದಂಬರಿಗಳನ್ನು ಪ್ರಧಾನ ಭೂಮಿಕೆಯಲ್ಲಿ ತೆಗೆದುಕೊಂಡು ವಿಶ್ಲೇಷಿಸಲಾಗಿದೆ. ಏಕೆಂದರೆ ಈ ಕಾದಂಬರಿಗಳಲ್ಲೇ ಮುಸ್ಲಿಂ ಸಮಾಜದ, ಸಂಸ್ಕೃತಿಯ, ಕಟ್ಟುಪಾಡುಗಳ, ಶೋಷಣೆಯ ದಟ್ಟ ಚಿತ್ರಣವಿರುವುದರಿಂದ ಇವುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕಲ್ಪಿಸಲಾಗಿದೆ.

ಈ ಕಾದಂಬರಿಗಳ ವಸ್ತು ಸ್ತ್ರೀ ಶೋಷಣೆಯಾಗಿದ್ದು, ಸುಲಭದ ತಲಾಖ್ ಪದ್ಧತಿ, ಪರಿಹಾರವಾಗಿ ಬಳಕೆಯಾಗುತ್ತಿರುವ ಒಂದು ದಿನದ ಮದುವೆ, ಬಹುಪತ್ನಿತ್ವ, ಇವೇ ಮೊದಲಾದ ಮಹಿಳೆಯ ಗೋಳಿನ ಕಥೆಗಳನ್ನು ಇಲ್ಲಿ ಪ್ರಧಾನವಾಗಿ ಬಿಂಬಿಸಲಾಗಿದೆ. ಧರ್ಮಶಾಸ್ತ್ರಗಳನ್ನು ತಪ್ಪಾಗಿ ಅರ್ಥೈಸಿಕೊಂಡು, ಸ್ತ್ರೀಯರ ಶೋಷಣೆಯ ಅಸ್ತ್ರವನ್ನಾಗಿ

ಧರ್ಮವನ್ನು ಬಳಸಿಕೊಂಡಿದ್ದರ ಭೀಷ್ಣತೆಯ ಅರಿವನ್ನು ಮೂಡಿಸಲು ಈ ಕಾದಂಬರಿಗಳ ಮೂಲಕ ಲೇಖಕರು ಪ್ರಯತ್ನಿಸಿದ್ದಾರೆ. ಹಾಗೆಯೇ ಧಾರ್ಮಿಕ ನೀತಿ-ನಿಯಮಗಳನ್ನು ಗಾಳಿಗೆ ತೂರಿದ ಸ್ವಾರ್ಥ ಸಮಾಜದ ಕಟ್ಟುಪಾಡುಗಳನ್ನು ತಮ್ಮ ಕಾದಂಬರಿಗಳ ಕೇಂದ್ರವಾಗಿರಿಸಿಕೊಂಡ ಲೇಖಕರು, ಆ ಮೂಲಕ ಸಾತ್ವಿಕ ಕ್ರೋಧದಿಂದ ವ್ಯಂಗ್ಯವಾಡುತ್ತಾ, ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನಗಳ ಸುಧಾರಣೆಗೆ ಕಾಳಜಿ ವಹಿಸಿರುವುದನ್ನು ಈ ಕಾದಂಬರಿಗಳಲ್ಲಿ ಕಾಣಬಹುದು.

ಪ್ರಸ್ತುತ ನಿಬಂಧದಲ್ಲಿ ಮುಸ್ಲಿಂ ಮಹಿಳೆಯರ, ಸಮಾಜದ ಕುರಿತ ಅಧ್ಯಯನಕ್ಕೆ ತೊಡಗಿರುವುದರಿಂದ 'ಕದನ ವಿರಾಮ', 'ಪಂಜರ', 'ತಳಒಡೆದ ದೋಣಿಯಲಿ' ಈ ಕಾದಂಬರಿಗಳು ಈ ವ್ಯಾಪ್ತಿಯಿಂದ ಹೊರಗುಳಿಯುತ್ತವೆ. 'ಕದನ ವಿರಾಮ' ಕಾದಂಬರಿಯು ಸ್ತ್ರೀ ಸಂವೇದನೆಯ ದೃಷ್ಟಿಯಿಂದ ಪ್ರಾಮುಖ್ಯತೆ ಪಡೆಯುತ್ತದೆ. ತುಂಬಾ ಸ್ವಚ್ಛಂದವಾಗಿ ಬೆಳೆದ, ಯಾವುದೇ ಕೊರತೆಗಳ ಅನುಭವವೂ ಇಲ್ಲದ ಹೆಣ್ಣೊಬ್ಬಳು, ತನ್ನ ದುಡುಕಿನ ಪರಿಣಾಮವಾಗಿ ಬದುಕಿನಲ್ಲಿ ಅಂತ್ಯ ಕಾಣುವ ಚಿತ್ರಣ ಈ ಕಾದಂಬರಿಯಲ್ಲಿದೆ. ಆಕೆಯ ಕಷ್ಟ-ಕಾರ್ಪಣ್ಯಗಳು, ಮನೋವೇದನೆಗಳು, ಅಸಹಾಯಕ ಸ್ಥಿತಿಗಳು, ಕೊನೆಗೆ ಬದುಕ ಬವಣೆ ಸಾಕೆನಿಸಿ ಆತ್ಮಹತ್ಯೆಯ ಮೂಲಕ ಎಲ್ಲ ಸಮಸ್ಯೆಗಳಿಗೆ ವಿರಾಮ ಹೇಳುವ ಕಥಾವಸ್ತು 'ಕದನ ವಿರಾಮ'ದ್ದು. ಇಲ್ಲಿನ ಸಮಸ್ಯೆಗಳ ಕೇಂದ್ರ ಸ್ತ್ರೀಯೇ ಆದರೂ, ಇವು ಆಕೆಯೇ ತನ್ನ ಆತುರದ ನಿರ್ಧಾರಗಳಿಂದ ಸೃಷ್ಟಿಸಿಕೊಂಡಂತಹವು. ಇಸ್ಲಾಂ ಸಮಾಜದಲ್ಲಿನ ಸ್ತ್ರೀಯರ ಶೋಷಣೆಯ ಸ್ವರೂಪವನ್ನು ಇಲ್ಲಿ ಕಾಣಲಾಗುವುದಿಲ್ಲ. ಈ ಕಾರಣದಿಂದಾಗಿ ಈ ಕಾದಂಬರಿಯನ್ನು ಪ್ರಸ್ತುತ ಅಧ್ಯಯನ ವ್ಯಾಪ್ತಿಗೆ ಒಳಪಡಿಸಲಾಗಿಲ್ಲ.

ಮತ್ತೊಂದು ಕಾದಂಬರಿ 'ಪಂಜರ'ವೂ ಕೂಡ ಸ್ತ್ರೀ ಸಂವೇದನಾ ವಸ್ತುವುಳ್ಳ ಕಾದಂಬರಿಯಾಗಿದೆ. ವೈವಾಹಿಕ ಸಂಬಂಧದಿಂದಾಚೆಗೆ ಜನಿಸುವ ಮಕ್ಕಳ ಸಮಸ್ಯೆ ಮತ್ತು ಆ ಮಗುವಿನ ಜನ್ಮದಾತೆಯ ಅಸಹಾಯಕತೆ, ಯಾತನೆಗಳು ಇಲ್ಲಿ ಮುಖ್ಯವಾಗಿವೆ. ಸ್ತ್ರೀಪರ ಕಾಳಜಿಯ ದೃಷ್ಟಿಯಿಂದ ಇದು ಪ್ರಾಮುಖ್ಯತೆ ಪಡೆಯುತ್ತದೆ.

'ತಳ ಒಡೆದ ದೋಣಿಯಲಿ' ಕೃತಿಯು ಲೇಖಕರ ವೈಯಕ್ತಿಕ ಬದುಕಿನ ಚಿತ್ರಣದ ಜೊತೆಗೆ ಔದ್ಯೋಗಿಕ ಜೀವನದಲ್ಲಿ ಎದುರಾಗುವ ರಾಜಕೀಯ ಕುತಂತ್ರಗಳ ಸುತ್ತ ಹೆಣೆದುದಾಗಿದೆ. ಮತ್ತೊಂದು ಕಾದಂಬರಿ 'ಪ್ರವಾಹ-ಸುಳಿ'ಯು ಮುಸ್ಲಿಂ ಸಮಾಜದ ಮತ್ತೊಂದು ಮುಖವನ್ನು ಚಿತ್ರಿಸುವ ಕಥಾವಸ್ತುವಾಗಿದೆ. ಇಲ್ಲಿಯೂ ಬಹುಪತ್ನಿತ್ವ ಪುರುಷ ಸಮಾಜದ ದೌರ್ಜನ್ಯ, ವ್ಯಭಿಚಾರ, ಸ್ತ್ರೀಯರ ಬವಣೆಗಳು ಬಿಂಬಿತವಾಗಿವೆಯಾದರೂ ಅವುಗಳಿಗೆ ಹೆಚ್ಚಿನ ಪ್ರಾಶಸ್ತ್ಯ ದೊರೆತಿಲ್ಲ. ಕಳ್ಳಸಾಗಾಣಿಕೆ, ಮಾಧಕ ದ್ರವ್ಯ ಮಾರಾಟ

ಜಾಲ, ಕಪ್ಪು ಹಣದಿಂದ ಕೊಬ್ಬಿದ ಪುರುಷ ಸಮಾಜ ಇವೇ ಈ ಕಾದಂಬರಿಯ ಮುಖ್ಯ ವಾಹಿನಿಯಲ್ಲಿ ಪ್ರವಹಿಸುತ್ತವೆ. ಈ ಕಾರಣದಿಂದಾಗಿ ಈ ಕಾದಂಬರಿಯನ್ನು ಆಳವಾಗಿ ಪರಾಮರ್ಶಿಸಲು ಹೋಗಿಲ್ಲ.

ಈ ಎಲ್ಲಾ ಮಿತಿಗಳಿರುವ ಕಾರಣ ಈ ಕಾದಂಬರಿಗಳನ್ನು ಮುಖ್ಯವಾಗಿ ಆಧರಿಸದೆ ಕೈಬಿಡಲಾಗಿದೆ. ಆದರೆ ಉಳಿದಂತೆ 'ಚಂದ್ರಗಿರಿಯ ತೀರದಲ್ಲಿ', 'ಸಹನಾ', 'ವಜ್ರಗಳು' ಈ ಕಾದಂಬರಿಗಳು ಈ ಅಧ್ಯಯನಕ್ಕೆ ಪೂರಕ ವಿಚಾರಗಳನ್ನು ಒದಗಿಸುತ್ತವೆ. ಇಲ್ಲಿ ಚರಿತ್ರೆಯುದ್ದಕ್ಕೂ ಗಂಡಸರು ಹೆಂಗಸರ ಮೇಲಿನ ತಮ್ಮ ದಬ್ಬಾಳಿಕೆಯನ್ನು ನ್ಯಾಯ ಬದ್ಧಗೊಳಿಸಲು ಧರ್ಮವನ್ನು ದಾಳವಾಗಿಸಿಕೊಂಡಿರುವುದನ್ನು, ಹಾಗೆಯೇ ಇಸ್ಲಾಂ ಧರ್ಮವು ಬಹುಪತ್ನಿತ್ವಕ್ಕೆ ಧರ್ಮ ಸಮ್ಮತಿಯ ಮುದ್ರೆ ಒತ್ತಿರುವುದರಿಂದ, ಸ್ತ್ರೀಯರ ಅನೇಕ ಸಮಸ್ಯೆಗಳಿಗೆ ಕಾರಣವಾಗಿರುವುದನ್ನು ಸಾರಾ ಅವರು ಬೆಳಕಿಗೆ ತಂದಿದ್ದಾರೆ.

ಪ್ರಸ್ತುತದಲ್ಲಿ ಸ್ತ್ರೀಯರನ್ನು ಶೋಷಣೆಗೆ ಗುರಿಪಡಿಸುತ್ತಿರುವ ಅನೇಕ ಪ್ರಸಂಗಗಳನ್ನು ಆಧಾರವಾಗಿಟ್ಟುಕೊಂಡು ಲೇಖಕರು ತಾವು ಕಂಡು ಕೇಳಿದ, ಸತ್ಯ ಸಂಗತಿಗಳನ್ನು ಯಾವುದೇ ಕಲ್ಪನೆಗೆ ಅವಕಾಶವಿಲ್ಲದಂತೆ, ವಸ್ತುಸ್ಥಿತಿಯ ಸರಳ, ನೇರ ಅಭಿವ್ಯಕ್ತಿಯನ್ನು ತಮ್ಮ ಈ ಕಾದಂಬರಿಗಳಲ್ಲಿ ತಂದಿದ್ದಾರೆ. ಈ ಕಾದಂಬರಿಗಳನ್ನು ಆಧರಿಸಿ, ಹಲವು ಅಧ್ಯಾಯಗಳಡಿಯಲ್ಲಿ ಮುಸ್ಲಿಂ ಸಮಾಜವನ್ನು ಇಲ್ಲಿ ಪರಾಮರ್ಶಿಸಲಾಗಿದೆ.

ಈ ನಿಗದಿತ ನಿಬಂಧದ ವಿಷಯವನ್ನು ಮುಖ್ಯವಾಗಿ ಐದು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ. ಪ್ರತಿಯೊಂದು ಅಧ್ಯಾಯಗಳ ವ್ಯಾಪ್ತಿಯಲ್ಲಿಯೂ ಒಂದೊಂದು ಪ್ರಮುಖ ಅಂಶವನ್ನು ಮುನ್ನೆಲೆಗೆ ತೆಗೆದುಕೊಂಡು ಅಧ್ಯಯನ ಮಾಡುವ ಪ್ರಯತ್ನ ಮಾಡಲಾಗಿದೆ. ಸಾರಾ ಅವರ ಕಾದಂಬರಿಗಳಲ್ಲಿ ವ್ಯಕ್ತವಾಗಿರುವ ಮುಸ್ಲಿಂ ಸಮಾಜ, ಮುಸ್ಲಿಂ ಮಹಿಳೆಯರ ಶೋಷಣೆಗಳು, ಧಾರ್ಮಿಕ ಕಟ್ಟು–ಪಾಡುಗಳು ಹಾಗೂ ಪ್ರತಿಭಟನೆ ಹೀಗೆ ಹಲವು ಹಂತಗಳಲ್ಲಿ ಮುಸ್ಲಿಂ ಸಮಾಜದ ಪ್ರಮುಖ ಸಮಸ್ಯೆಗಳನ್ನು ಪ್ರಸ್ತುತ ನಿಬಂಧದ ವ್ಯಾಪ್ತಿಯಲ್ಲಿ ಚರ್ಚಿಸಲಾಗಿದೆ.

ಜೊತೆಗೆ ನಿಬಂಧದ ಆರಂಭದಲ್ಲಿ ಲೇಖಕರ ಮತ್ತು ಅವರ ಕೃತಿಗಳ, ವೈಯಕ್ತಿಕ ಜೀವನದ ಕಿರು ಪರಿಚಯ ಮಾಡಿ, ನಂತರ ಸಂವೇದನೆಯ ಕುರಿತು ಮತ್ತು ಅವುಗಳ ಪ್ರಕಾರಗಳಿಗೆ ಸಂಬಂಧಿಸಿದಂತೆ ಸ್ಥೂಲ ಅವಲೋಕನದ ಪ್ರಯತ್ನ ಮಾಡಲಾಗಿದೆ. ಆದರೆ ಪ್ರಧಾನವಾಗಿ ಮುಸ್ಲಿಂ ಸಮಾಜದ ಎಲ್ಲಾ ಮುಖಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸುವ ಚಿಕ್ಕ ಪ್ರಯತ್ನ ಮಾಡಲಾಗಿದೆ ಎಂಬುದನ್ನಿಲ್ಲಿ ಸ್ಪಷ್ಟಪಡಿಸುತ್ತೇನೆ.

ಅಧ್ಯಾಯ – ೨

ಸಾರಾ ಅಬೂಬಕ್ಕರ್‌ರವರ ವ್ಯಕ್ತಿ ಚಿತ್ರ / ಬದುಕು – ಬರಹ

ಕನ್ನಡ ಸಾರಸ್ವತ ಲೋಕಕ್ಕೆ ದಲಿತ-ಬಂಡಾಯ ಸಾಹಿತ್ಯದೊಡನೆ ಹೊಸದೊಂದು ಕ್ರಾಂತಿಕಾರಕ ಅಲೆ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿತು. ಇಸ್ಲಾಂ ಸಂವೇದನೆಯುಳ್ಳ ಕಾವ್ಯ ಹತ್ತೊಂಬತ್ತನೇ ಶತಮಾನದ ಶಿಶುನಾಳ ಷರೀಫರಿಂದ ಮೊದಲಿಗೆ ಆರಂಭವಾಯಿತಾದರೂ, ಆತ್ಮ-ಅಧ್ಯಾತ್ಮಗಳ ಕುರಿತಾದ ಅವರ ಕಾವ್ಯದಲ್ಲಿ ಇಸ್ಲಾಂ ಸಂಸ್ಕೃತಿಯ ಬೇರುಗಳನ್ನು ಹುಡುಕುವುದು ಸಮಂಜಸವಲ್ಲ.

ನವೋದಯ ಕಾಲದಲ್ಲಿ ಹೊರಹೊಮ್ಮಿದ ಅಕ್ಬರ್‌ಅಲಿಯವರು ಚುಟುಕುಗಳಲ್ಲಿ ಕೃಷಿ ಮಾಡಿದ್ದಾರೆ. ಇವರ ಕೃತಿಗಳಲ್ಲಿ ಸಮಕಾಲೀನ ಪ್ರಜ್ಞೆ, ಸ್ವಾತಂತ್ರ್ಯಾನಂತರದ ಕೋಮುಗಲಭೆ, ಅಸ್ವಸ್ಥ ಮನಗಳ ಚಿತ್ರಣಗಳೆಲ್ಲವೂ ಹಾಸುಹೊಕ್ಕಾಗಿವೆ. ನಂತರ ಬಂದ ನಿಸಾರ್ ಅಹಮದ್‌ರವರು ಕಾವ್ಯ-ಕವಿತೆಗಳಲ್ಲಿ ಹೆಸರು ಮಾಡಿದವರು.

ಆದರೆ ಎಪ್ಪತ್ತರ ದಶಕದಿಂದೀಚೆಗೆ ಅದುವರೆಗೆ ಅಪರಿಚಿತವಾಗಿದ್ದ, ಸದಾ ಬುರ್ಖಾದೊಳಗೇ ಅಡಗಿರುತ್ತಿದ್ದ, ಮೂರು ಬಾರಿ ತಲಾಖ್ ಹೇಳಿದರೆ ಗಂಡನಿಂದ ಬಿಡುಗಡೆ ಎಂದು ಭಾವಿಸಿದ್ದ ಮುಸ್ಲಿಂ ಸ್ತ್ರೀ ಜಗತ್ತು ಅನಾವರಣಗೊಂಡಿತು. ಅಲ್ಲಿಯವರೆಗೆ ನಿರ್ಲಕ್ಷ್ಯಕ್ಕೊಳಗಾಗಿದ್ದು ಅದುಮಿಟ್ಟ ಧ್ವನಿಗಳು ಕೊರಳೆತ್ತಿ ನುಡಿದಾಗ ಅಜ್ಞಾತವಾಗಿದ್ದ ಮುಸ್ಲಿಂ ಜನಾಂಗದ ಸಮಾಜ-ಸಂಸ್ಕೃತಿಗಳ ಒಳನೋಟಗಳು ಬಿಚ್ಚಿಕೊಂಡವು. ಕನ್ನಡ ಸಾಹಿತ್ಯಕ್ಕೆ ಈ ಸಂಸ್ಕೃತಿಯನ್ನು ತೆರೆದಿಡುವಲ್ಲಿ ಬಂಡಾಯ ಸಾಹಿತಿಗಳ ಪಾತ್ರ ಮಹತ್ವದ್ದಾಗಿದೆ.

ಈ ಮುಸ್ಲಿಂ ಮಹಿಳಾ ಸಂವೇದನೆಗಳನ್ನು ಆ ಧರ್ಮದ ಮಹಿಳೆಯರು ಅನಾವರಣಗೊಳಿಸಿದಂತೆ ಆ ಧರ್ಮದ ಪುರುಷರೂ ಸಹ ಅನಾವರಣಗೊಳಿಸಿದ್ದಾರೆ. ಅಲ್ಲದೆ ಮುಸ್ಲಿಮೇತರರೂ ಕೂಡಾ ಆ ಮಹಿಳೆಯರ ಕುರಿತು ಬರೆದಿದ್ದಾರೆ. ಆದರೆ, ಮುಸ್ಲಿಂ ಮಹಿಳೆಯ ದಟ್ಟ ಅನುಭವಗಳನ್ನು ಅತ್ಯಂತ ಸರಳ ಶೈಲಿಯಲ್ಲಿ ಕನ್ನಡ ಸಾಹಿತ್ಯಕ್ಕೆ ಒಪ್ಪಿಸಿದ ಮಹಿಳೆಯರು ಬಂಡಾಯ ಮೂಲದಿಂದ ಬಂದವರೆಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹಿಂದೆಂದೂ ಕಾಣದಷ್ಟು ಸಂಖ್ಯೆಯಲ್ಲಿ ಕವಿಗಳೂ, ಕವಯಿತ್ರಿಯರು ಮುಸ್ಲಿಂ ಸಮುದಾಯದಿಂದ ಬಂದಿದ್ದು ಈ ಸಂದರ್ಭದಲ್ಲಿಯೇ. ಈ ದೃಷ್ಟಿಯಿಂದ ಸಾರಾ ಅಬೂಬಕ್ಕರ್, ಬಾನು ಮುಷ್ತಾಖ್, ಕೆ. ಷರೀಫಾ, ಸಬಿಹಾ ಭೂಮಿಗೌಡ ಪ್ರಮುಖ ಲೇಖಕಿಯರು. ಸಂಪ್ರದಾಯಬದ್ಧ ವ್ಯವಸ್ಥೆಯಲ್ಲಿ ತಲೆದೋರುವ ಅಡ್ಡಿ-ಆತಂಕಗಳನ್ನು ನಿವಾರಿಸಿಕೊಳ್ಳುವುದರೊಂದಿಗೆ, ತನ್ನ ಧರ್ಮದ ಕಟ್ಟುಪಾಡುಗಳನ್ನು

ಮೀರುತ್ತಲೇ, ಹೊಸ ಸಂಸ್ಕೃತಿಯೊಂದನ್ನು ಹುಟ್ಟು ಹಾಕಬೇಕಾದ ಗುರುತರ ಜವಾಬ್ದಾರಿ ಈ ಎಲ್ಲಾ ಮುಸ್ಲಿಂ ಮಹಿಳಾ ಬರಹಗಾರರ ಹೆಗಲ ಮೇಲಿದೆ.

ಕನ್ನಡ ಸಾಹಿತ್ಯ ಕಂಡ ಅಪರೂಪದ ಮುಸ್ಲಿಂ ಲೇಖಕಿಯರಲ್ಲಿ ಕರಾವಳಿ ತೀರದವರಾದ ಸಾರಾ ಅಬೂಬಕ್ಕರ್ ಒಬ್ಬರು. ಇವರ ಬರಹಗಳಲ್ಲಿ ಕರಾವಳಿ ತೀರದ ಮಲಯಾಳಂ ಭಾಷೆಯ ಪ್ರಭಾವವನ್ನು ಗುರುತಿಸಬಹುದು. ಮೂಲತಃ ಮಲೆಯಾಳಂ ಮೂಲದವರಾದ ಸಾರಾ ಅವರು ತಮ್ಮ ಸ್ವ-ವಿವರಗಳಾದ ಮನೆತನ, ತಂದೆ-ತಾಯಿ, ಕೌಟುಂಬಿಕ ಬದುಕಿನ ಹಿನ್ನೆಲೆಯನ್ನು ಅವರ ಆತ್ಮಕಥೆಯಾದ "ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು" ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ. ಓದುಗರಿಗೆ ಈ ಮೂಲಕ ತಮ್ಮ ಪುಟ್ಟ ಪರಿಚಯವನ್ನು ಮಾಡಿಕೊಡುತ್ತಾ, ಜೀವನದ ಆಗು-ಹೋಗುಗಳ ಕುರಿತು ಕೆಲವು ಅಮೂಲ್ಯ ಮಾಹಿತಿಗಳನ್ನು ಒದಗಿಸಿದ್ದಾರೆ.

ಇವರ ಬಾಲ್ಯಜೀವನದ ಕುರಿತು ಅವಲೋಕಿಸುವುದಾದರೆ...

ಇವರು ಕಾಸರಗೋಡಿನ ಚಮನಾಡು ಗ್ರಾಮದವರು. ಈ ಊರಿನ ಸುಪ್ರಸಿದ್ಧ ಪುದಿಯಪುರ ಮನೆತನದಲ್ಲಿ ಹೆಣ್ಣು ಮಕ್ಕಳಿಗಾಗಿ ದೇವರಲ್ಲಿ ಹರಕೆ ಹೊತ್ತು, ಕಾಡಿ-ಬೇಡಿ ಹಂಬಲಿಸಿ ಸುಸ್ತಾಗಿದ್ದ ಕುಟುಂಬವೊಂದರಲ್ಲಿ ಇವರ ಜನನವಾಯಿತು. ಅದೂ ಮಹಮದ್ ಪೈಗಂಬರರು ಹುಟ್ಟಿದ ಪವಿತ್ರ ದಿನವಾದ ರಬ್ಬಿಯಲ್ ಅವ್ವಲ್ (ಮುಸ್ಲಿಂ ತಿಂಗಳು) ೧೨ನೇ ದಿನದಂದೇ ಇವರೂ ಜನಿಸಿದ್ದು ವಿಶೇಷವಾಗಿದೆ.

ಇವರ ತಂದೆ ಪಿ. ಮಹಮದ್, ತಾಯಿ ಜೈನಾಬಿ, ಸಂಗಾತಿಯನ್ನಾಗಿ ಪಡೆದು ಕೊಂಡಿದ್ದು ಎಕ್ಸ್‌ಕ್ಯೂಟಿವ್ ಇಂಜಿನಿಯರ್ ಎಂ. ಅಬೂಬಕ್ಕರ್ ಅವರನ್ನು. ಇವರದು ಅಜ್ಜ-ಅಜ್ಜಿ, ಐದು ಜನ ಚಿಕ್ಕಪ್ಪಂದಿರು, ಮೂರು ಜನ ಅಣ್ಣಂದಿರು, ಇಬ್ಬರು ತಮ್ಮಂದಿರು, ನಾಲ್ಕು ಜನ ಗಂಡು ಮಕ್ಕಳನ್ನು ಹೊಂದಿದ ತುಂಬು ಕುಟುಂಬ. ಸಾರಾರವರ ತಂದೆ ಪಿ. ಮಹಮದ್‌ರವರು ಡಬ್ಬಲ್ ಡಿಗ್ರಿ ಗ್ರಾಜುಯೇಟ್ ಮತ್ತು ಬಿ.ಎಲ್. ಶಿಕ್ಷಣದಲ್ಲಿ ಮಹಮಡನ್ ಲಾ ಕಾಲೇಜಿನ (ಮದ್ರಾಸ್ ವಿಶ್ವವಿದ್ಯಾಲಯ) ಸ್ವರ್ಣ ಪದಕ ವಿಜೇತರು. ಆಧುನಿಕ ಚಿಂತನೆ, ವೈಜ್ಞಾನಿಕ ವಿಚಾರಧಾರೆಗಳು, ವೈಚಾರಿಕತೆಯನ್ನು ಮೈಗೂಡಿಸಿ ಕೊಂಡವರು. ಇವರು ಪ್ರಮಾಣಿಕತೆ, ಸುಸಂಸ್ಕೃತ, ಸಭ್ಯ ನಡತೆಯಿಂದಾಗಿ ಹಾಗೂ ನಾಲ್ಕಾರು ಜನೋಪಯೋಗಿ ಕೆಲಸ ಕಾರ್ಯಗಳಿಂದಾಗಿ ಸಮಾಜದಲ್ಲಿ ಗೌರವಾನ್ವಿತ ಸ್ಥಾನವನ್ನು ಪಡೆದ ವ್ಯಕ್ತಿಯಾಗಿದ್ದರು. ಇವರ ಮಾತೃಭಾಷೆ ಮಲೆಯಾಳಂ ಆದರೂ ಕೂಡ ಮಗಳನ್ನು ಕನ್ನಡ ಶಾಲೆಗೆ ಸೇರಿಸುವ ಮೂಲಕ ಶಿಕ್ಷಣಕ್ಕೆ ಪದಾರ್ಪಣೆ ಮಾಡಿಸಿದರು.

ವಿದ್ಯಾವಂತರಾದ ತಂದೆ ಮಗಳನ್ನು ಶಾಲೆಗೆ ಕಳುಹಿಸುವ ಮೂಲಕ ತನ್ನ ಮಗಳು ಎಸ್.ಎಸ್.ಎಲ್.ಸಿ. ಮಟ್ಟದ ವಿದ್ಯಾಭ್ಯಾಸವನ್ನಾದರೂ ಪಡೆಯಲೇಬೇಕು, ತನ್ನ ಮಗಳನ್ನು ನೋಡಿ ಮುಸ್ಲಿಂ ಸಮಾಜದ ಇತರ ಹೆಣ್ಣು ಮಕ್ಕಳೂ ಶಾಲೆಗೆ ಹೋಗಿ ವಿದ್ಯೆ ಪಡೆಯಬೇಕು, ತಮ್ಮ ಅಜ್ಞಾನದ ಕತ್ತಲೆಯ ಕೂಪದಿಂದ ಹೊರಬರಬೇಕು ಎಂಬ ಹೆಬ್ಬಯಕೆ ಅವರದಾಗಿತ್ತು. ಈ ಎಲ್ಲಾ ಜವಾಬ್ದಾರಿ ಸಾರಾರವರ ಮೇಲಿತ್ತು. ಹಾಗೆಯೇ ಶಾಲೆಯಲ್ಲಿಯೂ ಕೂಡ 'ಮುಸ್ಲಿಂ ಹುಡುಗಿ ಮುಟ್ಟಿಸಿಕೋ ಬೇಡ' ಎಂದು ದೂರ ಸರಿಯುವ ಬ್ರಾಹ್ಮಣ ಹಾಗೂ ಕೊಂಕಣಿ ಹುಡುಗಿಯರಿದ್ದರು. ಇವರ ನಡುವೆಯೇ ವಿದ್ಯಾಭ್ಯಾಸ ಮುಂದುವರೆಸಿ, ಅವರೊಡನೆ ಸ್ನೇಹ ಸಂಪಾದಿಸಿಕೊಂಡರು.

ಕರಾವಳಿಯ ತೀರದಲ್ಲಿ ಬೆಳೆದ ಕವಿ ಮನಸ್ಸಿನ ಹುಡುಗಿಗೆ ಸಹಜವಾಗಿಯೇ ಪ್ರಕೃತಿಯೊಂದಿಗೆ ಅವಿನಾಭಾವ ಸಂಬಂಧ ಬೆಳೆದುಬಂದಿತ್ತು. ಚಂದ್ರಗಿರಿ ನದಿ ತೀರದಲ್ಲಿ ಆಡಿ ನಲಿಯುತ್ತಾ ಅದರ ಸೊಬಗು ಸವಿಯುತ್ತಲೇ, ಅದರ ಪ್ರವಾಹ, ನೆರೆಯ ಭೀಕರತೆಗೆ ಮನನೊಂದವರು. ಈ ಎಲ್ಲಾ ಅನುಭವಗಳೂ ಕೂಡಾ ಇವರ ಕತೆ-ಕಾದಂಬರಿಗಳಲ್ಲಿ ಪ್ರಭಾವ ಬೀರಿರುವುದನ್ನು ಕಾಣಬಹುದು.

ಸಾರಾ ಅವರಿಗೆ ಶಿಕ್ಷಣವು ಅವರ ತಂದೆಯವರ ವಿಚಾರವಂತಿಕೆಯ ಫಲವಾಗಿ ದೊರೆತರೆ, ಧಾರ್ಮಿಕತೆಯ ಕುರಿತಾದ ತಿಳುವಳಿಕೆ ಇವರಿಗೆ ದೊರೆತದ್ದು ಕಟ್ಟಾ ಸಂಪ್ರದಾಯಸ್ಥರಾದ ತನ್ನ ಅಜ್ಜ-ಅಜ್ಜಿಯರಿಂದ. ಹಾಗೆಯೇ ಇಸ್ಲಾಂ ಧರ್ಮಗ್ರಂಥಗಳು, ಮುಸ್ಲಿಂ ಪುರಾಣಕತೆಗಳು, ಮಹಮದ್ ಪೈಗಂಬರ್‌ರವರ ಜೀವನ ಚರಿತ್ರೆ, ಸರಳ ಜೀವನ ಇವೇ ಮುಂತಾದವುಗಳ ಕುರಿತಾದ ತಿಳುವಳಿಕೆ ಮತ್ತು ಆಳವಾದ ಅಧ್ಯಯನಗಳು ದೊರೆತದ್ದು, ತಾಯಿ ಜೈನಾಬಿಯವರ ಧಾರ್ಮಿಕ ಶ್ರದ್ಧೆಯಿಂದ. ಎಲ್ಲಕ್ಕಿಂತ ಹೆಚ್ಚಾಗಿ ಇವರ ಮೇಲೆ ತಂದೆ-ತಾಯಿಯರ ವ್ಯಕ್ತಿತ್ವವು ಅಚ್ಚಳಿಯದ ಪ್ರಭಾವ ಬೀರಿರುವುದನ್ನು ಗಮನಿಸಬಹುದು. ತಂದೆಯವರು ಆಧುನಿಕ ಚಿಂತನೆ, ಸುಸಂಸ್ಕೃತ, ಸಭ್ಯ ನಡತೆಯ ಸಾಕಾರವಾಗಿದ್ದರೆ, ತಾಯಿಯವರು ಗಂಡನಿಗೆ ತಕ್ಕ ಹೆಂಡತಿಯಾಗಿ ಮಾನವೀಯತೆ, ಹೃದಯವೈಶಾಲ್ಯತೆಯ ಮೂರ್ತಿವೆತ್ತಂತಿದ್ದರು. ಇವರ ಈ ಗುಣಗಳ ಕುರಿತು ಸಾರಾ ಅವರಿಗೆ ಎಲ್ಲಿಲ್ಲದ ಅಭಿಮಾನ. ಇಂಥ ಒಂದೆರಡು ಘಟನೆಗಳನ್ನು ಇವರು ತಮ್ಮ ಆತ್ಮಕತೆಯಲ್ಲಿ ಚಿತ್ರಿಸುತ್ತಾರೆ.

ಜಾತಿ, ಮತ, ಧರ್ಮಗಳ ಹಂಗಿಲ್ಲದೆ ಇತರರಿಗೆ ಸಹಾಯ ಹಸ್ತ ಚಾಚುವ ನಿಸ್ವಾರ್ಥ ಮನೋಭಾವ ಇವರದು. ನೆರೆಯವರ ಕಷ್ಟ ಸುಖಗಳನ್ನು ತನ್ನವೇ ಎಂಬಂತೆ ಭಾವಿಸಿ ಸಹಾಯಾಸ್ತ ನೀಡುತ್ತಿದ್ದರು. ಒಮ್ಮೆ ನೆರೆಮನೆಯ ಹಿಂದೂ ಕುಟುಂಬದ ಹೆಣ್ಣು

ಮಗಳೊಬ್ಬಳಿಗೆ ಪ್ರಸವ ವೇದನೆಯಾದಾಗ ಪವಿತ್ರ ಖುರಾನನ್ನು ಹಿಂದೂಗಳ ಮನೆಯಲ್ಲಿ ಪಠನೆ ಮಾಡಿ, ಸುಖ ಪ್ರಸವಕ್ಕಾಗಿ ಪ್ರಾರ್ಥನೆ ಮಾಡುವುದರೊಂದಿಗೆ, ಆ ತಾಯಿ ಮಗಳಿಗೆ ಧೈರ್ಯ ತುಂಬುತ್ತಾ, ತಾವೂ ಕಣ್ಣೀರು ಮಿಡಿಯುತ್ತಿದ್ದರು. "ಈ ಒಂದು ದೃಶ್ಯ ನನ್ನ ನೆನಪಿನ ಭಿತ್ತಿಯಲ್ಲಿ ಎಂದೆಂದೂ ಅಳಿಸಲಾರದ ಚಿತ್ರವಾಗಿ ಉಳಿದಿದೆ" ಎಂದು ತಮ್ಮ ತಾಯಿಯವರ ಅಂತಃಕರಣದ ಪರಿಚಯ ಮಾಡಿಸುತ್ತಾರೆ. ಹಬ್ಬ ಹರಿದಿನಗಳಲ್ಲಿ ಇತರ ಕೋಮಿನ ಜನರೊಂದಿಗೆ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಳ್ಳುವ ಹಾಗೂ ಹಿತ್ತಲ ಹಣ್ಣು-ಹಂಪಲುಗಳನ್ನು ಹಂಚಿ ತಿನ್ನುವ ಸೌಹಾರ್ದತೆ ಈ ಎಲ್ಲಾ ಗುಣಗಳೂ ಇವರನ್ನು ಭ್ರಾತೃತ್ವದೆಡೆಗೆ ಚಿಂತಿಸುವಂತೆ ಮಾಡಿದವು.

ಈ ಮೇಲಿನ ಸಂದರ್ಭವನ್ನು ಕುರಿತು ಲೇಖಕಿಯು, "ಒಂದು ಅಸಹಾಯಕಳಾದ ಹೆಣ್ಣು, ತನ್ನ ದುಃಖ, ನೋವನ್ನು ಇನ್ನೊಂದು ಹೆಣ್ಣಿನೊಡನೆ ತೋಡಿಕೊಂಡರೆ, ಇನ್ನೊಂದು ಹೆಣ್ಣು ಅದನ್ನು ಅರ್ಥಮಾಡಿಕೊಂಡು ತನ್ನಿಂದಾದ ರೀತಿಯಲ್ಲಿ ಆ ಹೆಣ್ಣನ್ನು ಸಂತೈಸುತ್ತಿದ್ದ ಇವರು ಮನುಷ್ಯ ಹೃದಯವನ್ನು ಹೊತ್ತ ಮಾನವತಾ ಜೀವಿಗಳಾಗಿದ್ದರು."[7] ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಈ ಮಾತುಗಳನ್ನು ನಾವು ಧರ್ಮದ ಹೆಸರಿನಲ್ಲಿ ಪ್ರತಿನಿತ್ಯ ನಡೆಯುತ್ತಿರುವ ಎಲ್ಲಾ ರೀತಿಯ ಧಾರ್ಮಿಕ ಅವಘಡಗಳ ಹಿನ್ನೆಲೆಯಲ್ಲಿ ಗ್ರಹಿಸಬಹುದು.

ಇವೆಲ್ಲದರ ಜೊತೆಗೆ ತನ್ನ ತಾಯಿ ಹಾಡುತ್ತಿದ್ದ ಜಾನಪದ ಹಾಡುಗಳು ಇವರಿಗೆ ತುಂಬಾ ಇಷ್ಟವಾಗುತ್ತಿದ್ದವು. ಅದರಲ್ಲೂ ಮುಸ್ಲಿಮರು ಮದುವೆ ಸಂದರ್ಭದಲ್ಲಿ ಹಾಡುವ, ಕೇರಳದಲ್ಲಿ ಪ್ರಸಿದ್ಧವಾಗಿರುವ **"ಮಾಪ್ಪಿಳ ಪಾಟ್ಟು"** ಮತ್ತು **"ಒಪ್ಪನ ಪಾಟ್ಟು"** ಎಂಬ ಮುಸ್ಲಿಂ ಪುರಾಣದ ಅನೇಕ ಸ್ತ್ರೀ ಪುರುಷರ ಪ್ರಣಯ ಕತೆಗಳನ್ನೊಳಗೊಂಡ ಜಾನಪದ ಹಾಡುಗಳು ಇವರಿಗೆ ಇಂದಿಗೂ ಅಚ್ಚುಮೆಚ್ಚು. ಹೀಗೆ ತಂದೆ-ತಾಯಿಯವರಿಂದ, ಪ್ರೀತಿಯ ಅಣ್ಣ ಪಿ. ಅಬ್ದುಲ್‌ರ ಸಹಕಾರ, ಪ್ರೋತ್ಸಾಹಗಳಿಂದಾಗಿ ಬದುಕಿನಲ್ಲಿ ಬರುವ ಎಲ್ಲಾ ರೀತಿಯ ನೋವು-ನಲಿವುಗಳನ್ನು ದಿಟ್ಟವಾಗಿ ಎದುರಿಸುವ ಆತ್ಮಸ್ಥೈರ್ಯ ಇವರಲ್ಲಿ ಮೂಡಿತು. ಒಟ್ಟಾರೆ ಈ ಎಲ್ಲಾ ವೈಶಿಷ್ಟ್ಯತೆಗಳ ಸಂಗಮವೆಂಬಂತೆ ಸಾರಾ ಅವರಲ್ಲಿ ಒಂದು ಪರಿಪಕ್ವ ವ್ಯಕ್ತಿತ್ವ ರೂಪುಗೊಳ್ಳಲು ಸಹಕಾರಿಯಾಯಿತು.

ಈ ಎಲ್ಲದರ ನಡುವೆ ಮಹತ್ವದ ವಿಷಯವೆಂದರೆ, ಹತ್ತು ವರ್ಷ ದಾಟಿದ ಯಾವ ಮುಸ್ಲಿಂ ಹುಡುಗಿಯೂ ಮನೆಯ ಹೊರಕೋಣೆಗೂ ಬರದಿದ್ದ ಸಂದರ್ಭದಲ್ಲಿ, ಮುಸ್ಲಿಂ ಹುಡುಗಿಯೊಬ್ಬಳು ಘೋಷಾ ಇಲ್ಲದೆ, ಕೊನೆಯಪಕ್ಷ ತಲೆಯ ಮೇಲೆ ಸೆರಗೂ ಇಲ್ಲದೆ ಹಿಂದೂಗಳ ಜೊತೆಯಲ್ಲಿ ಹೈಸ್ಕೂಲು ಕಲಿಯಲು ಹೋಗಿದ್ದು, ಊರಿನ ಸಂಪ್ರದಾಯಸ್ಥ

ಮುಸ್ಲಿಮರಿಗೆ ಸಹಿಸಲಾರದ ವಿಷಯವಾಗಿತ್ತು. ಹೀಗಾಗಿ ಇವರು ಶಿಕ್ಷಣ ಪಡೆಯುವಲ್ಲಿ ಅಡ್ಡಿ–ಆತಂಕಗಳು ಹೆಜ್ಜೆ ಹೆಜ್ಜೆಗೂ ಕಾಡಿದವು. ಈ ಅಸಮಾಧಾನಗಳು ಆಗಾಗ ಸಾರಾ ಅವರ ತಂದೆ–ತಾಯಿಗಳ ಬಳಿಯೇ ಪ್ರಸ್ತಾಪವಾಗುತ್ತಿದ್ದವು. ಅಂಥ ಒಂದು ಸಂದರ್ಭದಲ್ಲಿ ಇವರ ತಂದೆಯವರು, "ಹೆಣ್ಣು ಮಕ್ಕಳಿಗೆ ವಿದ್ಯೆ ಕೊಡಕೂಡದೆಂದು ಖುರಾನಿನಲ್ಲಿ ಹೇಳಿಲ್ಲವಲ್ಲಾ? ಮುಂದಿನ ಜನಾಂಗವನ್ನು ಪೋಷಿಸಿ, ಉತ್ತಮ ಪ್ರಜೆಯಾಗಿ ಮುಂದೆ ತರಬೇಕಾದವಳು ತಾಯಿಯೇ. ಆದುದರಿಂದ ಗಂಡಿಗಿಂತಲೂ ಹೆಣ್ಣಿಗೇ ವಿದ್ಯಾಭ್ಯಾಸದ ಅಗತ್ಯವಿದೆ ಎಂದು ಪೈಗಂಬರರು ಬೋಧಿಸಿದ್ದಾರೆ. ಆದುದರಿಂದ ನನ್ನ ಮಗಳ ವಿದ್ಯಾಭ್ಯಾಸದ ಕುರಿತು ಯಾರೂ ಏನೂ ಹೇಳಬೇಕಾಗಿಲ್ಲ. ನನಗೆ ಸರಿ ಕಂಡಂತೆ ಮಾಡುತ್ತೇನೆ"[9] ಎಂದು ದೃಢವಾಗಿ ಪ್ರತ್ಯುತ್ತರ ನೀಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಓರ್ವ ಪ್ರಜ್ಞಾವಂತ ತಂದೆಯಾಗಿ, ವೈಚಾರಿಕ ಚಿಂತಕರಾಗಿ ಪಿ. ಮಹಮದ್‌ರವರು ಕಂಡುಬರುತ್ತಾರೆ.

ಹೀಗೆ ಹತ್ತು ವರ್ಷ ದಾಟಿದ ಹೆಣ್ಣುಮಕ್ಕಳು ತಮ್ಮ ಧರ್ಮದ ಕಟ್ಟುಪಾಡುಗಳಿಂದಾಗಿ ಅನುಭವಿಸುತ್ತಿದ್ದ ಸಂಕಟ ಹಾಗೂ ಎಳೆತನದ ಆನಂದವನ್ನು ಸವಿಯಲಾರದೆ ಮನೆಯ ನಾಲ್ಕು ಗೋಡೆಗಳ ನಡುವೆ ಬಂಧಿಯಾಗಬೇಕಾಗಿದ್ದ ಅನಿವಾರ್ಯತೆಯನ್ನು ಪ್ರಶ್ನಿಸುವ ಮನೋಭಾವ ಇವರಿಗೆ ಇಲ್ಲಿಂದಲೇ ಚಿಗುರೊಡೆಯುತ್ತದೆ. ಹಾಗೆಯೇ ಮುಸ್ಲಿಂ ಹುಡುಗಿ ಶಾಲೆಗೆ ಹೋಗಿ ವಿದ್ಯೆ ಕಲಿಯುವಲ್ಲಿ ಎದುರಿಸಬೇಕಾದ ಅಡ್ಡಿ–ಆತಂಕಗಳನ್ನು, ಪ್ರತಿರೋಧಗಳನ್ನು ತಮ್ಮ ಕತೆ–ಕಾದಂಬರಿಗಳ ವಸ್ತುವಾಗಿಸಿಕೊಂಡು ಪ್ರತಿಭಟನಾತ್ಮಕ ನೆಲೆಗಟ್ಟಿನಲ್ಲಿ ಚಿತ್ರಿಸುತ್ತಾರೆ.

ಅಷ್ಟೇ ಅಲ್ಲ, ಒಂದು ಸುಶಿಕ್ಷಿತ ಕುಟುಂಬದ ಸದಸ್ಯರಿಂದ ದೊರೆತ ಅಪಾರ ಪ್ರೋತ್ಸಾಹ–ಪ್ರೇರಣೆಗಳಿಂದಾಗಿ, ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆದ ಪ್ರಥಮ ಮುಸ್ಲಿಂ ಹುಡುಗಿ ಎಂಬ ಕೀರ್ತಿಗೆ ಭಾಜನರಾದರು. ದುರದೃಷ್ಟವೆಂಬಂತೆ ಇವರ ವಿದ್ಯಾಭ್ಯಾಸ ಇಲ್ಲಿಗೇ ಕೊನೆಯಾಯಿತು. ಆದರೆ ಅಷ್ಟರಲ್ಲಾಗಲೇ ಇವರೊಳಗೋರ್ವ ಲೇಖಕಿ ಸುಪ್ತವಾಗಿ ತಲೆಎತ್ತಿದ್ದಳು.

ಲೇಖಕಿಯಾಗಿ ಸಾರಾ

ಸಾರಾ ಅವರ ಎದೆಯಾಳದಲ್ಲಿ ನಿರಂತರವಾಗಿ ಸಾಹಿತ್ಯಾಸಕ್ತಿಯೆಂಬುದು ಸಣ್ಣಗೆ ಜಿನುಗುತ್ತಲೇ ಇತ್ತು. ಇದಕ್ಕೆ ರೂಪಕೊಡಲೆತ್ನಿಸಿ ಒಂದೆರಡು ಪತ್ರಿಕೆಗಳಿಗೆ ಕಳುಹಿಸಿದ ಕತೆಗಳು ಬಂದ ದಾರಿಯಲ್ಲೇ ಹಿಂತಿರುಗಿದವು. ಇಲ್ಲಿ ಅವರಿಗೆ ಪ್ರೋತ್ಸಾಹವೇನೂ ದೊರೆಯಲಿಲ್ಲ. ಈ ಕಾರಣದಿಂದಾಗಿ ಇವರ ಸಾಹಿತ್ಯಾಸಕ್ತಿ ಕಮರಿ ಹೋಗುವಂತಿತ್ತು.

ಆದರೂ ಅದಾಗಲೇ ದೇಶದಲ್ಲಿ ಕೋಮು ಘರ್ಷಣೆ ಆರಂಭವಾಗಿದ್ದ ಹಿನ್ನೆಲೆಯಲ್ಲಿ ಇವರ ಯೋಚನಾಲಹರಿ ಕೋಮು ಸೌಹಾರ್ದ ಮೂಡಿಸುವುದು ಹೇಗೆಂಬುದರ ಕಡೆಗೆ ಪ್ರವಹಿಸುತ್ತಿತ್ತು. ಕೊನೆಗೂ ಇವರ ಕನಸು ಸಾಕಾರಗೊಳ್ಳುವ ಕಾಲ ಕೂಡಿಬಂದಿತ್ತು. ಪಿ. ಲಂಕೇಶರು **'ಲಂಕೇಶ್'** ಎಂಬ ಹೆಸರಿನ ಪತ್ರಿಕೆ ಆರಂಭಿಸಿದ್ದರು. ಅದರಲ್ಲಿ ಕೋಮು ಸೌಹಾರ್ದ ಕುರಿತು ಇವರ ಅಂತರಂಗದಲ್ಲಿ ಕುದಿಕೊಂಡ ಭಾವನೆಗಳೆಲ್ಲ ಹೊರಬರಲು ಹಾದಿಮಾಡಿಕೊಟ್ಟಂತಾಯಿತು. ಕೋಮು ಸೌಹಾರ್ದವನ್ನು ಕುರಿತಾದ ಇವರ ಪ್ರಥಮ ಲೇಖನ 'ಲಂಕೇಶ್' ಪತ್ರಿಕೆಯ ಮುಖಪುಟದಲ್ಲಿ ಅಚ್ಚಾಗಿ ಸಾರಾ ಅಬೂಬಕ್ಕರ್ ಎಂಬ ಹೆಸರಿನ ಮುಸ್ಲಿಂ ಲೇಖಕಿಯೊಬ್ಬರು ಕನ್ನಡ ಸಾಹಿತ್ಯ ಲೋಕವನ್ನು ಪ್ರವೇಶ ಮಾಡಲು ನಾಂದಿಯಾಯಿತು. ಅಂದಿನಿಂದ ಆರಂಭವಾದ ಈ ಲೇಖಕಿಯ ಸಾಹಿತ್ಯಯಾತ್ರೆ ಇನ್ನೂ ನಿರಂತರವಾಗಿ ನಡೆಯುತ್ತಲೇ ಇದೆ.

ಇವರ ಹಲವಾರು ಕತೆ, ಕಾದಂಬರಿಗಳಿಗೆ ಈ ಪತ್ರಿಕೆಯೇ ಆಸರೆಯಾಯಿತು. ಸಾರಾ ಅಬೂಬಕ್ಕರ್ ಎಂಬ ಲೇಖಕಿ ರೂಪುಗೊಂಡಿದ್ದು, ಧೀಮಂತ ವ್ಯಕ್ತಿತ್ವದ ಪತ್ರಕರ್ತರಾದ ಪಿ. ಲಂಕೇಶ್‌ರ ನಿರಂತರ ಪ್ರೋತ್ಸಾಹ, ಸಲಹೆ, ಮಾರ್ಗದರ್ಶನದಲ್ಲಿ. ಸಾರಾ ಅವರೇ ಈ ಕುರಿತು "ಲಂಕೇಶರು ಪತ್ರಿಕೆಯ ಮುಖಪುಟದ ಪ್ರಥಮ ಲೇಖನವಾಗಿ ನನ್ನ ಲೇಖನವನ್ನು ಪ್ರಕಟಿಸಿ, ಪ್ರೋತ್ಸಾಹಿಸದಿದ್ದರೆ, ಇಂದು ಸಾರಾ ಅಬೂಬಕ್ಕರ್ ಎಂಬ ಲೇಖಕಿ ಇರುತ್ತಿರಲಿಲ್ಲ" ಎಂದು ವಿನೀತರಾಗಿ ಸ್ಮರಿಸುವ ಲೇಖಕಿ ಲಂಕೇಶರನ್ನು ಗುರುವಾಗಿ ಸ್ವೀಕರಿಸಿದ್ದಾರೆ.

ಹೀಗೆ ಹೊರಹೊಮ್ಮಿದ ಮುಸ್ಲಿಂ ಮಹಿಳೆಯೋರ್ವರು ಲೇಖಕಿಯಾಗಿ ತಮ್ಮ ಅನುಭವಗಳನ್ನು, ಧರ್ಮದ ಹೆಸರಿನಲ್ಲಿ ಹೆಣ್ಣಿನ ಮೇಲೆ ನಡೆಯುತ್ತಿರುವ ದೌರ್ಜನ್ಯ, ದಬ್ಬಾಳಿಕೆ, ಶೋಷಣೆಗಳನ್ನು ಕೃತಿಗಿಳಿಸುವ ಸಂದರ್ಭದಲ್ಲಿ ಹಲವಾರು ಆರೋಪ, ಆಪಾದನೆಗಳನ್ನು ಎದುರಿಸಬೇಕಾಯಿತು. 'ಕತೆ, ಕಾದಂಬರಿಗಳ ಮೂಲಕ ಇವರು ಮುಸ್ಲಿಂ ಸಮಾಜವನ್ನು ಅವಮಾನಿಸುತ್ತಿದ್ದಾರೆ' ಎಂದು ಮುಸ್ಲಿಂ ಮೂಲಭೂತವಾದಿಗಳು ಆರೋಪಿಸಿದಾಗ ಸಾರಾರವರು ತಮ್ಮ ಬರಹದ ಹಿಂದಿನ ಉದ್ದೇಶವನ್ನು ಹೀಗೆ ವ್ಯಕ್ತಪಡಿಸುತ್ತಾರೆ.

"ನಮ್ಮ ಸಮಾಜವನ್ನು ತಿದ್ದುವ ಸಲುವಾಗಿ ನಾನು ಸಮಾಜದ ಕೆಲವು ಕ್ರೂರ ಪದ್ಧತಿಗಳೆಡೆಗೆ ಬೆಳಕು ಚೆಲ್ಲುತ್ತಿದ್ದೇನೆಯೇ ಹೊರತು, ನಾನು ಹುಟ್ಟಿ–ಬೆಳೆದ ಸಮಾಜವನ್ನು ಅವಮಾನಿಸುವುದು ಖಂಡಿತ ನನ್ನ ಉದ್ದೇಶವಲ್ಲ. ಕೊಳೆತ ಭಾಗವನ್ನು ಹಾಗೆಯೇ ಮುಚ್ಚಿಟ್ಟರೆ ಇನ್ನಷ್ಟು ಕೊಳೆತು ಹೋಗುತ್ತದೆ ಎಂಬುದನ್ನು ಈಗಾಗಲೇ ನಾವು

ಮನಗಂಡಿದ್ದೇವೆ. ಆದುದರಿಂದ, ಆ ಭಾಗವನ್ನು ಕಿತ್ತೆಸೆಯಬೇಕಾಗುತ್ತದೆ. ಹಾಗೆ ಕಿತ್ತೆಸೆಯಬೇಕಾದರೆ ಮೊದಲು ಆ ಭಾಗದ ಮೇಲೆ ಬೆಳಕು ಬೀಳಬೇಕು. ಆ ಬೆಳಕು ಚೆಲ್ಲುವ ಕೆಲಸವನ್ನಷ್ಟೆ ನಾನು ಮಾಡುತ್ತಿದ್ದೇನೆ"[೩] ಎಂದು ಹೇಳುವ ಮೂಲಕ ಸಾಹಿತ್ಯವೆಂಬುದು ಸಮಾಜದ ಪ್ರತಿಬಿಂಬವಾಗಬೇಕೆಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ.

ಹಾಗೆಯೇ "ಕೋಮು ಸೌಹಾರ್ದವನ್ನು ಕಾಪಾಡುವುದೂ ಕೂಡಾ ನನ್ನ ಬರವಣಿಗೆಯ ಉದ್ದೇಶಗಳಲ್ಲೊಂದು"[೪] ಎನ್ನುತ್ತಾರೆ ಲೇಖಕಿ. ನೋವು-ನಲಿವುಗಳನ್ನು ಪರಸ್ಪರ ಹಂಚಿಕೊಂಡಾಗ ನಮ್ಮ ನಡುವಿನ ಕಂದರ ಕಿರಿದಾಗಬಹುದು ಎಂಬ ದೂರದ ಆಸೆ ಅವರದು.

ಕೃತಿಗಳ ಕುರಿತು...

ಸಾರಾ ಅವರು ಸ್ತ್ರೀ ಶೋಷಣೆಯನ್ನು ಪ್ರಧಾನ ಅಂಶವನ್ನಾಗಿ ಇಟ್ಟುಕೊಂಡು ಕತೆ-ಕಾದಂಬರಿಗಳನ್ನು ರಚಿಸಿದ್ದಾರೆ. ಈ ಮೂಲಕ ಸಾಹಿತ್ಯ ನಿರ್ಮಾಣವನ್ನು ಮುಸ್ಲಿಂ ಮಹಿಳೆಯರ ವಿಮೋಚನೆಯ ಅಸ್ತ್ರವಾಗಿ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಇವರ ಕೃತಿಗಳ ಭಾಷೆ ಮತ್ತು ನಿರೂಪಣಾ ಶೈಲಿ ತುಂಬಾ ಸರಳವಾದುದು. ಕ್ಲಿಷ್ಟ ಪದಗಳಿಂದ ಕೂಡಿದ ಪ್ರೌಢಭಾಷೆಯನ್ನು ಬಳಸದ ಇವರ ಬರವಣಿಗೆ, ಸಾಮಾನ್ಯ ಮಟ್ಟದ ಓದು-ಬರಹ ಬಲ್ಲ ಎಲ್ಲರೂ ಓದಿ ಅರ್ಥೈಸಿಕೊಳ್ಳಬಲ್ಲ ಭಾಷೆಯಾಗಿದೆ.

'ಚಂದ್ರಗಿರಿಯ ತೀರದಲ್ಲಿ', 'ವಜ್ರಗಳು', 'ಕದನ ವಿರಾಮ', 'ಸುಳಿಯಲ್ಲಿ ಸಿಕ್ಕವರು', 'ಪ್ರವಾಹ-ಸುಳಿ', 'ತಳ ಒಡೆದ ದೋಣಿಯಲಿ', 'ಪಂಜರ', 'ಸಹನಾ' ಇವು ಇವರ ಕಾದಂಬರಿಗಳು. 'ಚಪ್ಪಲಿಗಳು', 'ಪಯಣ', ಅರ್ಧರಾತ್ರಿಯಲಿ ಹುಟ್ಟಿದ ಕೂಸು', 'ಖೆಡ್ಡಾ', ಇವು ಕಥಾ ಸಂಕಲನಗಳು, 'ಲೇಖನ ಗುಚ್ಛ', 'ಅನಾವರಣ' ಇವು ಲೇಖನಗಳ ಸಂಗ್ರಹಗಳು. ಇವರ ಅಮೆರಿಕಾ ಪ್ರವಾಸವನ್ನು ಕುರಿತಾದ ಪ್ರವಾಸ ಕಥನ 'ಐಷಾರಾಮದ ಆಳದಲ್ಲಿ' ಎಂಬುದಾದರೆ, 'ಮನೋಮಿ', 'ಬಲೆ', 'ನಾನಿನ್ನು ನಿದ್ರಿಸುವೆ' ಎಂಬ ಅನುವಾದಿತ ಕಾದಂಬರಿಗಳನ್ನು ಇವರು ಕನ್ನಡಕ್ಕೆ ಪರಿಚಯಿಸಿದ್ದಾರೆ. 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಇದು ಇವರ ಆತ್ಮಕತೆಯಾಗಿದೆ.

ಇವರಿಂದ ಸಂದ ಸಾಹಿತ್ಯ ಕೃಷಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅನುಪಮಾ ನಿರಂಜನ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಸಾಹಿತ್ಯ ಪರಿಷತ್ತಿನ ಮಲ್ಲಿಕಾ ಪ್ರಶಸ್ತಿ, ವರ್ಧಮಾನ ಉದಯೋನ್ಮುಖ ಪ್ರಶಸ್ತಿ ಹಾಗೂ ಹೆಚ್.ವಿ. ಸಾವಿತ್ರಮ್ಮ ದತ್ತಿನಿಧಿ ಬಹುಮಾನಗಳು ಇವರಿಗೆ ಲಭಿಸಿದ್ದು, ಶ್ರೇಷ್ಠ ಮಹಿಳಾ ಲೇಖಕಿಗೆ ಸಲ್ಲುವ ಅಪೂರ್ವವಾದ ಅತ್ತಿಮಬ್ಬೆ ಪ್ರಶಸ್ತಿಯಿಂದ ಇವರು ಪುರಸ್ಕೃತರಾಗಿದ್ದಾರೆ.

ನನ್ನ ಈ ಅಧ್ಯಯನಕ್ಕೆ ಇವರ ಕಾದಂಬರಿಗಳನ್ನಷ್ಟೇ ಆಯ್ಕೆ ಮಾಡಿಕೊಂಡಿರುವುದರಿಂದ ಇವರ ಕಾದಂಬರಿಗಳಲ್ಲಿ ಮುಖ್ಯವಾದವುಗಳನ್ನು ಮಾತ್ರ ಇಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸುತ್ತಿದ್ದೇನೆ.

೧೯೮೪ ರಲ್ಲಿ ರಚನೆಯಾದ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯು ಇವರ ಮಹತ್ವದ ಪ್ರಥಮ ಕಾದಂಬರಿಯಾಗಿದೆ. ಇದು ಮೊದಲು ಲಂಕೇಶ್ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡು, ನಂತರ ಪುಸ್ತಕ ರೂಪ ತಳೆಯಿತು. ಈ ಕಾದಂಬರಿಯ ವಸ್ತು ಮುಸ್ಲಿಂ ವಿಚ್ಛೇದನ ಪದ್ಧತಿಯಾದ 'ತಲಾಖ್' ಧರ್ಮಗ್ರಂಥಗಳಲ್ಲಿರುವುದನ್ನು ಅನುಷ್ಠಾನಕ್ಕೆ ತರುವಾಗ ಹೆಣ್ಣಾದವಳು ನಿತ್ಯಜೀವನದಲ್ಲಿ ಯಾವ ರೀತಿಯ ಮಾನಸಿಕ ಚಿತ್ರಹಿಂಸೆಗೆ ಗುರಿಯಾಗುತ್ತಾಳೆಂದು ತಿಳಿಸುವುದು ಈ ಕಾದಂಬರಿಯ ಮುಖ್ಯ ಉದ್ದೇಶವಾಗಿದೆ.

ಒಂದೇ ಬಾರಿಗೆ ಮೂರು ಬಾರಿ ತಲಾಖ್ ಉಚ್ಚರಿಸಿದರೆ ಎಷ್ಟೋ ವರ್ಷದ ಗಂಡ–ಹೆಂಡತಿಯರ ಸಂಬಂಧ ಮುರಿದು ಬೀಳುವ ಈ ಪದ್ಧತಿಯಲ್ಲಿ ಒಂದು ವೇಳೆ ಅದೇ ಗಂಡಹೆಂಡತಿಯರು ಮತ್ತೆ ಒಂದಾಗಬೇಕೆಂದಾಗ ಧಾರ್ಮಿಕ ತೊಡಕು ಅಡ್ಡ ಬರುತ್ತದೆ. ಈ ಒಂದು ಪದ್ಧತಿಯ ಸಂಪೂರ್ಣ ಚಿತ್ರಣವನ್ನು ಈ ಕಾದಂಬರಿ ಒಳಗೊಂಡಿದೆ.

೧೯೮೫ ರಲ್ಲಿ ಪ್ರಕಟಗೊಂಡ ಎರಡನೇ ಕಾದಂಬರಿ 'ಸಹನಾ', ಪ್ರಾಚೀನ ಕಾಲದಿಂದ ಪ್ರಸ್ತುತದವರೆಗೂ ಸುಗಮವಾಗಿ ಸಾಗಿ ಬಂದಿರುವ ಬಹುಪತ್ನಿತ್ವವೇ ಈ ಕಾದಬಂರಿಯ ವಸ್ತು. ಇತರ ಸಮಾಜಗಳಲ್ಲಿಲ್ಲದ ಒಂದು ಅಂಶವೆಂದರೆ, ಬಹುಪತ್ನಿತ್ವಕ್ಕೆ ಮುಸ್ಲಿಂ ಸಮಾಜದಲ್ಲಿ ಕಾನೂನಿನ ಒಪ್ಪಿಗೆಯಿರುವುದು. ಆದರೆ, ಒಬ್ಬ ಹೆಂಡತಿ ಮತ್ತು ಮಕ್ಕಳನ್ನು ಸಾಕಲಾರದವರು ಎರಡೋ–ಮೂರೋ ಹೆಂಡತಿಯರನ್ನು ಕಟ್ಟಿಕೊಂಡು ತಾವೂ ನರಳುವುದಲ್ಲದೆ, ಅವರನ್ನೂ ನರಕಕ್ಕೆ ನೂಕುವ ದೃಶ್ಯ ಇಂದು ಮುಸ್ಲಿಂ ಸಮಾಜದ ಅದರಲ್ಲೂ ಕೆಳವರ್ಗದವರಲ್ಲಿ ತೀರಾ ಸಾಮಾನ್ಯವಾಗಿದೆ. ಲೇಖಕಿಯು ಇದರ ವಿರುದ್ಧ ತಮ್ಮ ಪ್ರತಿಭಟನೆಯನ್ನು ಈ ಕಾದಂಬರಿಯ ನಾಯಕಿಯ ಪಾತ್ರದ ಮೂಲಕ ವ್ಯಕ್ತಪಡಿಸುತ್ತಾರೆ. ಆ ಮೂಲಕ ಸಮಾಜವನ್ನು ಈ ಅನಿಷ್ಟ ಪದ್ಧತಿಯ ವಿರುದ್ಧ ಬಡಿದೆಬ್ಬಿಸುವ ಉದ್ದೇಶ ಹೊಂದಿದ್ದಾರೆ.

೧೯೮೮ ರಲ್ಲಿ ಪ್ರಕಟಗೊಂಡ ಇವರ ಮೂರನೆಯ ಮತ್ತೊಂದು ಬಹುಮುಖ್ಯ ಕಾದಂಬರಿ 'ವಜ್ರಗಳು'. ಇದು ಮುಸ್ಲಿಂ ಸಮಾಜದಲ್ಲಿ ಧರ್ಮದ ಹೆಸರಿನಲ್ಲಿ ಹೆಣ್ಣಿನ ಮೇಲೆ ನಡೆಯುತ್ತಿರುವ ಶೋಷಣೆಯನ್ನು ಪ್ರತಿಬಿಂಬಿಸುತ್ತದೆ. ಸಮಾರಂಭವೊಂದರಲ್ಲಿ

ಮುಸ್ಲಿಮರೊಬ್ಬರು ಭಾಷಣ ಮಾಡುತ್ತಾ 'ನಮ್ಮ ಮಹಿಳೆಯರನ್ನು ನಾವು ಹೂವಿನಂತೆ ಕಾಪಾಡಿಕೊಳ್ಳುತ್ತೇವೆ, ವಜ್ರದಂತೆ ರಕ್ಷಿಸಿಕೊಳ್ಳುತ್ತೇವೆ' ಎಂದು ಹೇಳುತ್ತಾರೆ. ಆದರೆ ವಾಸ್ತವವಾಗಿ ಸಮಾಜದಲ್ಲಿ ಲೇಖಕರ ಅನುಭವ ಇದಕ್ಕೆ ಭಿನ್ನವಾಗಿತ್ತು. ಅಲ್ಲದೆ 'ಮುಸ್ಲಿಂ ಮಹಿಳಾ ಹಕ್ಕು ರಕ್ಷಣಾ ಮಸೂದೆ' ಎಂಬ ಹೆಸರಿನ ಮಸೂದೆಯೂ ಕೂಡಾ ಮುಸ್ಲಿಂ ಮಹಿಳೆಯರಿಗೆ ಯಾವ ರೀತಿ ಅನ್ಯಾಯ ಮಾಡಿದೆ? ಹೇಗೆ ಮಾರಕವಾಗಿದೆ ಎಂಬುದನ್ನು ಲೇಖಕರು ಈ ಕಾದಂಬರಿಯ ಮೂಲಕ ಚಿತ್ರಿಸಿದ್ದಾರೆ.

ಮೇಲೆ ವಿವರಿಸಿದ ಮೂರು ಕಾದಂಬರಿಗಳು ಮುಸ್ಲಿಂ ಸ್ತ್ರೀಯರ ಬದುಕಿನ ಒಳನೋಟಗಳನ್ನು ಬಿಡಿಸಿ ಹೇಳುವ ಕಾದಂಬರಿಗಳಾದರೆ, ಮತ್ತೊಂದು ಕಾದಂಬರಿ 'ಕದನ ವಿರಾಮ' ವು ತನ್ನ ಒಂದು ದುಡುಕುತನದ ನಿರ್ಧಾರದಿಂದಾಗಿ ಜೀವಮಾನವಿಡೀ ನರಕಯಾತನೆ ಅನುಭವಿಸುವ ಒಂದು ಹೆಣ್ಣಿನ ದುರಂತಮಯ ಬದುಕಿನ ಚಿತ್ರಣ ಹೊಂದಿದೆ. ವೈವಾಹಿಕ ಬದುಕಿಗೆ ಕಾಲಿಡಲು ತವಕಿಸುವ ಎಳೆಯರ ದುಡುಕುತನ ಮತ್ತು ಸೂಕ್ತ ಮಾರ್ಗದರ್ಶನದಲ್ಲಿ ಮಕ್ಕಳನ್ನು ಬೆಳೆಸುವಲ್ಲಿ ವಿಫಲರಾದ ಹೆತ್ತವರು, ಈ ಎಲ್ಲದರ ಪ್ರತಿಫಲವೆಂಬಂತೆ ದಾರುಣವಾಗಿ ಅಂತ್ಯಕಾಣುವ ಮುಗ್ಧ ಬದುಕು. ಇಂತಹ ಒಂದು ಬದುಕಿನ ವಿವರಗಳನ್ನು ಈ ಕಾದಂಬರಿಯಲ್ಲಿ ದಾಖಲಿಸಿದ್ದಾರೆ.

'ಪ್ರವಾಹ–ಸುಳಿ' ಎಂಬುದು ಇವರ ಮತ್ತೊಂದು ಕಾದಂಬರಿ. ಇದು ಯಾವುದೇ ಒಂದು ಪರಿಕಲ್ಪನೆಯನ್ನು ಕುರಿತುದಾಗಿರದೆ, ಒಟ್ಟಾರೆಯಾಗಿ ಮುಸ್ಲಿಂ ಸಮಾಜದ ಎಲ್ಲಾ ರೀತಿಯ ಸಮಸ್ಯೆಗಳನ್ನೂ ಇಲ್ಲಿ ಕಾಣಬಹುದು. ಮುಖ್ಯವಾಗಿ ಕಳ್ಳಸಾಗಾಣಿಕೆ ದಂಧೆ, ಮಾದಕ ದ್ರವ್ಯ ಸಾಗಾಟ, ಪರಿಣಾಮವಾಗಿ ಕಪ್ಪು ಹಣದ ಹುಚ್ಚು ಹೊಳೆಯಲ್ಲಿ ವಿವೇಕ ಕಳೆದುಕೊಂಡ ಕಾದಂಬರಿಯ ನಾಯಕನ ದಾರುಣ ಅಂತ್ಯ, ಈ ಎಲ್ಲದರ ನಡುವೆ ದಿಕ್ಕಾಪಾಲಾದ ಬದುಕು. ಎಲ್ಲವನ್ನೂ ಸಹಿಸಿಕೊಂಡು ವಿಧಿ ಇಲ್ಲದೆ ಇದೇ ನಮ್ಮ ಸುಂದರ ಬದುಕೆಂದು ಭ್ರಮಿಸುವ ಸ್ತ್ರೀ ಜಗತ್ತು..." ಹೀಗೆ ಹಲವಾರು ವಿಭಿನ್ನ ಸಮಸ್ಯೆಗಳ ವಿವರಗಳನ್ನು ಈ ಕಾದಂಬರಿಯಲ್ಲಿ ಕಾಣಬಹುದು.

'ಪಂಜರ' ಎಂಬ ಹೆಸರಿನ ಕಾದಂಬರಿಯು ಮತ್ತೊಂದು ಗಂಭೀರ ಸಮಸ್ಯೆಯ ಮೇಲೆ ಬೆಳಕು ಚೆಲ್ಲುವ ಕಾದಂಬರಿಯಾಗಿದೆ. ಅವಿವಾಹಿತ ತಾಯಿಯೋರ್ವಳು ತನ್ನ ಮಗುವಿನೊಡನೆ ಸಮಾಜದಲ್ಲಿ ಬದುಕಿ ಬಾಳಬೇಕೆಂದಾಗ, ಆಕೆ ಎದುರಿಸಬೇಕಾದ ಹಲವಾರು ಸಮಸ್ಯೆಗಳನ್ನು ಕೇಂದ್ರವಾಗಿರಿಸಿಕೊಂಡು ಈ ಕಾದಂಬರಿಯು ರಚನೆಯಾಗಿದೆ. ಅಂತಹ ತಾಯಿ–ಮಗುವಿಗೆ ನಮ್ಮ ಸಮಾಜ ಕೊಡುವ ಬೆಲೆ, ಗೌರವ ನಮಗೆ ತಿಳಿದೇ ಇದೆ. ಆದರೆ, ಅದಕ್ಕೆ ಕಾರಣಕರ್ತನಾದವನು ಯಾವುದೇ ಕೀಳರಿಮೆಯಿಲ್ಲದೆ ರಾಜಾರೋಷವಾಗಿ

ತಲೆಯೆತ್ತಿ ತಿರುಗುತ್ತಾನೆ. ಇಲ್ಲಿ ಬಲಿಪಶುವಾದವಳು ಒಂದು ಹೆಣ್ಣು. ಈ ಅಸಹಾಯಕ ಹೆಣ್ಣಿನ ಅಂತರಂಗದ ವೇದನೆಗಳಿಗೆ ಸ್ಪಂದಿಸುವ, ಮರುಗುವ ಲೇಖಕಿಯ ಮನಸ್ಸು ಮಾನವೀಯತೆಯ ನೆಲೆಗಟ್ಟಿನಲ್ಲಿ ಕಾದಂಬರಿಯನ್ನು ಚಿತ್ರಿಸುವಲ್ಲಿ ಗೆಲುವು ಪಡೆದಿದೆ.

ಮತ್ತೊಂದು ಕಾದಂಬರಿ 'ತಳ ಒಡೆದ ದೋಣಿಯಲಿ' ಎಂಬುದು ಇವರ ಜೀವನದ ಸ್ವಂತ ಅನುಭವಗಳನ್ನು ಕಾದಂಬರಿಯ ರೂಪಕ್ಕೆ ತಂದುದಾಗಿದೆ. ತುಂಗಭದ್ರಾ ಎಡದಂಡೆಯ ಕಾಲುವೆ ಪ್ರದೇಶದಲ್ಲಿನ ಜನರ ಬದುಕಿನ ಹಲವಾರು ಸಮಸ್ಯೆಗಳನ್ನು ಕುರಿತು ಈ ಕಾದಂಬರಿ ರಚನೆಯಾಗಿದೆ. ಪ್ರಾಮಾಣಿಕ ಅಧಿಕಾರಿಯೊಬ್ಬನು ಭ್ರಷ್ಟ ರಾಜಕೀಯ ವ್ಯವಸ್ಥೆಯಲ್ಲಿ ಯಾವ ರೀತಿ ಬಲಿಪಶುವಾಗುತ್ತಾನೆ ಎಂಬುದನ್ನು ಹೇಳುವುದರೊಂದಿಗೆ, ಜನ ಸಾಮಾನ್ಯರ ಗಮನವನ್ನು ಆದರ್ಶಗಳತ್ತ ಸೆಳೆಯಬೇಕೆಂಬ ಉದ್ದೇಶದಿಂದ ಈ ಕಾದಂಬರಿಯನ್ನು ಬರೆದಿದ್ದಾರೆ.

ಒಟ್ಟಾರೆಯಾಗಿ ಸಾರಾ ಅವರ ಕಾದಂಬರಿಗಳಲ್ಲಿ ಮಹಿಳೆಯೇ ಕೇಂದ್ರಬಿಂದು. ತಲಾಖ್, ಬಹುಪತ್ನಿತ್ವ, ಧಾರ್ಮಿಕ ಹಿಡಿತಗಳು, ನಿಲುಕದೇ ಹೋದ ಸವಲತ್ತುಗಳು, ಅಸಮಾನತೆಯ ನೆರಳಲ್ಲಿ ಬೆಂದ ಸ್ತ್ರೀಯರು, ಮುಸ್ಲಿಂ ಸಮಾಜದ ಬದುಕು ಮತ್ತು ಹಲವಾರು ಕಾರಣಗಳಿಂದ ಸ್ತ್ರೀಯರನ್ನು ಶೋಷಣೆಗೆ ಗುರಿಪಡಿಸುತ್ತಿರುವ ಸಮಾಜದ ಅಮಾನವೀಯ ಮುಖಗಳನ್ನು ಪ್ರಧಾನವಾಗಿರಿಸಿಕೊಂಡು, ತಾವು ಕಂಡು ಕೇಳಿದ ಘಟನೆಗಳನ್ನು ಜೊತೆಗೆ ವೈಯಕ್ತಿಕ ಅನುಭವಗಳನ್ನು ಆಧರಿಸಿ ಲೇಖಕರು ಕಾದಂಬರಿಗಳನ್ನು ರಚಿಸಿದ್ದಾರೆ. ಸಮಕಾಲೀನ ಸಮಸ್ಯೆಗಳನ್ನು ಸಮಾಜಕ್ಕೆ ಎತ್ತಿ ತೋರಿಸುವುದರ ಮೂಲಕ ಆ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಕೆಲಸ ಮಾಡಿದ್ದಾರೆ. ಈ ಎಲ್ಲಾ ಕಾದಂಬರಿಗಳ ಉದ್ದಕ್ಕೂ ಇಸ್ಲಾಂ ಸಂಸ್ಕೃತಿಯ ಸೊಗಡು ನಿರೂಪಿತಗೊಂಡಿದೆ. ಇವು ಮುಸ್ಲಿಂ ಸಮಾಜದ ಅನೇಕ ಮಗ್ಗುಲುಗಳನ್ನು ಸ್ಪರ್ಶಿಸುವಲ್ಲಿ ಯಶಸ್ವಿಯಾಗಿವೆ.

ಹಾಗೆಯೇ ಇವರ ಆತ್ಮಕಥನ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಅತ್ಯಂತ ನೈಜತೆಯಿಂದ ಕೂಡಿದ ವೈಯಕ್ತಿಕ ಅನುಭವದ ಲೇಖನವಾಗಿದೆ. ಶಿಕ್ಷಣ ಮತ್ತು ಸ್ವಾತಂತ್ರ್ಯಕ್ಕಾಗಿ ಮುಸ್ಲಿಂ ಮಹಿಳೆಯರು ಪಡುವ ಪಾಡು ಇಲ್ಲಿ ಮನೋಜ್ಞವಾಗಿ ನಿರೂಪಿಸಲ್ಪಟ್ಟಿದೆ. ಸಾರಾ ಅನುಭವಗಳು ಮುಸ್ಲಿಂ ಜಗತ್ತಿನ ಒಳತುಡಿತಗಳಾಗಿ ದಾಖಲಾಗುತ್ತದೆ. ಒಟ್ಟಾರೆಯಾಗಿ ಈ ಎಲ್ಲಾ ಕಾರಣಗಳಿಂದಾಗಿ ಬಂಡಾಯ ಸಾಹಿತ್ಯದಲ್ಲಿ ಪ್ರಭಾವಶಾಲಿಯಾಗಿ ಕಾಣಿಸಿಕೊಂಡ ಮುಸ್ಲಿಂ ಸಮಾಜದ ಲೇಖಕರಲ್ಲಿ ಸಾರಾ ಅಬೂಬಕ್ಕರ್ ಅವರು ವೈಶಿಷ್ಟ್ಯಪೂರ್ಣ ವ್ಯಕ್ತಿತ್ವದಿಂದ ಕೂಡಿದ ಪ್ರತಿಭೆಯಾಗಿ ಗೋಚರಿಸುತ್ತಾರೆ.

ಹಲವಾರು ಉದಯೋನ್ಮುಖ ಲೇಖಕಿಯರಿಗೆ ಮಾದರಿಯಾಗಿ, ಇಸ್ಲಾಂ ಸಮಾಜದ

ಅಮಾನವೀಯ ನಿಲುವುಗಳ ವಿರುದ್ಧ ಅಂತರ್ಗಾಮಿಯಾಗಿ ಹೋರಾಡಬಲ್ಲ ಯುಕ್ತಿ, ಶಕ್ತಿಯಾಗಿ, ಅಜ್ಞಾನ, ಅಸಮಾನತೆ, ಮೌಢ್ಯ-ಜಾಢ್ಯಗಳನ್ನು ಸುಧಾರಿಸಬಲ್ಲ ಸಮರ್ಥ, ಸಾಧಕರಾಗಿ, ಓದುಗ ಲೋಕಕ್ಕೆ ಮೂಲಭೂತ ಮನುಷ್ಯತ್ವದ ಸಂದೇಶಗಳನ್ನು ಸಾದರಪಡಿಸಿದ, ಕನ್ನಡ ಸಾಹಿತ್ಯ ಲೋಕವು ಮರೆಯಲಾಗದ ಇತಿಹಾಸ ನಿರ್ಮಿಸಿದ ಕೀರ್ತಿ ಸಾರಾ ಅಬೂಬಕ್ಕರ್ ಅವರಿಗೆ ಸಲ್ಲುತ್ತದೆ.

---

೧. ಸಾರಾ ಅಬೂಬಕ್ಕರ್ ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು - ಪುಟ-೧೨೬

೨. ಅದೇ - ಪುಟ-೧೨೮

೩. ಅದೇ - 'ವಜ್ರಗಳು' ಮುನ್ನುಡಿಯಲ್ಲಿ

೪. ಅದೇ - ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ (ಮುಸ್ಲಿಂ ಸಂವೇದನೆ ಮತ್ತು ನಾನು) ಪುಟ - ೧೨೬

ಅಧ್ಯಾಯ–೩

ಸಂವೇದನೆಯ ಅರ್ಥ ಮತ್ತು ಸ್ವರೂಪ

ಸಂವೇದನೆಯ ಪ್ರಕಾರಗಳು

'ಸಂವೇದನೆ' ಎಂಬ ಪದಕ್ಕೆ 'ತಿಳುವಳಿಕೆ', 'ಅನಿಸಿಕೆ', 'ಗ್ರಹಿಕೆ', 'ಆಲೋಚನೆ' ಎಂಬ ವಿವಿಧ ಅರ್ಥಗಳಿವೆಯಾದರೂ, ಇವುಗಳನ್ನು ಸೀಮಿತಾರ್ಥದಲ್ಲಿ ಗ್ರಹಿಸಬಹುದಾಗಿದೆ. ಆದರೆ ಈ ಒಂದು ಪರಿಕಲ್ಪನೆಯನ್ನು ವಿಶಾಲಾರ್ಥದಲ್ಲಿ ನೋಡುವುದಾದರೆ, ಸಂವೇದನೆಯು ಒಂದು ಸೈದ್ಧಾಂತಿಕ ಚೌಕಟ್ಟನ್ನು ಪಡೆದುಕೊಳ್ಳುತ್ತದೆ. ಒಂದು ನಿರ್ಧಿಷ್ಟ ವಿಷಯ ಅಥವಾ ವಸ್ತುವನ್ನು ಕುರಿತಾದ ಅನುಭವ ವಿಶೇಷಗಳನ್ನು ಸಮಗ್ರವಾಗಿ, ತರ್ಕಬದ್ಧವಾಗಿ, ವ್ಯವಸ್ಥಿತವಾಗಿ ಅಧ್ಯಯನಕ್ಕೆ, ಚಿಂತನೆಗೆ ಒಳಪಡಿಸುವ ಒಂದು ಕ್ರಮವನ್ನು ಸಿದ್ಧಾಂತರ ನೆಲೆಗಟ್ಟಿನಲ್ಲಿ ಕೈಗೊಳ್ಳುತ್ತೇವೆ. ಈ ಅಧ್ಯಯನ ಶಿಸ್ತಿಗೆ ಸಂವೇದನೆಯೂ ಸೇರುತ್ತದೆ. ಸಂವೇದನೆಯೆಂಬುದು ಸ್ತ್ರೀಪರವಾಗಿರಬಹುದು, ಸಮಾಜದ ದಮನಿತರ ಪರವಾಗಿರಬಹುದು, ಶೋಷಿತರ ಪರವಾಗಿರಬಹುದು– ಹೀಗೆ ಸಂವೇದನೆಯು ಹಲವಾರು ಆಯಾಮಗಳನ್ನು ಪಡೆದುಕೊಳ್ಳುತ್ತದೆ.

'ಸಂವೇದನೆ' ಎಂಬ ಪದವೇ ಜೀವಂತಿಕೆಯ ಲಕ್ಷಣವಾಗಿದೆ. ಒಂದು ಅಂದವಾದ, ಅರಳಿದ ಹೂವನ್ನು ಕಂಡ ಮನಸ್ಸು 'ಇದೋ ನೋಡು ಇಲ್ಲರಳಿ ನಗುತಿದೆ ಏಳು ಸುತ್ತಿನ ಮಲ್ಲಿಗೆ' ಎಂಬ ಅಭಿವ್ಯಕ್ತಿಗೆ ಸಂವೇದನೆಯು ನಿಲುಕುವುದಿಲ್ಲ. ಇದನ್ನು ಮೀರಿ 'ಇಷ್ಟು ಹಚ್ಚನೆ ಹಸಿರು ಗಿಡದಿಂದೆಂತು ಹೊಮ್ಮಿತೋ ಬೆಳ್ಳಗೆ' ಎಂಬ ವಿಸ್ಮಯಕ್ಕೆಡೆ ಮಾಡಿಕೊಡುವುದೇ ಸಂವೇದನೆಯ ಮೂಲಭೂತ ಗುಣ. 'ವೇದನೆ ಮತ್ತು 'ಸಂವೇದನೆ' ಪದಗಳು ಒಂದೇ ರೀತಿಯಲ್ಲಿ ಧ್ವನಿಸಿದರೂ ಇವುಗಳ ನಡುವೆ ವ್ಯತ್ಯಾಸವಿದೆ. 'ವೇದನೆ'ಯ ದೇಹ ಅಥವಾ ಮನಸ್ಸಿಗೆ ಸಂಬಂಧಿಸಿದ ನೋವಾಗಿದ್ದರೆ, 'ಸಂವೇದನೆ'ಯೆಂಬುದು ನೋವನ್ನು ಒಳಗೊಂಡಿದ್ದರೂ, ನೋವಿನ ಹಿಂದಿನ ಚಿಂತನೆ, ಭಾವನೆಗಳು ಪ್ರಧಾನವಾಗಿರುತ್ತವೆ. ಈ ರೀತಿಯ ಸಂವೇದನೆಗಳು ಧರ್ಮದಿಂದ ಧರ್ಮಕ್ಕೆ, ಜಾತಿಯಿಂದ–ಜಾತಿಗೆ, ವರ್ಗದಿಂದ ವರ್ಗಕ್ಕೆ, ಭಿನ್ನ ಭಿನ್ನ ಸ್ವರೂಪದಲ್ಲಿರುತ್ತವೆ. ಇದಕ್ಕೆ ಕಾರಣ ಆಯಾ ನಿರ್ಧಿಷ್ಟ ಗುಂಪಿನ ಸಮಸ್ಯೆಗಳು, ನೋವುಗಳು, ಅಭಿವ್ಯಕ್ತಿ, ಆಲೋಚನೆಗಳು ಮತ್ತೊಂದು ಗುಂಪಿಗಿಂತ ಬೇರೆಯೇ ಆಗಿರುವುದು. ಅವುಗಳು ಸಾಮಾಜಿಕವಾಗಿಯೋ, ಮೂಲಭೂತವಾಗಿಯೋ, ಸಾಂಸ್ಕೃತಿಕ ಕಾರಣಗಳಿಂದಾಗಿಯೋ ಮನುಷ್ಯರು ಭಿನ್ನವಾಗಿ ಬದುಕುವುದರಿಂದ ಅವರ ಅನುಭವಗಳಲ್ಲಿಯೂ ಭಿನ್ನತೆ ಇರುತ್ತದೆ. ಉದಾ: ಸ್ತ್ರೀಯರ ಸಂವೇದನೆಗಳು ಪುರುಷರ ಸಂವೇದನೆಗಳಿಗಿಂತ ಬೇರೆಯೇ ಆಗಿರುತ್ತವೆ. ಒಂದೇ

ವಿಷಯವನ್ನು ಪುರುಷರು ಗ್ರಹಿಸುವ ರೀತಿಯೇ ಬೇರೆ, ಸ್ತ್ರೀಯರು ಗ್ರಹಿಸುವ ರೀತಿಯೇ ಬೇರೆ. ಇವರಿಬ್ಬರ ದೃಷ್ಟಿಕೋನಗಳಲ್ಲಿ ಅಗಾಧವಾದ ವ್ಯತ್ಯಾಸಗಳಿರುತ್ತವೆ. ಹಾಗೆಯೇ ಅವರವರ ಅಭಿವ್ಯಕ್ತಿಯ ಕ್ರಮವೂ ಭಿನ್ನವಾಗಿರುತ್ತದೆ.

ಮಹಿಳೆಯರ ಸಂವೇದನೆಗಳು ಪುರುಷನದಕ್ಕಿಂತ ಭಿನ್ನ ಎಂದು ಹೇಳುವುದಕ್ಕೆ ನಮಗೆ ದಟ್ಟವಾದ ಉದಾಹರಣೆಗಳು ಸಿಗುವುದು ಜಾನಪದ ಸಾಹಿತ್ಯದಲ್ಲಿ ಮಾತ್ರ. ಜನಪದ ಗೀತೆಗಳ ಬಹುಮುಖ್ಯ ಪ್ರಕಾರವಾದ ಗರತಿಯ ಹಾಡುಗಳನ್ನು ಕಟ್ಟಿದವರು ಹೆಣ್ಣು ಮಕ್ಕಳೇ ಆಗಿದ್ದು, ಇವು ಈ ಹೆಂಗಸರು ಕುಟ್ಟುವಾಗ, ಬೀಸುವಾಗ ತಮ್ಮಷ್ಟಕ್ಕೆ ಹಾಡಿಕೊಳ್ಳುವ ಹಾಡುಗಳಾಗಿವೆ. ಆದ್ದರಿಂದ ಇನ್ನೊಬ್ಬರಿಗಾಗಿ ಹಾಡುವ ಕಥನಗೀತೆ ಮೊದಲಾದವುಗಳಿಗಿಂತ ಗರತಿಯ ಹಾಡುಗಳು ಹೆಂಗಸರ ಸಂವೇದನೆ ಮತ್ತು ಅನುಭವಗಳಿಗೆ ಹೆಚ್ಚು ಹತ್ತಿರವಾಗಿವೆ ಎಂಬುದು ಗಮನಾರ್ಹ ಅಂಶವಾಗಿದೆ. ಈ ಹಾಡುಗಳ ಒಳಹೊಕ್ಕು ನೋಡಿದಾಗ ಸ್ತ್ರೀಯರ ನೋಟವೇ ಬೇರೆ, ಅವರ ಹಾಡೇ ಬೇರೆ, ಅವರ ಕಾಳಜಿಗಳೇ ಬೇರೆ ಎಂಬುದು ಸ್ಪಷ್ಟವಾಗುತ್ತದೆ. ಪುರುಷ ಜಗತ್ತು ವೈಭವೀಕರಿಸಿದ, ಪ್ರತಿಪಾದಿಸಿದ, ಎತ್ತಿ ಹಿಡಿದ ಯಾವ ಮೌಲ್ಯ, ಆದರ್ಶಗಳನ್ನೂ ಸ್ತ್ರೀಯರು ಪುರುಸ್ಕರಿಸಿಲ್ಲ[೧] ಎಂಬ ಅಚ್ಚರಿ ಇಲ್ಲಿ ಕಾಣಸಿಗುತ್ತದೆ.

ಹಾಗೆಯೇ ದಲಿತ ಮತ್ತು ಮುಸ್ಲಿಂ ಸಮುದಾಯಗಳ ಕುರಿತಾದ ಸಂವೇದನೆಗಳು ವ್ಯಕ್ತಯಾಗುವಾಗ ಆಯಾ ಸಮುದಾಯದ ವ್ಯಕ್ತಿಗಳ ಸಂವೇದನೆಗಳು ಬೇರೆ ಬೇರೆಯಾಗಿರುತ್ತವೆ. ಆದರೆ ಅದೇ ಸಮುದಾಯದಿಂದ ಬದುಕಿ ಬಂದ, ಆ ಸಮಾಜದ ನೋವು-ನಲಿವುಗಳನ್ನು ಒಳಗಿನಿಂದ ಕಂಡುಂಡ ವ್ಯಕ್ತಿಗಳ ಸಂವೇದನೆಯು ಹೆಚ್ಚು ವಸ್ತುನಿಷ್ಠತೆಯನ್ನು ಪಡೆದುಕೊಂಡಿರುತ್ತದೆ. ಅವುಗಳಿಗೆ ಹೆಚ್ಚಿನ ಮಹತ್ವವಿರುತ್ತದೆ. ಈ ನಿಟ್ಟಿನಲ್ಲಿ ಸಂವೇದನೆಯುನ್ನು ಮೂರು ಪ್ರಕಾರಗಳಲ್ಲಿ ವಿಂಗಡಿಸಿ ಅಧ್ಯಯನ ಮಾಡಬಹುದಾಗಿದೆ. ಅವುಗಳು :-

೧) ಸ್ತ್ರೀ ಸಂವೇದನೆ

೨) ಮುಸ್ಲಿಂ ಸಂವೇದನೆ

೩) ದಲಿತ ಸಂವೇದನೆ

ಸ್ತ್ರೀ ಸಂವೇದನೆ:-

'ಸ್ತ್ರೀ ವಾದ' ಅಥವಾ 'ಫೆಮಿನಿಸಂ' ಎಂಬುದು ಇಪ್ಪತ್ತನೆಯ ಶತಮಾನದ ಬಹು ಮಹತ್ವದ ಬೆಳವಣಿಗೆಗಳಲ್ಲಿ ಒಂದೆನಿಸಿಕೊಂಡಿದೆ. ಸುಮಾರು ೧೯೭೫ ರಲ್ಲಿ ಭಾರತಕ್ಕೆ

ಕಾಲಿಟ್ಟ ಸ್ತ್ರೀ ವಾದವು ಪಶ್ಚಿಮದಿಂದ ಭಾರತಕ್ಕೆ ಆಮದಾಗಿ ಬಂದ ಅನೇಕ ವಿಚಾರಧಾರೆಗಳ ಸಾಲಿಗೆ ಸೇರುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ಸ್ತ್ರೀವಾದವು ಲಿಂಗ, ಜಾತಿ, ಪುರುಷ ಪ್ರಾಧಾನ್ಯತೆ ಹಾಗೂ ಬಂಡವಾಳಶಾಹಿ ಸಮಾಜದ ವಿರುದ್ಧ ಒಂದು ಅನಿವಾರ್ಯ ರಾಜಕೀಯ ಸಿದ್ಧಾಂತವಾಗಿ ಹುಟ್ಟಿಕೊಂಡಿತು. ಕ್ರಮೇಣ ಇದೊಂದು ಪ್ರಮುಖ ಚಳುವಳಿಯಾಗಿ ರೂಪುಗೊಂಡು ಸ್ತ್ರೀಯರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮುಂತಾದ ಬದುಕಿನ ನೆಲೆಗಳಲ್ಲಿ ಸ್ತ್ರೀ ಪುರುಷರನ್ನು ಸಮಾನವಾಗಿ ಪರಿಗಣಿಸುವ ವ್ಯವಸ್ಥೆಗಾಗಿ ಹೋರಾಡುವುದು ಇದರ ಮುಖ್ಯ ಕಾರ್ಯ ವಿಧಾನವಾಯಿತು. ಇಷ್ಟು ಮಾತ್ರವಲ್ಲದೆ ಇದು ಜಗತ್ತಿನ ವಿವಿಧ ದೇಶಗಳಿಗೂ ಹರಡಿ ಅಲ್ಲಿನ ಸ್ತ್ರೀಯರು ತಮ್ಮ ಸ್ಥಿತಿಗತಿಗಳ ಬಗ್ಗೆ ಚಿಂತಿಸುವಂತೆ, ಹಕ್ಕುಗಳಿಗಾಗಿ ಒತ್ತಾಯ ಮಾಡುವಂತೆ ಪ್ರೇರೇಪಿಸಿತು. ಈ ಒಂದು ಹೋರಾಟದ ಚರಿತ್ರೆಯು ಸುಮಾರು ಇನ್ನೂರು ವರ್ಷಗಳಷ್ಟು ದೀರ್ಘವಾದುದು.

ಆದರೆ ಇಪ್ಪತ್ತನೆ ಶತಮಾನದ ಅರವತ್ತು ಮತ್ತು ಎಪ್ಪತ್ತನೆಯ ದಶಕಗಳಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ತುಂಬ ವ್ಯಾಪಕವಾದ ಮಹಿಳಾ ಚಳುವಳಿಗಳು ನಡೆದವು. ಪಶ್ಚಿಮದ ಮಹಿಳೆಯರ ಈ ಸಂಘಟಿತ ಹೋರಾಟಗಳ ಕೇಂದ್ರದಲ್ಲಿ ಬೇರೆ ಬೇರೆ ಮಹಿಳಾ ಸಮಸ್ಯೆಗಳಿದ್ದವು. ಆದರೆ ಎಲ್ಲ ಹೋರಾಟಗಳ ಅಂತಿಮ ಕಾಳಜಿಯು ಮಹಿಳೆಯರ ಬಿಡುಗಡೆ ಅಥವಾ ವಿಮೋಚನೆಯೇ ಆಗಿದುದರಿಂದ ಈ ದಶಕಗಳ ಹೋರಾಟಗಳನ್ನು ಒಟ್ಟಾಗಿ 'ಮಹಿಳಾ ವಿಮೋಚನಾ ಚಳುವಳಿ' ಎಂದು ಗುರುತಿಸಲಾಯಿತು[೨].

ಹೀಗೆ ಇತ್ತೀಚಿನ ದಶಕಗಳಲ್ಲಿ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಸ್ತ್ರೀ ಸಂಸ್ಕೃತಿಯೆಂಬುದು ಒಂದು ಸುಸಂಬದ್ಧವಾದ ಉಪಸಂಸ್ಕೃತಿಯೆಂಬಂತೆ ಬೆಳೆದು ಬಂದಿತು. ಈ ಸಂಸ್ಕೃತಿಯ ನಾಲ್ಕು ಪ್ರಮುಖ ಲಕ್ಷಣಗಳನ್ನು ಜಿ.ಎಸ್. ಅಮೂರ ಅವರು ಹೀಗೆ ಗುರುತಿಸಿದ್ದಾರೆ.

೧. ಪುರುಷ ಪ್ರಾಧಾನ್ಯ ವ್ಯವಸ್ಥೆಯ ನಿರಾಕರಣೆ.

೨. ಪುರುಷ ನಿರ್ಮಿತ ಸ್ತ್ರೀ ಪ್ರತಿಮೆಗಳ ನಿರಾಕರಣೆ.

೩. ಸ್ತ್ರೀ ಸಂಸ್ಕೃತಿಯ ಪರಂಪರೆಯ ಶೋಧ.

೪. ಹೊಸ ಮೌಲ್ಯಗಳ ಪ್ರತಿಪಾದನೆ.[೩]

ಈ ಮೇಲ್ಕಾಣಿಸಿದ ಲಕ್ಷಣಗಳು ಸ್ತ್ರೀ ಸಾಹಿತ್ಯದ ಲಕ್ಷಣಗಳೂ ಹೌದು. ಈ ಎಲ್ಲಾ ಲಕ್ಷಣಗಳುಳ್ಳ ಕಾಳಜಿಗಳು ನಮ್ಮ ಮಹಿಳಾ ಲೇಖಕಿಯವರ ಸ್ತ್ರೀ ಸಾಹಿತ್ಯಗಳಲ್ಲಿ ಕಾಣಿಸಿಕೊಂಡಿರುವುದನ್ನು ಗಮನಿಸಬಹುದು. ಹೀಗೆ ಆರಂಭದಿಂದಲೂ ಸ್ತ್ರೀವಾದವೂ

ಒಂದೇ ಸಮಸ್ಯೆಯ ಸುತ್ತ ಬೆಳೆದ ವಿಚಾರಧಾರೆಯಾಗಿರದೆ, ಕಾಲ, ದೇಶ, ರಾಜಕೀಯ, ಭಾಷೆ, ವರ್ಗ, ಜನಾಂಗ ಮುಂತಾದ ಆಯಾಮಗಳನ್ನು ಪಡೆದುಕೊಂಡಿದೆ ಹಾಗೂ ಮಹಿಳೆಯರ ಬೇರೆ ಬೇರೆ ಪರಿಸ್ಥಿತಿಗಳಿಗೆ ತಕ್ಕಂತೆ ಬೇರೆ ಬೇರೆಯಾದ ಸಮಸ್ಯೆಗಳ ತಳಹದಿಯ ಮೇಲೆ ಬೆಳೆದಂಥ ಬಹುರೂಪಿ ಚಿಂತನೆಗಳನ್ನು ಒಳಗೊಂಡಿದೆ.

ಸ್ತ್ರೀವಾದಿ ಚಿಂತನೆ:-

ಮಹಿಳಾ ಬದುಕಿನ ಸ್ಥಿತಿಗತಿಗಳನ್ನು ಅರಿಯುವ, ಅಲ್ಲಿನ ಸಮಸ್ಯೆಗಳಿಗೆ ಪರಿಹಾರಗಳನ್ನು ಶೋಧಿಸುವ ಈ ಚಿಂತನೆಯನ್ನು 'ಸ್ತ್ರೀವಾದಿ ಚಿಂತನೆ' ಎಂದು ಸ್ಥೂಲವಾಗಿ ಕರೆಯಬಹುದು. ದುರ್ಬಲರನ್ನು ಶೋಷಿಸುವುದು ಪ್ರಬಲರಿಗೆ ಸಹಜ. ಹಾಗೆಯೇ ಶೋಷಕ ವರ್ಗದ ವಿರುದ್ಧ ಶೋಷಿತ ವರ್ಗದ ಹೋರಾಟವು ನಿರಂತರವಾದುದು. ಈ ಹಿನ್ನೆಲೆಯಲ್ಲಿ ಸ್ತ್ರೀವಾದಿ ಚಿಂತನೆಯೆಂಬುದು ಕುಟುಂಬದ ಒಳಗೆ ಅಥವಾ ಕುಟುಂಬದ ಹೊರಗೆ ಹೆಣ್ಣಿನ ಮೇಲೆ ನಡೆಯುವ ದಬ್ಬಾಳಿಕೆ ಹಾಗೂ ಶೋಷಣೆಗಳ ಸ್ವರೂಪವನ್ನು ಅರ್ಥ ಮಾಡಿಕೊಂಡು ಅಂತಹ ಪದ್ಧತಿಯ ನಿವಾರಣೆಗಾಗಿ ಪ್ರಜ್ಞಾಪೂರ್ವಕವಾಗಿ ನಡೆಸುವ ಒಂದು ಚಿಂತನೆಯಾಗಿದೆ.

ಈ ರೀತಿಯ ಚಿಂತನೆಗಳ ಫಲವಾಗಿ ಮಹಿಳಾ ಸಾಹಿತ್ಯದ ಸ್ವರೂಪ, ಗೊತ್ತು-ಗುರಿಗಳನ್ನು ಕುರಿತಂತೆ ಖಚಿತವಾದ ಅಭಿಪ್ರಾಯಗಳು ರೂಪುಗೊಳ್ಳತೊಡಗಿದವು. ಎಲ್ಲಿಯತನಕ ಹೆಣ್ಣು ನನ್ನ ನಿಜವಾದ ಅನುಭವಗಳನ್ನು, ಅನಿಸಿಕೆಗಳನ್ನು ವ್ಯಕ್ತಿತ್ವವನ್ನು ಹೊರಗೆಡವುದಿಲ್ಲವೋ ಅಲ್ಲಿಯ ತನಕ ಹೆಣ್ಣನ್ನು ಕುರಿತ ಸಾಮಾಜಿಕ ನಿರೀಕ್ಷೆಯಲ್ಲಿ ಯಾವ ಬದಲಾವಣೆಗಳೂ ಸಾಧ್ಯವಾಗುವುದಿಲ್ಲ. ಮಹಿಳೆಯ ಸ್ಥಿತಿ ಉಜ್ವಲಗೊಳ್ಳ ಬೇಕಾದರೆ ಪ್ರಜ್ಞಾಪೂರ್ವಕವಾಗಿಯೇ ಈ ಪರಂಪರಾಗತ ನಿರ್ಬಂಧಗಳನ್ನು, ನಿರೀಕ್ಷೆಗಳನ್ನು ಮುರಿಯಬೇಕು ಎಂಬುದನ್ನು ಸ್ತ್ರೀ ವಾದಿ ವಿಮರ್ಶೆ ಕಂಡುಕೊಂಡಿತ್ತು. ಈ ನಿಟ್ಟಿನಲ್ಲಿ ಕೆಲವು ಸ್ಪಷ್ಟವಾದ ಕಾರ್ಯಕ್ರಮಗಳನ್ನು, ಯೋಜನೆಗಳನ್ನು ಹಾಕಿಕೊಂಡು ಒಂದೊಂದಾಗಿ ಕಾರ್ಯರೂಪಕ್ಕೆ ತಂದಿದ್ದನ್ನು ಸಮಕಾಲೀನ ಮಹಿಳಾ ಸಾಹಿತ್ಯ ಸಂದರ್ಭದಲ್ಲಿ ಗುರುತಿಸಬಹುದು.

ಸ್ತ್ರೀ ವಾದದಿಂದ ಪ್ರಭಾವಿತರಾದ ಲೇಖಕರಿಯರು ಈ ಪರಿಕಲ್ಪನೆಗೆ ಸಂಬಂಧಿಸಿದಂತೆ ಲೇಖನಗಳನ್ನು ಹಾಗೂ ಸ್ತ್ರೀ ವಾದಿ ಸಾಹಿತ್ಯಗಳನ್ನು ರಚಿಸುವ, ಅನುವಾದಿಸುವ ಮೂಲಕ ಒಂದು ಸ್ಪಷ್ಟ ಪರಿಕಲ್ಪನೆ ಮೂಡಿಸಿದರು. ೨೦ನೇ ಶತಮಾನದಲ್ಲಾದ ಜಾಗತಿಕ ಕಾರಣಗಳಿಂದಾಗಿ ಇತರ ದಮನಿತರ ಸಮುದಾಯಗಳಂತೆ ಮಹಿಳಾ ಸಮುದಾಯವು ಎಚ್ಚೆತ್ತುಕೊಂಡು ದನಿಯೆತ್ತಲು ಹಾದಿ ಕಂಡುಕೊಂಡಿತ್ತು. ಸ್ತ್ರೀ-ಪುರುಷರ ಅಸಮಾನತೆಯ

ಸಂಘರ್ಷ ಶತಮಾನಗಳಿಂದಲೂ ನಡೆದುಕೊಂಡು ಬಂದಿದೆಯಾದರೂ ಬಹುಮಟ್ಟಿಗೆ ಪುರುಷನೇ ಮೇಲುಗೈ ಸಾಧಿಸಿದ್ದಾನೆ. ಇದರ ಹೊರತು ಸ್ತ್ರೀಯರಿಗೆ ದೊರೆತಿರುವ ವಿಜಯದ ಗಳಿಕೆಗಳು ತೀರಾ ಅತ್ಯಲ್ಪವೇ. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಸಾಕಷ್ಟು ಬದಲಾವಣೆಗಳು ಸಂಭವಿಸಿವೆ. ಮಹಿಳೆ ಇಂದು ತನ್ನ ಸ್ಥಿತಿಯ ಬಗ್ಗೆ ಜಾಗೃತಳಾಗಿದ್ದಾಳೆ. ತನ್ನ ಬದುಕನ್ನು ಕುರಿತು ಸ್ವತಂತ್ರವಾಗಿ ಆಲೋಚನೆಗಿಳಿದಿದ್ದಾಳೆ. ತನ್ನ ಸಮಸ್ಯೆಗಳ ಪರಿಹಾರಕ್ಕಾಗಿ ಹೊರಡುವ ಛಲ ತೊಟ್ಟಿದ್ದಾಳೆ. ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕವಾದ ಸ್ವಾತಂತ್ರ್ಯ ಪಡೆದುಕೊಂಡಿದ್ದಾಳೆ. ಆ ಮೂಲಕ ತನ್ನ ಸಮಸ್ಯೆಗಳನ್ನು ಕೇಂದ್ರವಾಗಿಸಿ ಪರಿಹಾರ ಕಂಡುಕೊಳ್ಳುತ್ತಲೇ ದಿಟ್ಟವಾಗಿ ಹೋರಾಟಕ್ಕೂ ದುಮುಕಿದ್ದಾಳೆ. ಶತಶತಮಾನಗಳಿಂದಲೂ ಅದುಮಿಟ್ಟ ಅಸಂಖ್ಯಾತ ನೋವು-ನಲಿವು, ಭಾವನೆಗಳನ್ನು ಅಭಿವ್ಯಕ್ತಿಸಹೊರಟಿದ್ದಾಳೆ. ಹೀಗೆ ಸ್ತ್ರೀ ವಾದಿ ಚಿಂತನೆಯು ಕ್ರಮೇಣ ಗಟ್ಟಿ ನೆಲೆಯನ್ನು ಕಂಡುಕೊಳ್ಳುತ್ತಿದೆ. ಮಹಿಳೆಯರ ಈ ಬೆಳವಣಿಗೆಯನ್ನು ಪುರುಷಾಧಿಕಾರ ವ್ಯವಸ್ಥೆಯ ಕಟ್ಟುಪಾಡುಗಳಿಂದ ನಿರ್ಬಂಧಿಸುವುದು ಅಸಾಧ್ಯವಾಗಿದೆ.

ಸಮಕಾಲೀನ ಸಂದರ್ಭದಲ್ಲಿ ಮುಸ್ಲಿಂ ಲೇಖಕರು, ದಲಿತ ವರ್ಗದ ಲೇಖಕರು ರೂಪುಗೊಳ್ಳಲು ಸ್ತ್ರೀ ವಾದವು ಬೀರಿದ ಪ್ರಭಾವವೇ ಮುಖ್ಯ ಕಾರಣವಾಗಿದೆ. ಇವರಲ್ಲಿ ಕೆಲವರನ್ನು ಪ್ರಗತಿಶೀಲ, ದಲಿತ, ಬಂಡಾಯ ಮುಂತಾದ ಸಾಹಿತ್ಯ ಪಂಥಗಳ ಅಡಿಯಲ್ಲಿ ಪರಿಶೀಲಿಸುವ ಕ್ರಮ ಇದೆಯಾದರೂ ಇವರೆಲ್ಲರ ಮೂಲಭೂತ ಕಾಳಜಿ ಮಹಿಳೆಯೇ ಆಗಿದ್ದಾಳೆ. ಸ್ತ್ರೀಯರ ಸ್ವಾತಂತ್ರ್ಯ, ಸಮಾನತೆ, ಶಿಕ್ಷಣ, ಅಭಿವ್ಯಕ್ತಿಗೆ ಸಂಬಂಧಿಸಿದಂತೆ ಇತಿಹಾಸವನ್ನು ಕೆದಕಿ ನೋಡವುದಾದರೆ ವೇದಗಳ ಕಾಲದಲ್ಲಿ ಮಹಿಳೆ ಸಭೆ-ಸಮಾರಂಭಗಳಲ್ಲಿ ಭಾಗವಹಿಸುವ, ವಿದ್ವತ್ ಪೂರ್ಣ ಚರ್ಚೆಗಳನ್ನು ನಡೆಸುವ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಸ್ವಾತಂತ್ರ್ಯ, ಸಮಾನತೆಯನ್ನು ಪಡೆದಿದ್ದಳು. ಆದರೆ ಅನೇಕ ಶತಮಾನಗಳ ನಂತರ ಮಹಿಳೆ ಮಾತನಾಡುವ, ಬರೆಯುವ ಅವಕಾಶ ಪಡೆದದ್ದು ೧೨ನೇ ಶತಮಾನದಲ್ಲಿ. ವಚನಕಾರರ ವಚನ ಸಾಹಿತ್ಯ ಪರಂಪರೆಯನ್ನೇ ಇವರು ಅನುಸರಿಸಿದರು. ವಚನಕಾರರಂತೆ ಗುರು-ಲಿಂಗ-ಜಂಗಮ, ಕಾಯಕದ ಕುರಿತು ಮಾತನಾಡಿದರು. ವೀರಶೈವ ತತ್ವದ ನಿಷ್ಠೆಯನ್ನು ಎತ್ತಿ ಹಿಡಿದರು. ಇವರಲ್ಲೂ ಗೊಗ್ಗವ್ವೆ, ಆಯ್ದಕ್ಕಿ ಲಕ್ಕಮ್ಮ, ಕಾಳವ್ವೆ ಮೊದಲಾದ ವಚನಕಾರ್ತಿಯರು ಸ್ತ್ರೀ ಪರವಾದ ತಮ್ಮ ಭಿನ್ನ ವಿಚಾರಗಳನ್ನು ಪ್ರತಿಪಾದಿಸಿದರು. ವಚನಕಾರ್ತಿಯರಲ್ಲೇ ಅಕ್ಕಮಹಾದೇವಿಯ ನಿಲುವು ವಿಶಿಷ್ಟವಾಗಿದೆ. ಸ್ತ್ರೀ ಧರ್ಮದ ಸಂಕೋಲೆಗಳಿಂದ ಬಿಡಿಸಿಕೊಂಡು ತನ್ನದೇ ಆದ ಜೀವನ ಧರ್ಮವನ್ನು ರೂಪಿಸಿಕೊಳ್ಳುವುದು ಅಕ್ಕಮಹಾದೇವಿಗೆ ದೊಡ್ಡ ಸವಲಾಗಿತ್ತು. ಆದರೆ ನಂತರ ಬಂದ ಸಂಚಿ ಹೊನ್ನಮ್ಮನಿಗೆ ಸ್ತ್ರೀಯ ಸ್ಥಾನ-ಮಾನಗಳನ್ನು ಎತ್ತಿ ಹಿಡಿಯುವುದು ದೊಡ್ಡ ಸಂಗತಿಯಾಯಿತು.

೧೨ನೇ ಶತಮಾನವನ್ನು ಬಿಟ್ಟರೆ ಮತ್ತೆ ಮಹಿಳೆಯರು ತಮ್ಮನ್ನು ಬರಹದಲ್ಲಿ ತೊಡಗಿಸಿಕೊಂಡದ್ದು, ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ. ಈ ಮೊದಲ ಹಂತದಲ್ಲಿ ನಂಜನಗೂಡು ತಿರುಮಲಾಂಬ, ಆರ್.ಕಲ್ಯಾಣಮ್ಮ ಕೊಡಗಿನ ಗೌರಮ್ಮ ಬೆಳಗೆರೆ ಜಾನಕಮ್ಮ, ಗಿರಿಬಾಲೆ, ಸರಸ್ವತಿ ರಾಜವಾಡೆ ಮೊದಲಾದ ಲೇಖಕಿಯರು ಕವನ, ಕಥೆ, ಕಾದಂಬರಿ, ನಾಟಕಗಳನ್ನು ಬರೆದಿದ್ದಾರೆ. ಇವರು ತಮ್ಮ ಬರಹಗಳಲ್ಲಿ ಸ್ತ್ರೀ ಸ್ವಾತಂತ್ರ್ಯ, ಸಮಾನತೆ, ಸ್ತ್ರೀ ವಿರೋಧಿ ವಿಚಾರಗಳ ಖಂಡನೆ, ಹೆಣ್ಣಿನ ಶಿಕ್ಷಣ, ಹೆಣ್ಣಿನ ಪರಾವಲಂಬನೆ, ವಿಧವೆ ಹಾಗೂ ವರದಕ್ಷಿಣೆಯ ಸಮಸ್ಯೆಯ ಕುರಿತು, ಅನಿಷ್ಟ ಪದ್ಧತಿಯ ಕುರಿತು, ಸ್ತ್ರೀಯರ ಸ್ಥಾನಮಾನಗಳ ಕುರಿತು ವಿವೇಚಿಸುವುದು ಅನಿವಾರ್ಯವಾಗಿತ್ತು. ಈ ಹಂತದ ಲೇಖಕಿಯರು ಅಭಿವ್ಯಕ್ತಿಗಿಂತಲೂ ವಸ್ತುವಿಗೆ ಮಹತ್ವ ನೀಡಿದರು. ಆದ್ದರಿಂದಲೇ ಇವರ ಅಭಿವ್ಯಕ್ತಿ ಶೈಲಿ ಸರಳವಾಗಿದೆ.

ನಂತರ ಎರಡನೇ ಹಂತರ ಲೇಖಕಿಯರಿಗೆ ಮೊದಲ ಹಂತದ ಲೇಖಕಿಯರಂತೆ ಸಾಹಿತ್ಯ ರಚಿಸುವುದು ಅನಿವಾರ್ಯವಾಗದೇ, ಆಸಕ್ತಿಯ ಮತ್ತು ಮನರಂಜನೆಯ ಸಂಗತಿಯಾಗಿತ್ತು, ಈ ಹಂತದ ಲೇಖಕಿಯರ ಕಥೆ ಕಾದಂಬರಿಗಳಿಗೆ ಕೌಟುಂಬಿಕ ಚೌಕಟ್ಟಿನ ಒಳ ಅನುಭವಗಳೇ ವಸ್ತುಗಳಾದವು. ಇಂತಹವರಲ್ಲಿ ಎಂ.ಕೆ.ಇಂದಿರಾ, ಹೆಚ್.ಎಸ್.ಸಾವಿತ್ರಮ್ಮ, ಅನುಪಮ ನಿರಂಜನರ ಕೃತಿಗಳು ಗಮನಾರ್ಹವಾಗಿವೆ.

ಆಧುನಿಕ ಕನ್ನಡ ಸಾಹಿತ್ಯದ ಮೂರನೇ ಹಂತದ ಸಾಹಿತ್ಯಿಕ ಸಂದರ್ಭವನ್ನು ಗಮನಿಸಿದಾಗ, ಮೊದಲಿನ ಎರಡು ಹಂತಗಳ ಲೇಖಕಿಯರ ರಚನೆಗಳಲ್ಲಿ ಕಾಣದೇ ಇರುವ ಬದಲಾವಣೆಗಳನ್ನು ಪ್ರಸ್ತುತ ಸಂದರ್ಭದ ಲೇಖಕಿಯರ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ಇತ್ತೀಚಿನ ಮಹಿಳಾ ಸಾಹಿತ್ಯ ಸೃಷ್ಟಿಯಲ್ಲಿ ವಸ್ತು, ಅಭಿವ್ಯಕ್ತಿ ದೃಷ್ಟಿಯಿಂದ ಗಮನಾರ್ಹವಾದ ಬದಲಾವಣೆ ಬೆಳವಣಿಗೆಗಳನ್ನು ಕಾಣಬಹುದಾಗಿದೆ. ಈ ಮೊದಲು ಲೇಖಕಿಯರ ಕೃತಿಗಳಲ್ಲಿ ಕಾಣದೇ ಇರುವ ಪ್ರತಿ ಸಂಸ್ಕೃತಿಯ ಸಂವೇದನೆಗಳು, ಚಾರಿತ್ರಿಕ ಪ್ರಜ್ಞೆ, ಸ್ತ್ರೀವಾದಿ ಚಿಂತನೆ, ಪ್ರಾದೇಶಿಕತೆಯನ್ನು ಕಾಣಬಹುದು. ಪುರುಷ ಪ್ರಧಾನ ವ್ಯವಸ್ಥೆಯ ಸ್ಥಾಪಿತ ಮೌಲ್ಯಗಳ ಶೋಧದೊಂದಿಗೆ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವ ಕಾಳಜಿಗಳನ್ನು ಇಂದಿನ ಲೇಖಕಿಯರ ಕೃತಿಗಳಲ್ಲಿ ಕಾಣಬಹುದಾಗಿದೆ.

ಮಹಿಳೆ ತನ್ನ ಅಂತರಂಗದ ಒಳತೋಟಿಗಳನ್ನು ಹಾಗೂ ಬಾಹ್ಯ ಬದುಕಿನಲ್ಲಿ ಎದುರಿಸುವ ಸಮಸ್ಯೆಗಳ ಕುರಿತು, ಮತ್ತು ಹೆಣ್ಣು-ಗಂಡಿನ ಸಂಬಂಧಗಳ ಕುರಿತು ಮಡಿವಂತಿಕೆಯ ಗೆರೆಯನ್ನು ದಾಟಿ, ಮೈಚಳಿ ಬಿಟ್ಟು ಬಿಚ್ಚು ಮನಸ್ಸಿನಿಂದ ಪ್ರಾಮಾಣಿಕವಾಗಿ ಅಭಿವ್ಯಕ್ತಿಸಲು ಸಾಧ್ಯವಾಗದಂತಹ ಸವಾಲುಗಳನ್ನು ಎದುರಿಸುತ್ತಿದ್ದಾಳೆ. ಅಮೃತಾ ಪ್ರೀತಂ,

ಮಾಧವಿ ಕುಟ್ಟಿಯರಂತಹ ದಿಟ್ಟ ಲೇಖಕಿಯರು ಕನ್ನಡದಲ್ಲಿ ಮುಂದೆ ಬಾರದೇ ಇರಲು ಇಂತಹ ಅನೇಕ ಕಾರಣಗಳಿವೆ. ಸಾರಾ ಅಬೂಬಕ್‌ರಂತಹ ಲೇಖಕಿಯರು ಎದುರಿಸಿದ ಸಮಸ್ಯೆಗಳನ್ನಿಲ್ಲಿ ನೆನಪಿಸಿಕೊಳ್ಳಬಹುದು. ಕೆಲವು ಲೇಖಕಿಯರು ಸಂಪ್ರದಾಯಬದ್ಧವಾಗಿ ಪ್ರತಿಭಟಿಸಿದ್ದಾರೆ. ಸಾರಾ ಅಬೂಬಕ್ಕರ್, ಗೀತಾ ನಾಗಭೂಷಣ, ಬಿ.ಟಿ. ಲಲಿತಾನಾಯಕ್ ಅವರು ತಮ್ಮ ಜನಾಂಗದ ಸಂವೇದನೆಗಳನ್ನು ಕಥೆ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಈ ಕೆಲವು ಸಾಧ್ಯತೆಗಳನ್ನು ಲೇಖಕಿಯರು ಸಾಧಿಸಿದ್ದಾರೆಂಬ ಸಮಾಧಾನ ಒಂದು ಕಡೆಯಾದರೆ ಇನ್ನೊಂದು ಕಡೆ ಲೇಖಕಿ ತಾನು ಆಯ್ದುಕೊಂಡ ವಸ್ತುವನ್ನು ಅಭಿವ್ಯಕ್ತಿಸುವ ರೀತಿಯಲ್ಲಿ ಪ್ರಗತಿ ಕಾಣದೆಯಿರುವ ಅಸಮಾಧಾನವೂ ಇದೆ. ತಮ್ಮ ಅನುಭವದ ಪರಿಧಿಯನ್ನು ವಿಸ್ತರಿಸುವ ಹಾಗೂ ತಮ್ಮ ಭಾವನೆಗಳಿಗೆ ತಕ್ಕ ಭಾಷೆಯನ್ನು ದುಡಿಸಿಕೊಳ್ಳುವ ಸವಾಲು ಲೇಖಕಿಯರದಾಗಿದೆ. ತಮ್ಮ ಅಸ್ತಿತ್ವಕ್ಕಾಗಿ ಹೋರಾಡುವುದು, ತಾವು ಎಚ್ಚರಗೊಳ್ಳುವ, ಎಚ್ಚರಗೊಳಿಸುವ ಮತ್ತು ತಮ್ಮ ಆಭಿವ್ಯಕ್ತಿಯನ್ನು ಕಲೆಯಾಗಿಸುವ ದೊಡ್ಡ ಸವಾಲು ಅವರೆದುರಿಗಿದೆ.

ಇಲ್ಲಿಯವರೆಗೆ ನಮಗೆ ಲಭ್ಯವಿರುವ ಸ್ತ್ರೀ ಕುರಿತಾದ ಅಧ್ಯಯನ ಪುರುಷಪ್ರಧಾನ ಅಧ್ಯಯನವೇ ಆಗಿದೆ ಅಥವಾ ಮಹಿಳೆ ಪುರುಷ ಇಬ್ಬರು ಅಭ್ಯಸಿಸಿದ ಅಧ್ಯಯನವೇ ಆಗಿದೆ. ಆದರೆ ಮಹಿಳೆ ಮಹಿಳೆಯನ್ನು ಕುರಿತು ಮಾಡಿದ ಅಧ್ಯಯನ ತೀರಾ ವಿರಳ. ಮಹಿಳೆ ಪ್ರತ್ಯೇಕವಾಗಿ ಆಕೆಯ ಸಮಸ್ಯೆಗಳ ಕುರಿತು ಆಕೆಯೇ ನಡೆಸಿದ ಸ್ವತಂತ್ರ ಅಧ್ಯಯನಗಳು ತೀರಾ ಅಪರೂಪ. ಅಂತೆಯೇ ಇಂದು ನಮಗೆ ಸಿಗುವ ಮಹಿಳೆಯ ಚಿತ್ರ ಪುರುಷ ಪ್ರಧಾನವಾದದ್ದು. ಪ್ರಾಚೀನ ಕಾಲದ ನಮ್ಮ ಸಾಹಿತ್ಯವನ್ನು ಅವಲೋಕಿಸಿದಾಗ ಮಹಿಳೆ ಅಬಲೆ, ಪ್ರದರ್ಶನದ ವಸ್ತು, ಭಾವನಾಜೀವಿ ಅಪಕ್ವಬುದ್ಧಿಯುಳ್ಳವಳು ಎಂದು ಮುಂತಾದ ವ್ಯಕ್ತಿ ಚಿತ್ರಣವನ್ನೇ ಕಾಣುತ್ತೇವೆ. ಹಲವು ಸಾರಿ ಒಂದೇ ರೀತಿಯ ವಿವರಣೆಯನ್ನು ಮಹಿಳೆಯರ ಕುರಿತು ಮಾಡಿದ್ದನ್ನು ನೋಡುತ್ತೇವೆ.

೨೧ ನೇ ಶತಮಾನದ ಮಹಿಳೆಯ ರೂಪ, ಸ್ಥಿತಿಗತಿಗಳ ಅಧ್ಯಯನ ಮಾಡುವಾಗ ಈ ಮೊದಲು ಗ್ರಹಿಸಲ್ಪಟ್ಟ ಹಾಗೂ ತಾರತಮ್ಯಗಳಿಂದ ಕೂಡಿದ ವ್ಯಾಖ್ಯಾನ ತಿಳುವಳಿಕೆಗಳನ್ನು ತಿರಸ್ಕರಿಸಬೇಕಾಗುತ್ತದೆ. ೨೧ನೇ ಶತಮಾನದ 'ಸ್ತ್ರೀ ಶಕ್ತಿ' ಯೆಂಬ ಹೊಸ ಮನೋದಾರ್ಢ್ಯವನ್ನು ಮೈಗೂಡಿಸಿಕೊಂಡಿದ್ದಾಳೆ. ಇಂದು ಎಲ್ಲೆಡೆಯಲ್ಲಿಯೂ ಸ್ತ್ರೀ ಸಬಲೀಕರಣದ ಮಾತು ಕೇಳಿಬರುತ್ತಿದೆ. ತನ್ನನ್ನು ತಾನು ಅರಿಯಲು ಪುರುಷ ಪ್ರಧಾನವಾದ ಅಧ್ಯಯನ ದೃಷ್ಟಿ ಅಭಿಪ್ರಾಯ ಬೇಕಾಗಿಲ್ಲ. 'ಮಹಿಳೆ ಅಂದರೆ ಇಷ್ಟೆಯೇ?' ಎನ್ನುವ ಕಾಲ ಹೋಗಿ 'ಮಹಿಳೆ ಅಂದರೆ ಇಷ್ಟೆ ಅಲ್ಲ ಇನ್ನೂ ಎಷ್ಟೋ ಏನೋ?'[೪] ಎನ್ನುವ ಹಾಗೆ ಆಗಿದೆ. ತನ್ನ ಕಾರ್ಯಕ್ಷೇತ್ರದಲ್ಲಿ ಮಹಿಳೆ ಇಂದು ಏನೆಲ್ಲವನ್ನು ಅಳವಡಿಸಿಕೊಂಡಿದ್ದಾಳೆ.

ಗಾಂಧೀಜಿಯವರು ಹೇಳಿದಂತೆ 'ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ಸಂಘಟಿತರಾಗಿ ಪ್ರಾಮಾಣಿಕ ಹೋರಾಟ ನಡೆಸಬೇಕು. ಕಂದಾಚಾರದ ಬದುಕಿಗೆ ವಿದಾಯ ಹೇಳಿ ಹೊಸದಾರಿ ಹುಡುಕಬೇಕು. ಹಕ್ಕುಗಳು ಬೇಡಿದರೆ ಉದಾರ ಮನಸ್ಸಿನಿಂದ ಕೊಡುವ ಸಮಾಜ ಇನ್ನಿಲ್ಲ, ಕಸಿದುಕೊಳ್ಳಬೇಕು.'[3] ತಾವು ಬದುಕುತ್ತಿರುವ ಸಮಾಜದ ಪುರುಷಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸದೆ, ಹಳೆಯ ಸಂಪ್ರದಾಯ ಆಚಾರಗಳನ್ನು ಸದ್ದಿಲ್ಲದೆ ಸ್ತ್ರೀಯರು ಎಲ್ಲಿಯವರೆಗೆ ಒಪ್ಪುವರೋ ಆವರೆಗೆ ಅವರ ಜೀವನದಲ್ಲಿ ಬದಲಾವಣೆಯ ಕ್ರಾಂತಿ ಸಾಧ್ಯವಿಲ್ಲ.

ಸ್ವತಂತ್ರ ಆಲೋಚನೆಗಳನ್ನು ಸ್ವೀಕರಿಸುವ, ಆಲೋಚಿಸುವ ಉತ್ತೇಜಿಸುವ ಅವಕಾಶವಿಲ್ಲದ ನಮ್ಮ ಸಮಾಜದಲ್ಲಿ ಸಿಡಿದೆದ್ದ ಸ್ತ್ರೀಯರು ಸಂಪ್ರದಾಯವಾದಿಗಳಿಗೆ ಗೊಬ್ಬಳಿಮುಳ್ಳಿನಂತೆ ಕಾಣುತ್ತಾರೆ–ಕಾಡುತ್ತಾರೆ.

ಸ್ತ್ರೀ ವಿರೋಧಿ ವಿಚಾರ ಪ್ರವಾಹದ ವಿರುದ್ಧ ಈಜಿ, ಸಮಾಜ ಸುಧಾರಕರಾದ ವರಾಹಮಿಹಿರ, ಬಾಣ, ದೇವಣಭಟ್ಟ, ಬಸವಣ್ಣ, ರಾಜಾರಾಮ ಮೋಹನರಾಯರಂಥವರು ಜಾರಿಗೆ ತಂದ ಸ್ತ್ರೀಪರ ಧೋರಣೆಗಳ ಮೇಲೆ ಭಾರವಾದ ಬಂಡೆ ಎಳೆದು, ಸ್ತ್ರೀಯರ ಚರಿತ್ರೆಯನ್ನೆ ಭ್ರಷ್ಟವಾಗಿಸಿ, ವಿಕೃತ ಸ್ವರೂಪಕ್ಕೆ ತಂದು ನಿಲ್ಲಿಸಿ, ಮತ್ತೆ ಬಾಯಲ್ಲಿ 'ಸ್ತ್ರೀ ದೇವತೆ' ಎಂದುಚ್ಚರಿಸುವ ಹಳಸಲು ಪರಂಪರೆ ಬದಲಾಗಬೇಕು ಎಂದು ಸ್ತ್ರೀವಾದವು ಬಯಸುತ್ತದೆ.

ಮಹಿಳೆಯನ್ನು ಕೇವಲ ಹೆಣ್ಣಾಗಿಯೇ ಪರಿಗಣಿಸಿದ ಮಾನವ ಸಂಸ್ಕೃತಿಗೆ ಹೆಣ್ಣನ್ನು ಆಕೆಯ ವ್ಯಕ್ತಿತ್ವದ ಸಮಗ್ರತೆಯಲ್ಲಿ ಮನುಷ್ಯಳಾಗಿ ಗ್ರಹಿಸುವ ಅರಿವಿನ ಕಣ್ಣನ್ನು ತೆರೆಸಿದವರು ಶರಣರು. ಹೀಗೆ ಹೆಣ್ಣು ಗಂಡುಗಳನ್ನು ಮನುಷ್ಯ ಮಾತ್ರದವರೆನ್ನುವ ಸಮಾನ ನೆಲೆಯನ್ನು ಅವಲೋಕಿಸಿದ ಶರಣರ ಈ ಚಿಂತನಾ ಕ್ರಮವು ಸ್ತ್ರೀತ್ವದ ಗ್ರಹಿಕೆಯ ನೆಲೆಯನ್ನೇ ಅತ್ಯಂತ ರಚನಾತ್ಮಕವಾಗಿ ಪರಿವರ್ತಿಸುವ ಆಶಯವನ್ನು ಒಳಗೊಂಡಿದೆ. ಸ್ತ್ರೀಯನ್ನು ಕೇವಲ ಲಿಂಗ ಸಂಬಂಧಿಯಾದ ನೆಲೆಯಲ್ಲಿ ಮಾತ್ರವೇ ಭಾವಿಸಿದ, ಬಣ್ಣಿಸಿದ ಕಣ್ಣುಗಳಿಗೆ ಮಾನವೀಯತೆಯ ಸ್ಪರ್ಶ ನೀಡಿದ ಶರಣರ ಈ ವಿಧಾಯಕ ಕ್ರಮವು ಇಂದಿಗೂ ಸ್ತ್ರೀ ವಿಮೋಚನೆಯ ಮೂಲ ಮಂತ್ರವಾಗಿದೆ.

ಮುಸ್ಲಿಂ ಸಂವೇದನೆ:–

ಕನ್ನಡ ಸಾಹಿತ್ಯ ಲೋಕಕ್ಕೆ ಮುಸ್ಲಿಂ ಸಂವೇದನೆಯನ್ನು ತಂದವರು ಬಂಡಾಯ ಕಾಲಘಟ್ಟದ ಇಸ್ಲಾಂ ಮೂಲದ ಲೇಖಕರು. ಇದಕ್ಕೆ ಮೊದಲೇ ಅಂದರೆ ಬಂಡಾಯ ಪೂರ್ವದಲ್ಲಿಯೇ ಮುಸ್ಲಿಂ ಬರಹಗಳು ದಾಖಲಾದವಾದರೂ, ಅವುಗಳು ಇಸ್ಲಾಂನ

ನೈಜ ವಸ್ತು ಸ್ಥಿತಿಯನ್ನು ತೆರೆದಿಡುವಲ್ಲಿ ಸೋತವು. ಆದರೆ ಈ ಕಾಲಘಟ್ಟವು ಮುಸ್ಲಿಂ ಸಮಾಜದ ಎಲ್ಲಾ ಮುಖಗಳನ್ನು ವಿವಿಧ ಆಯಾಮಗಳಲ್ಲಿ ಪರಿಚಯಿಸ ಹೊರಟಿತು. ಬಂಡಾಯದ ಸಂದರ್ಭದಲ್ಲಿ ಮಾತಿಲ್ಲದೆ, ಧ್ವನಿಯಿಲ್ಲದೆ, ದಾಖಲೆ ಇಲ್ಲದೆ ಮೂಕವಾಗಿದ್ದ. ಅನೇಕ ಜನಾಂಗಗಳು ಮಾತನಾಡಲು ಆರಂಭಿಸಿದವು. ಬಂಡಾಯವು ಆ ಧ್ವನಿಗಳಿಗೆ ಒತ್ತು ನೀಡಿ ಪ್ರೋತ್ಸಾಹಿಸಿತು. ಕನ್ನಡ ಸಾಹಿತ್ಯದಲ್ಲಿ ಆ ಧ್ವನಿಗಳು ದಾಖಲಾದವು. ಸ್ಥಾಪಿತ ಮೌಲ್ಯಗಳನ್ನು ಮೀರುವ ಬಂಡಾಯವು ಸ್ವಾಭಾವಿಕವಾಗಿಯೇ ಪ್ರತಿಭಟನಾತ್ಮಕ ಮನೋಧರ್ಮ ಹೊಂದಿದೆ. ಇತರರ ಅಸಹನೆಗೆ ತುತ್ತಾಗಿ ತುಚ್ಛವಾಗಿ ಬದುಕಿದ, ಜನಮೂಲದಿಂದ ಬಂದು ಬರೆಯತೊಡಗಿದ ಸಾಹಿತಿಗಳು ಇಸ್ಲಾಂ ಮೂಲಭೂತ ವಾದಿಗಳಿಂದ ಮತ್ತು ಇಸ್ಲಾಮೇತರ ಮೂಲಭೂತವಾದಿಗಳಿಂದ ವಿರೋಧ ಎದುರಿಸಬೇಕಾಯಿತು. ಆದರೂ ಇಸ್ಲಾಮಿಕ್ ಸಮಾಜದಿಂದ ಬಂದ ಬಂಡಾಯದ ಕನ್ನಡ ಬರಹಗಾರರು ಮಾನವೀಯತೆಯ ಸಂವೇದನೆಗಳನ್ನೊಳಗೊಂಡ ವಾಸ್ತವ ನೆಲೆಯ ಜನಪರ ಮೂಲದಿಂದ ವಸ್ತುವನ್ನು ಪಡೆದು ಸಾಹಿತ್ಯ ಕೃಷಿಗೆ ತೊಡಗಿದರು.

ಯಾವುದೇ ಸಂಸ್ಕೃತಿಯ ಸಂವೇದನೆಗಳು ಉದ್ಭವವಾಗುವುದು ನಿರಂತರ ಸಾಂಸ್ಕೃತಿಕ ಚಿಂತನ, ಮಂಥನಗಳಿಂದ ಮಾತ್ರ. ತೀವ್ರವಾದ ಸಂವೇದನೆಗಳು ಅಕ್ಷರ ಲೋಕದ ಮೂಲಕ ಅಭಿವ್ಯಕ್ತಿ ಪಡೆಯುತ್ತವೆ. ಈ ಮೂಲಕ ಅನೇಕ ಸಾಂಸ್ಕೃತಿಕ ಸಂಘರ್ಷಗಳೂ, ಸಂಧಾನಗಳು ಏರ್ಪಡುತ್ತವೆ. ಇಂತಹ ಸಾಂಸ್ಕೃತಿಕ ಸಂಘರ್ಷದ ಫಲವಾಗಿಯೇ ಬಂಡಾಯದ ಸಂದರ್ಭದಲ್ಲಿ ಸಮಾಜದ ಅತ್ಯಂತ ನಿರ್ಲಕ್ಷಿತ ಘಟಕಗಳಾದ ದಲಿತರು, ಮಹಿಳೆಯರು ಮತ್ತು ಮುಸ್ಲಿಂ ಜನಾಂಗದ ಸಾಂಸ್ಕೃತಿಕ ಬದುಕುಗಳು ವಾಸ್ತವದ ನೆಲೆಯಲ್ಲಿ ದಾಖಲುಗೊಂಡವು. ಕನ್ನಡ ಸಾಹಿತ್ಯದಲ್ಲಿ ದಾಖಲಾಗದೇ ದೂರವೇ ಉಳಿದುಕೊಂಡು ಬಂದಿದ್ದ ಈ ಸಂಸ್ಕೃತಿಗಳು ಮತ್ತು ಸಂವೇದನೆಗಳು ಕನ್ನಡ ಸಾಹಿತ್ಯದಲ್ಲಿ ಮೂಡಿಬಂದವು.

ಈ ಬಂಡಾಯ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದಿಂದ ಹಿಂದೆಂದೂ ಕಾಣದಷ್ಟು ಮುಸ್ಲಿಂ ಕನ್ನಡ ಬರಹಗಾರರು ಬೆಳಕಿಗೆ ಬಂದರು. ಆಗ ಶ್ರೇಣೀಕೃತ ಸಮಾಜದ ಹಿನ್ನೆಲೆಯಲ್ಲಿ ಮುಸ್ಲಿಂ ಬರಹಗಾರರು ಎದುರಿಸುತ್ತಿರುವ ಸೃಜನಶೀಲತೆಯ ಬಿಕ್ಕಟ್ಟುಗಳು, ಸವಾಲುಗಳು ಎದುರಾದವು. ಆದರೆ ಈ ಬಿಕ್ಕಟ್ಟು ಮುಸ್ಲಿಂ ಲೇಖಕರಿಗೆ ತೀವ್ರವಾದಂತೆ ದಲಿತ ಲೇಖಕರಿಗೆ ತೀವ್ರವಾಗಲಿಲ್ಲ. ಒಂದು ಕಡೆ ದಲಿತ ಲೇಖಕರು ಬ್ರಾಹ್ಮಣ್ಯದ ವಿರುದ್ಧ ತಮ್ಮ ರಚನೆಗಳನ್ನು ರಚಿಸತೊಡಗಿದರೆ, ಅದೇ ಸಂದರ್ಭದಲ್ಲಿ ಮುಸ್ಲಿಂ ಲೇಖಕರೂ ಸಹ ಮೈಚಳಿ ಬಿಟ್ಟು ತಮ್ಮ ಸಾಂಸ್ಕೃತಿಕ ಬಿಕ್ಕಟ್ಟುಗಳ ಬಗ್ಗೆ ಬರೆಯತೊಡಗಿದರು. ಈ ಮೂಲಕ ಇಸ್ಲಾಂನ ಹೊಸ ಪೀಳಿಗೆಯೊಂದು ಬದುಕಿನ ಒಳನೋಟ ಗಳಿಸಿತು.

ಮುಸ್ಲಿಂ ಲೇಖಕರಾದ ಕರೀಂಖಾನ್, ನಿಸಾರ್ ಅಹಮದ್, ಅಕ್ಬರ್ ಅಲಿ, ಸನದಿ,

ಅಬ್ದುಲ್ ಮಜೀದ ಖಾನ್, ದಸ್ತಗೀರ್, ಜೀವನ್ ಅವರು ಕನ್ನಡದಲ್ಲಿ ರಚಿಸಿದರಾದರೂ ಸಹ ಅವರ ರಚನೆಗಳು ಮುಸ್ಲಿಂ ಸಮಾಜದ ಸಂವೇದನೆಗಳಾಗಲಿಲ್ಲ. ಅವರ ನಂತರದ ತಲೆಮಾರಿನವರಾದ ಫಕೀರ್ ಅಹಮದ್ ಕಟ್ಪಾಡಿ, ಬೋಳುವಾರ್ ಅಹಮದ್ ಕುಂಞ, ಸಾರಾ ಅಬೂಬಕ್ಕರ್ ಮತ್ತು ಬಾನು ಮುಷ್ತಾಖ್ ಇವರು ಕನ್ನಡ ಸಾಹಿತ್ಯದಲ್ಲಿ ಮೊಟ್ಟಮೊದಲ ಬಾರಿಗೆ ದಟ್ಟವಾದ ಮುಸ್ಲಿಂ ಸಂವೇದನೆಗಳನ್ನು ದಾಖಲಿಸಿದರು. ಆದರೆ ಮುಮ್ತಾಜ ಬೇಗಂ, ರಂಜಾನ್ ದರ್ಗಾ, ರಹಮತ್ ತರೀಕರೆ, ಬಿ.ಎಂ.ಹನೀಫ್, ಕೆ.ಶರೀಫಾ, ರಷೀದ್, ಬಷೀರ್, ಡಿ.ಬಿ.ರಜಿಯಾ ಮುಂತಾದವರ ಬರಹಗಳಲ್ಲಿ ಮುಸ್ಲಿಂ ಸಮಾಜದ ಅಂತರಂಗ ಅಲ್ಪಸ್ವಲ್ಪ ಬಿಚ್ಚಿಕೊಂಡಿತೇ ಹೊರತು ಅವು ಮುಸ್ಲಿಂ ಸಮಾಜದ ದಟ್ಟ ಅಭಿವ್ಯಕ್ತಿಗಳಾಗಲಿಲ್ಲ.

"ಕರ್ನಾಟಕದ ಸೂಫಿಗಳು" ಕೃತಿಯಲ್ಲಿ ರಹಮತ್ ತರೀಕೆರೆ ಅವರು ಇಸ್ಲಾಂ ಧರ್ಮದ ಉದಾತ್ತ ಸಂತರ ಅದ್ಭುತ ಲೋಕವನ್ನೇ ತೆರೆದಿಡುತ್ತಾರೆ. ರಂಜಾನ್ ದರ್ಗಾ, ಬಿ.ಎಂ.ಹನೀಫ್, ಬಿ.ಎಂ.ರಷೀದ್, ಬಿ.ಎಂ.ಬಷೀರ್, ಕೆ.ಶರೀಫಾ, ಬಾಬಾಜಾನ್ ಅತ್ತಾರ್, ನಜೀರ್ ಚಂದಾವರ್ ಮೊದಲಾದ ಲೇಖಕರು ವೈಚಾರಿಕ ನೆಲೆಯಲ್ಲಿ ವಿಮರ್ಶೆ, ಲೇಖನ ಕಾವ್ಯಗಳನ್ನು ರಚಿಸಿದರಲ್ಲದೆ, ಜಾತಿ ಧರ್ಮಗಳ ಚೌಕಟ್ಟನ್ನು ಮೀರಿದರು. ಕಥೆ, ಕಾದಂಬರಿಗಳ ಮೂಲಕ ಜಾತಿಯಲ್ಲಿಯ ಒಳಹೊರಗುಗಳನ್ನು ಪ್ರಸ್ತಾಪಿಸುತ್ತಲೇ ಜಾತಿ ನೆಲೆಯಿಂದ ಹೊರಗೆ ನಿಂತವರು ಮಾನವೀಯ ನೆಲೆಗಳನ್ನು ತಮ್ಮದಾಗಿಸಿಕೊಂಡವರು. ಫಕೀರ ಅಹ್ಮದ್ ಕಟ್ಪಾಡಿ, ಸಾರಾ ಅಬೂಬಕ್ಕರ್, ಬಾನು ಮುಷ್ತಾಬ್ ಮುಂತಾದವರಿದ್ದಾರೆ. ಬಂಡಾಯ ಸಾಹಿತ್ಯದಲ್ಲಿಯ ವೈಚಾರಿಕ ಪರಂಪರೆಗೆ ಸೇರ್ಪಡೆಯಾಗುತ್ತಿರುವ ಇಸ್ಲಾಂ ಮೂಲದ ಅನೇಕ ಯುವ ಬರಹಗಾರರು ಬರುತ್ತಿದ್ದಾರೆ.

ಬಂಡಾಯ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆಗಳನ್ನು ಗುರುತಿಸುವಾಗ ಎರಡು ಪ್ರಶ್ನೆಗಳು ಎದುರಾಗುತ್ತವೆ. ಕೇವಲ ಮುಸ್ಲಿಮರು ದಾಖಲಿಸಿದ್ದೇ ಮುಸ್ಲಿಂ ಸಂವೇದನೆಯೋ? ಅಥವಾ ಇಸ್ಲಾಂ ಸಂಸ್ಕೃತಿಯ ಬಗ್ಗೆ ಮುಸ್ಲಿಮೇತರರು ಬರೆದದ್ದು ಮುಸ್ಲಿಂ ಸಂವೇದನೆಯೋ? ಎಂಬ ಪ್ರಶ್ನೆ ಎದುರಾಗುತ್ತದೆ. ಮುಸ್ಲಿಂ ಸಮಾಜದ, ಜೀವಂತ, ಸಾಂದ್ರ, ದಟ್ಟ ಅನುಭವಗಳನ್ನು ಯಾರೇ ತಿಳಿಸಿರಲಿ ಅದು ಆ ಸಮಾಜದ ಅನನ್ಯ ಚಿತ್ರಣವಾಗುತ್ತದೆ, ನಿಜ. ಆದರೂ ಆ ಸಮಾಜದಲ್ಲೇ ಹುಟ್ಟಿ ಬೆಳೆದು, ಅನುಭವಿಸಿ ಬರೆದದ್ದಕ್ಕೂ, ದೂರದಿಂದ ನೋಡಿ, ಓದಿ, ಯಾರಿಂದಲೋ ಕೇಳಿ ಬರೆದಿದ್ದಕ್ಕೂ ಬಹಳ ವ್ಯತ್ಯಾಸವಿರುತ್ತದೆ. ಬದುಕಿನಲ್ಲಿ ಕಂಡುಂಡು ಬರೆದ ದಟ್ಟ ಅನುಭವಗಳು ಹೆಚ್ಚು ಜೀವಂತ, ಹೆಚ್ಚು ಸಾಚಾ ಅನುಭವಗಳಾಗಿರುತ್ತವೆ.

ಇಸ್ಲಾಂ ಧರ್ಮವೆಂದರೆ ಕೇವಲ ಬಹುಪತ್ನಿತ್ವ, ತಲ್ಲಾಖ್, ಮೆಹರ್‌ಗಳೆಂದೋ ಅಥವಾ ಡಜನ್‌ಗಟ್ಟಲೇ ಮಕ್ಕಳು ಹುಟ್ಟಿಸುವ ಜನ ಎಂದೋ ಅಥವಾ ಆಯುಧ

ಉತ್ಪಾದನೆಯ ಕಸುಬಿನ ರಾಷ್ಟ್ರವು ಜಾಗತಿಕ ಮಟ್ಟದಲ್ಲಿ ಭಯೋತ್ಪಾದಕರೆಂದು ಬಿಂಬಿಸಲು ನಡೆಸುತ್ತಿರುವ ವ್ಯವಸ್ಥಿತ ಅಪಪ್ರಚಾರವೇ ನಿಜವೆಂದು ತಿಳಿದಿರಬಹುದು. ಇಸ್ಲಾಂ ಮೂಲದಿಂದಲೇ ಬಂದಿರುವ ಕೆಲವು ಲೇಖಕರು ಸಹ ಇಸ್ಲಾಂ ಸಂಸ್ಕೃತಿಯನ್ನು ಕನ್ನಡದಲ್ಲಿ ಬಿಂಬಿಸಿದ್ದೂ ಸಹ ಹೀಗೆಯೇ ಇದೆ. ಆದರೆ ಇದನ್ನೂ ಮೀರಿ ಮುಸ್ಲಿಂ ಸಮಾಜ ಬದುಕಿದೆ. ಅಂತಹ ಸಮಾಜದ ಆಂತರಿಕ ಆತಂಕ, ತಲ್ಲಣ, ನೋವುಗಳನ್ನು ವಾಸ್ತವದ ನೆಲೆಯಲ್ಲಿ, ಕಥೆ, ಕಾದಂಬರಿ ಮತ್ತು ಕಾವ್ಯವಾಗಿಸಿದವರೂ ಇದ್ದಾರೆ. ಇಸ್ಲಾಂನ ಜನಪರ ಆಶಯಗಳನ್ನು, ಬದುಕಿನ ಮೂಲಗಳನ್ನು ಯಾವ ಭಾವಾವೇಶಕ್ಕೂ ಒಳಗಾಗದೇ ಕನ್ನಡದಲ್ಲಿ ದಾಖಲಿಸಿದ ಸಮನ್ವಯ ಸಂತ ಫಕೀರ್ ಅಹ್ಮದ್ ಕಟ್ಪಾಡಿಯವರಾದರೆ, ಇಸ್ಲಾಂ ಸಮಾಜವನ್ನು ವಿಸ್ಮಯಕಾರಿಯಾಗಿ ತೆರೆದಿಡುವಲ್ಲಿ ಬೋಳುವಾರು ಮಹ್ಮದ್ ಕುಂಞ ಯಶಸ್ವಿಯಾಗಿದ್ದಾರೆ. ಸಾರಾ ಅಬೂಬಕ್ಕರವರ ಕತೆ, ಕಾದಂಬರಿಗಳು, ಮುಸ್ಲಿಂ ಹೆಣ್ಣಿನ ನೋವುಗಳನ್ನು ಅತ್ಯಂತ ಸರಳವಾಗಿ ಮತ್ತು ಭಾವುಕವಾಗಿ ಚಿತ್ರಿಸಿದರೆ, ಬಾನು ಮುಷ್ತಾಖ್‌ರವರು ಮೂಲಭೂತವಾದವನ್ನು ಪ್ರಶ್ನಿಸುತ್ತಾ ಹೋಗುತ್ತಾರೆ. ಸಾರಾ ಅವರ ಮುಸ್ಲಿಂ ಹೆಣ್ಣಿನ ಪಾತ್ರಗಳು ಸಾಂಪ್ರದಾಯಿಕ ಮಿತಿಯಲ್ಲೇ ವರ್ತಿಸಿದರೆ, ಬಾನುರವರ ಮುಸ್ಲಿಂ ಹೆಣ್ಣಿನ ಪಾತ್ರಗಳು ಸಂಪ್ರದಾಯ ಮೀರುವ ಪ್ರಯತ್ನ ಮಾಡುತ್ತವೆ.

ಹಾಗೆಯೇ ಕನ್ನಡದ 'ಮುಸ್ಲಿಂ ಸಂವೇದನೆಯು' ಅನೇಕ ಹೊಸ ಹೊಸ ಶಬ್ದಗಳ ಪರಿಚಯ ಮಾಡುತ್ತದೆ. ಕನ್ನಡ ಸಾಹಿತ್ಯದ ಶಬ್ದ ಬಂಡಾರವನ್ನು ಸಾಕಷ್ಟು ಶ್ರೀಮಂತಗೊಳಿಸಿದ್ದು, ವಿಸ್ತಾರಗೊಳಿಸಿದೆ. ಬಂಡಾಯ ಸಂದರ್ಭದ ಕನ್ನಡ ಸಾಹಿತ್ಯ ಅನೇಕ ಇಸ್ಲಾಂ ಮೂಲದ ಶಬ್ದಗಳನ್ನು ಪಡೆಯಿತು. ಈ ಎರವಲು ಕೊಡುಕೊಳ್ಳುವ ಸಂಸ್ಕೃತಿಯಿಂದ ಎರಡೂ ಸಾಹಿತ್ಯ ಲೋಕಗಳು ಶ್ರೀಮಂತವಾದವು. ಇಸ್ಲಾಂ ಪರಿಚಯಿಸಿದ ಕನ್ನಡ ಲೋಕದಲ್ಲಿ ವಿಶಿಷ್ಟ ಪದಗಳು ಬಳಕೆಯಾದವು.

ಹೊಸ ತಲೆಮಾರು ಹುಟ್ಟು ಹಾಕಿದ ಈ ಮುಸ್ಲಿಂ ಸಂವೇದನೆಯನ್ನು ದಾಖಲಿಸಿದ ಬರಹಗಾರರು ಮತೀಯ ಮಿತಿಗಳನ್ನು ಮೀರಿ ಬೆಳೆದಿದ್ದಾರೆ. ಅವರು ಆ ಜನಾಂಗದಲ್ಲಿ ಹುಟ್ಟಿರಬಹುದಾದರೂ, ಅವರು ಮಾನವ ಜನಾಂಗಕ್ಕೆ ನೀಡಿದ ಕೊಡುಗೆಯನ್ನು, ಸಾಹಿತ್ಯಕ್ಕೆ ನೀಡಿದ ಶ್ರೀಮಂತಿಕೆಯನ್ನು ಜಾತಿ, ಮತಗಳ ಗೆರೆ ಕೊರೆದು ಸೀಮಿತಗೊಳಿಸಲು ಸಾಧ್ಯವಿಲ್ಲ.

ಕನ್ನಡದಲ್ಲಿ ಬಾಗಿಲು ತೆರೆದು ಒಳಬಂದ "ಮುಸ್ಲಿಂ ಸಂವೇದನೆ" ಆರೋಗ್ಯಕರ ತಾತ್ವಿಕತೆಯನ್ನು, ಜೀವಪರ ಮೌಲ್ಯಗಳನ್ನು, ಕರ್ನಾಟಕದ ಸಾಹಿತ್ಯದಲ್ಲಿ ಮೂಡಿಸಿದೆ. ಅನೇಕ ಸಂಘರ್ಷ, ಪ್ರತಿರೋಧಗಳನ್ನು ಎದುರಿಸುತ್ತಲೇ ಸಾಂಸ್ಕೃತಿಕ ದಾಖಲೆ ಪಡೆದಿದೆ. ಕನ್ನಡ ಸಾಹಿತ್ಯದ ವಸ್ತು ಮತ್ತು ವಿಷಯಗಳನ್ನು ಹೊಸತುಗೊಳಿಸಿದೆ. ಹೊಸ ಅನುಭವ ಪ್ರಪಂಚವನ್ನು ಕನ್ನಡಿಗರಿಗೆ ತೆರೆದು ತೋರಿದೆ. ಜರೂರಾದ ಹೊಸ ಮೌಲ್ಯಗಳನ್ನು, ಮಾದರಿಗಳನ್ನು ಪರಿಚಯಿಸಿದೆ.

ಕ್ಷುಲ್ಲಕ ಬುರ್ಖಾದಂತಹ ವಿಷಯವೇ ಆಗಲಿ ಹೆಣ್ಣಿನ ಬದುಕಿನ ಸುತ್ತ ಹೆಣೆದ ಸಮಸ್ಯೆಯೇ ಆಗಲಿ, ಹೆಣ್ಣಿಗೆ ತೆರೆದುಕೊಂಡ ಅಕ್ಷರ ಲೋಕವೇ ಇರಲಿ, ಮತಾಂತರದಂತಹ ಗಂಭೀರ ಸಮಸ್ಯೆಯೇ ಆಗಲಿ, ಅಂತರಜಾತಿಯ ವಿವಾಹ, ತಲ್ಲಾಖ್, ನಿಕಾಹ್‌ಗಳಂತಹ ಜಟಿಲ ಸಮಸ್ಯೆಗಳೇ ಆಗಲಿ ದಾಖಲಾದ ಕಾಲವಿದು. ಬದಲಾವಣೆಗೆ ಸ್ಪಂದಿಸಿದ ಸಹಜ ಮಾನವೀಯತೆಯಿಂದ ಕೂಡಿದ, ಸರಳ ವೈಚಾರಿಕತೆಗಳಿಂದ ತುಂಬಿದ ಈ ಸಂವೇದನೆಗಳು ಎಲ್ಲರ ಗಮನ ಸೆಳೆದವು.

ಒಟ್ಟಾರೆಯಾಗಿ, ಈ ಎಲ್ಲಾ ದೃಷ್ಟಿಕೋನಗಳಿಂದಲೂ ಪ್ರತಿಭಟನಾತ್ಮಕ ನೆಲೆಯಲ್ಲಿ ಸಾಹಿತ್ಯ ರಚಿಸಹೊರಟ ಕೆಲವು ಪ್ರಭಾವಿ ಮುಸ್ಲಿಂ ಲೇಖಕರು, ತಮ್ಮ ಧರ್ಮದ ಸಂಪ್ರದಾಯವಾದಿಗಳಿಂದಲೇ ಅನೇಕ ರೀತಿಯಲ್ಲಿ ಆಪಾದನೆ, ಹಲ್ಲೆಗಳನ್ನು ಎದುರಿಸಿದ್ದಾರೆ. ಆದರೂ ಇಂದು "ನಾವು ಏನನ್ನೂ ಹೇಳಲು ಸಾಧ್ಯವಾಗುವುದಿಲ್ಲವೋ, ಅದನ್ನು ಇನ್ನು ಐವತ್ತು ವರ್ಷಗಳ ಬಳಿಕವಾದರೂ ಹೇಳಲು ಸಾಧ್ಯವಾಗುತ್ತದೆ. ಅಷ್ಟರ ಮಟ್ಟಿನ ತಳಪಾಯವನ್ನು ನಮ್ಮ ಮುಸ್ಲಿಂ ಲೇಖಕರು ಹಾಕಿದ್ದಾರೆ ಎಂಬುದು ನನ್ನ ವಿಶ್ವಾಸ"[೬] ಎಂದು ಸಾರಾ ಅವರು ಎಲ್ಲಾ ಮುಸ್ಲಿಂ ಲೇಖಕರ ಪರವಾದ ಅಭಿಪ್ರಾಯ ಕೊಡುತ್ತಾರೆ.

ಬಂಡಾಯದ ಆರಂಭದ ದಿನಗಳಲ್ಲಿ ರೊಚ್ಚು ತುಂಬಿಕೊಂಡು ಹೊರ ಹೊಮ್ಮಿದ ಕನ್ನಡದ ಮುಸ್ಲಿಂ ಸಾಹಿತ್ಯ ಬರಬರುತ್ತ ಆರಂಭದ ಉತ್ಸಾಹ ಕಳೆದುಕೊಂಡು ಸಮಸ್ಥಿತಿಗೆ ಬರುತ್ತಿದೆ. ಮುಸ್ಲಿಂ ಸಮಾಜದ ಸಾಂಸ್ಕೃತಿಕ ಬದುಕಿನ ಒಳ ಹರಿವುಗಳು, ಸಂಧಾನಗಳೂ, ಸಂಘರ್ಷಗಳೂ ನಿರೀಕ್ಷಿಸುವ ಮುಗ್ಧ ಮನಗಳು, ಹೊಸ ಬದುಕುಗಳನ್ನು ರೂಪಿಸಿಕೊಳ್ಳುತ್ತಾರೆ. ಹೊಸ ವಿಚಾರಗಳನ್ನು ಅಳವಡಿಸಿಕೊಳ್ಳುತ್ತಾರೆ. ಮಾನವನ ಬದುಕಿಗೊಂದು ಸಂಕೀರ್ಣ ಚೌಕಟ್ಟು ನಿರ್ಮಿಸಿಕೊಳ್ಳುತ್ತಾರೆ. ಸಾಂಸ್ಕೃತಿಕವಾಗಿ ಮುಖಾಮುಖಿಯಾಗುತ್ತಾರೆ. ಮನೆಯ ಬಾಗಿಲು, ಕಿಟಕಿಗಳನ್ನು ತೆರೆದಿಟ್ಟು ಹೊಸ ಬೆಳಕು ಗಾಳಿಯನ್ನು ಸ್ವಾಗತಿಸುವುದು ಇಂದು ಅನಿವಾರ್ಯದ ಬದಲಾವಣೆಯಾಗುತ್ತಿದೆ.

ದಲಿತ ಸಂವೇದನೆ :-

ಇತ್ತೀಚಿನ ವರ್ಷಗಳಲ್ಲಿ ಕಾಣಿಸಿಕೊಂಡಿರುವ ದಲಿತ ಸಾಹಿತ್ಯವು ನಮ್ಮ ಸಮಾಜದ ಹೊಸ ದನಿಯಾಗಿದೆ. ಆರ್ಥಿಕ, ಸಾಮಾಜಿಕ, ತುಳಿತಕ್ಕೆ ಒಳಗಾಗಿ ಪಶುಸಮಾನ ಬದುಕನ್ನು ಬದುಕಿದ ಜನಗಳಲ್ಲಿ ಉಂಟಾದ ಅಕ್ಷರ ಕ್ರಾಂತಿಯೇ ಈ ಸಾಹಿತ್ಯದ ಉಗಮಕ್ಕೆ ಕಾರಣವಾಯಿತು. ಸಾಹಿತ್ಯ ಕ್ಷೇತ್ರದಲ್ಲಿ ಅಸ್ಪೃಶ್ಯ ಜನಾಂಗದಿಂದ ಅಭಿವ್ಯಕ್ತಿ ಸಾಧ್ಯವಾಗಿ

ಪ್ರತಿಭಟನೆಯ ಗಟ್ಟಿದನಿ ಕೇಳಿಸಿದ್ದು, ನವ್ಯರ ನಂತರದ ಸಾಹಿತ್ಯ ಕಾಲಘಟ್ಟದಲ್ಲಿ ಇದು ಕನ್ನಡ ಸಾಂಸ್ಕೃತಿಕ ಕ್ಷೇತ್ರದ ಮಹತ್ವದ ಘಟನೆ. ವಿವಿಧ ಕ್ಷೇತ್ರಗಳಲ್ಲಿ ವಿಸ್ತರಿಸಿದ ಆರ್ಥಿಕ ಚಟುವಟಿಕೆ, ಸಂಪರ್ಕ ಸಾಧನ, ಶಿಕ್ಷಣ ಮುಂತಾದವುಗಳಿಂದ ಉಂಟಾಗಿದ್ದ ಸುಧಾರಣೆಯ ಪರಿಣಾಮದಿಂದಾಗಿ ಕೆಳವರ್ಗದ ಮತ್ತು ಕೆಳ ಮಧ್ಯಮ ವರ್ಗದ ಜನತೆ ಮತ್ತು ಅದರ ಆಶಯಗಳು ಹಿಂದೆಂದಿಗಿಂತಲೂ ಹೆಚ್ಚಾಗಿ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದವು.

ಅಸ್ಪೃಶ್ಯ ಜನಾಂಗದವರು ಕೂಡ ಸಾಹಿತ್ಯದ ಮೂಲಕ ತಮ್ಮ ಸಂವೇದನೆಗಳಿಗೆ ಅಭಿವ್ಯಕ್ತಿ ಕೊಟ್ಟಿದ್ದು ಇನ್ನೊಂದು ಪ್ರಮುಖ ಬೆಳವಣಿಗೆ. ದಲಿತ ಸಾಹಿತಿಯಾದವನು ಹಸಿವಿನ, ಅವಶ್ಯಕತೆಯ, ನೋವಿನ ಅನುಭವಗಳನ್ನು ಸಾಹಿತ್ಯದ ಮೂಲಕ ದಾಖಲಿಸಿದ ಕಾಲವಿದು. ಹೀಗೆ ಒಂದು ಸಾಮಾಜಿಕ ಜವಾಬ್ದಾರಿಯನ್ನು ಹೊತ್ತ ದಲಿತ ಸಾಹಿತ್ಯವು ತನ್ನ ಜನಾಂಗಕ್ಕೆ, ತನ್ನ ಅನುಭವಗಳನ್ನು ಸಾಹಿತ್ಯದ ಮೂಲಕ ತಲುಪಿಸುವ ತವಕ ಹೊಂದಿತ್ತು. ಇಂತಹ ಒಂದು ಜನಾಂಗವನ್ನು ಕಟ್ಟುವ ಚಳುವಳಿಯಲ್ಲಿ ತೀವ್ರವಾದ ಆಸಕ್ತಿ ಹೊಂದಿದ್ದರಿಂದಲೇ ಸಮಾಜದಲ್ಲಿನ ಭಾಷೆ, ರಾಜಕೀಯ, ಜಾತೀಯ ಕಲಹಗಳಂತಹ ಸಮಸ್ಯೆಗಳ ಬಗೆಗೆ ದಲಿತ ಸಾಹಿತ್ಯ ತನ್ನ ಮುಖ್ಯ ಕೇಂದ್ರ ಪ್ರಜ್ಞೆಯನ್ನು ವಿಸ್ತರಿಸಿತು. ಸಮಾಜದಲ್ಲಿ ಹೊಸ ಬದಲಾವಣೆಯನ್ನು, ಸಮಾನತೆಯನ್ನು ತರುವ ಸಲುವಾಗಿ ರೂಪು ತಲೆಯುವ ಚಳುವಳಿಗಳಿಗೆ ದಲಿತ ಸಾಹಿತ್ಯ ಪ್ರೇರಕ ಶಕ್ತಿಯಾಯಿತು. ಇಂತಹ ಐತಿಹಾಸಿಕ ದಲಿತ ಸಾಹಿತ್ಯದಲ್ಲಿ ಮನುಷ್ಯ ಮತ್ತು ಆತನ ನೋವುಗಳೇ ಕೇಂದ್ರಬಿಂದುವಾಯಿತು. ಮನುಷ್ಯನ ನೋವಿನ ಘಟನೆಗಳು, ಜಾತೀಯತೆಯಿಂದ ಉಂಟಾಗಿರುವ ಸಮಸ್ಯೆಗಳು, ಈ ಕಾರಣಕ್ಕಾಗಿ ಪಡುವ ಯಾತನೆಗಳು, ಮನುಷ್ಯರ ನಡುವಿರುವ ಅಡ್ಡಗೋಡೆಗಳು ಮತ್ತು ಅವುಗಳ ಹಿನ್ನೆಲೆ ಇವುಗಳೆಲ್ಲದರ ಇತಿಹಾಸ ಮೂಲಗಳನ್ನು ಅತ್ಯಂತ ಯಶಸ್ವಿಯಾಗಿ ಕಟ್ಟಿಕೊಡುವ ಕೆಲಸ ದಲಿತ ಸಾಹಿತ್ಯದ ಕಾಲಘಟ್ಟದಲ್ಲಿ ಜರುಗಿತು.

ದಲಿತ ಸಾಹಿತ್ಯವು ಮುಖ್ಯವಾಗಿ ಎರಡು ಮಹತ್ವದ ಉದ್ದೇಶಗಳನ್ನು ಹೊಂದಿ ಆ ದಿಕ್ಕಿನಲ್ಲಿ ಕಾರ್ಯತತ್ಪರವಾಯಿತು. ಸಾಹಿತ್ಯದ ಮೂಲಕ ತಮ್ಮ ಎಲ್ಲಾ ನೋವಿನ ಚಿತ್ರಣವನ್ನು ದಲಿತರ ಮುಂದಿಡುತ್ತಾ ತಮ್ಮ ಹಾಗೂ ತಮ್ಮ ಬದುಕಿನ ಹಿನ್ನೆಲೆಯನ್ನು ಅರಿತುಕೊಂಡು ಹೊಸ ಸಮಾಜದ ಮನುಷ್ಯನ ಜೊತೆಯಲ್ಲಿ ಹೆಜ್ಜೆಗಳನ್ನಿಡುವಂತೆ ಮಾಡುವುದು ಒಂದು ಕಡೆಯಾದರೆ ಸವರ್ಣೀಯ ಹಿಂದುಗಳಿಗೆ ಇಂತಹ ಚಿತ್ರಣವನ್ನು ಕೊಡುವುದರ ಮೂಲಕ ತಾವು ಮಾಡಿದ ತಪ್ಪಿನ ಅರಿವನ್ನು ಮೂಡಿಸುವುದು ಹಾಗೂ ಶೋಷಿತ ಜನತೆಯ ಜೀವನವನ್ನು ಕುರಿತು ಭಯ ಮತ್ತು ಅನುಕಂಪವನ್ನು ಹುಟ್ಟಿಸುವುದು ಮತ್ತೊಂದು ಉದ್ದೇಶ. ಈ ಉದ್ದೇಶಗಳ ಹಿನ್ನೆಲೆಯ ಸಾಹಿತ್ಯ ರಚನೆಯು ದಲಿತ ಜನಾಂಗದ ಪೂರ್ಣ ವಿವರಗಳನ್ನು ಅನುಭವಿಸಿದ ಮತ್ತು ಅನುಭವಿಸುತ್ತಿರುವ ದಲಿತರಿಂದ ಮಾತ್ರ ಸಾಧ್ಯವಾಯಿತೆಂಬುದು ಗಮನಾರ್ಹ ಸಂಗತಿಯಾಗಿದೆ.

ದಲಿತ ಸಮುದಾಯವು ಸಾವಿರಾರು ವರ್ಷಗಳಿಂದ ಅಕ್ಷರ ವಂಚಿತವಾಗಿತ್ತು. ದಲಿತರು ಶಿಕ್ಷಣ ಪಡೆಯುವುದೇ ಅಪರಾಧವೆಂಬ ಪರಿಸ್ಥಿತಿಯಿತ್ತು. ಆಂಗ್ಲರ ಆಗಮನ, ನಂತರದ ಸ್ವಾತಂತ್ರ್ಯೋತ್ತರ ದಿನಗಳು ಇವರಿಗೆ ಶಿಕ್ಷಣದ ಬೆಳಕನ್ನು ಕೊಟ್ಟವು. ಈ ಕಾರಣಗಳಿಂದಾಗಿ ಶೋಷಿತರು ತಮ್ಮ ಭಾವನೆಗಳನ್ನು ಅಕ್ಷರಗಳಲ್ಲಿ ಅಭಿವ್ಯಕ್ತಿಸಲು ಸಾಧ್ಯವಾಯಿತು. ಶತಮಾನಗಳಿಂದ ಅದುಮಿಟ್ಟ ಅಪರಿಚಿತ ಸಂಗತಿಗಳು, ಮನದಾಳದ ನೋವುಗಳು ವಿಶಿಷ್ಟ ರೀತಿಯಲ್ಲಿ ಸಾಹಿತ್ಯ ಕೃತಿಗಳ ಮೂಲಕ ಜನಮಾನಸವನ್ನು ತಲುಪಲು ಅವಕಾಶ ದೊರೆಯಿತು. ಶೋಷಕರ ವಿರುದ್ಧ ಸಿಡಿದೇಳುವ, ಶತಮಾನಗಳ ದಾಸ್ಯದ ಸಂಕೋಲೆಯನ್ನು ಕಿತ್ತೊಗೆಯುವ, ಆತ್ಮಾಭಿಮಾನದ ನೆಲೆಯಲ್ಲಿ ತಮ್ಮನ್ನು ಗುರ್ತಿಸಿಕೊಳ್ಳುವ ಗುರುತರ ಕಾರ್ಯ ಆರಂಭವಾಯಿತು.

ಆದರೆ 'ದಲಿತ' ಎಂದರೆ ಯಾರು ? ಯಾರು ಬರೆದದ್ದು ದಲಿತ ಸಾಹಿತ್ಯ? ಎಂಬ ಹಲವು ಬಗೆಯ ಪ್ರಶ್ನೆಗಳು ಹೆಚ್ಚು ಗೊಂದಲಕ್ಕೆ ಎಡೆಮಾಡಿಕೊಟ್ಟಿರುವುದನ್ನು ಗಮನಿಸಬಹುದು. "ಶತಶತಮಾನಗಳಿಂದ ಜನಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ, ಶೋಷಣೆಗೆ ಒಳಗಾದವರು. ಒಟ್ಟು ಸಮಾಜದೊಂದಿಗೆ ಬದುಕಲಾರದೆ ಊರ ಹೊರಗೆ ವಾಸಿಸಿ, ಕೀಳು ವೃತ್ತಿಗೆ ಅವಲಂಬಿತರಾಗಿ ತಮ್ಮ ಹೆಸರು ಹೇಳಿಕೊಳ್ಳಲು ನಾಚಿಕೆ ಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆನಿಸಿಕೊಂಡವರೆಲ್ಲರೂ ದಲಿತರೆನ್ನಿಸಿ ಕೊಳ್ಳುತ್ತಾರೆ."[೭] ಹಾಗೆಯೇ "ದಲಿತರು, ದಲಿತೇತರರು, ದಲಿತ ಪ್ರಜ್ಞೆಯಿಂದ ಅಭಿವ್ಯಕ್ತಿಪಡಿಸಿದ ಸಾಹಿತ್ಯವೇ ದಲಿತ ಸಾಹಿತ್ಯ" ಎಂದು ಪರಿಗಣಿತವಾಯಿತು. ಇದೇ ಅಭಿಪ್ರಾಯವನ್ನು ಪುರಸ್ಕರಿಸುತ್ತಾ ಡಾ. ಸಿದ್ದಲಿಂಗಯ್ಯನವರು "ಸಾಮಾಜಿಕ ತುಳಿತಕ್ಕೆ ಒಳಗಾದ ಕೆಳಜಾತಿಯ ಜನ ರಚಿಸಿದ ವಿಮೋಚನೆಯ ಸಾಹಿತ್ಯವೇ ದಲಿತ ಸಾಹಿತ್ಯ"[೮] ಎಂದಿದ್ದಾರೆ. ಹಾಗಾದ ಮಾತ್ರಕ್ಕೆ ಈ ಸಾಹಿತ್ಯ ಕೃತಿಗಳಲ್ಲಿ ನಿರಾಶೆ, ಕೀಳರಿಮೆ, ದಾಸ್ಯ ಮನೋಭಾವ ಇರುವುದಿಲ್ಲ. ಅದಕ್ಕೆ ಬದಲಾಗಿ ಸಮಾಜ ಪರಿವರ್ತನೆಯ ಕುರಿತಾದ ಆಶಾವಾದ, ಸ್ವಾಭಿಮಾನ, ಪ್ರತಿಭಟನೆಯ ಎಳೆಗಳಿರುತ್ತವೆ.

ಕನ್ನಡ ದಲಿತ ಸಾಹಿತ್ಯದ ಮೇಲೆ ಡಾ.ಬಿ.ಆರ್.ಅಂಬೇಡ್ಕರ್‌ರವರ ಪ್ರಭಾವ ಅಪಾರವಾಗಿರುವುದನ್ನು ಗಮನಿಸಬಹುದು. ಇಷ್ಟೇ ಅಲ್ಲದೆ ಆಂಧ್ರದ ವಿರಸಂ, ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್, ಕರ್ನಾಟಕದ ದಲಿತ ಕಲಾವಿದರ ಮತ್ತು ಲೇಖಕರ ಒಕ್ಕೂಟ, ಬೂಸಾ ಪ್ರಕರಣ– ಹೀಗೆ ರಾಜಕೀಯ ಮತ್ತು ಸಾಂಸ್ಕೃತಿಕ ಅಂಶಗಳ ಹಿನ್ನೆಲೆಯಲ್ಲಿ ದಲಿತ ಸಾಹಿತ್ಯ ರೂಪುಗೊಂಡಿತು. ಈ ರೀತಿಯ ಒಂದು ದಲಿತ ಸಂವೇದನಾ ಸಾಹಿತ್ಯವನ್ನು ನಾವು ಮೊದಲು ಗುರುತಿಸುವುದು ದೇವನೂರು ಮಹಾದೇವರ ಕಥಾಸಂಕಲನವಾದ 'ದ್ಯಾವನೂರು' ಕೃತಿಯಿಂದ. ೧೯೭೦ ರಲ್ಲಿ ಪ್ರಕಟವಾದ ಈ ಕೃತಿ, ಬೇರುಬಿಟ್ಟಿದ್ದ ಸಾಹಿತ್ಯ ಸಿದ್ಧಭಾಷೆ, ನುಡಿಗಟ್ಟು, ವಸ್ತು, ಅನುಭವಗಳನ್ನು ಭಂಜಕಗೊಳಿಸಿತು.

ದಲಿತ ಬರಹಗಾರರು ಪ್ರತಿಭಟನೆಯ ಮೂಲಕ ಶೋಷಿತ ಸಮಾಜಕ್ಕೆ ತಮ್ಮ ಎಚ್ಚರವನ್ನು ಸ್ವಲ್ಪ ರೊಚ್ಚಿನಿಂದಲೇ ಹೇಳಬಯಸಿದರು. ಅಲ್ಲದೆ ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ರಾಜಕೀಯ ಸಂಘಟನೆಗಳ ಅನಿವಾರ್ಯತೆಯನ್ನು ಮನಗಂಡು 'ಕರ್ನಾಟಕ ದಲಿತ ಸಂಘರ್ಷ ಸಮಿತಿ' ರೂಪುಗೊಂಡಿತು. ಮೈಸೂರು ವಲಯದಲ್ಲಿ ದೇವನೂರು ಮಹಾದೇವ, ಗೋವಿಂದಯ್ಯ, ಇಂದೂಧರ ಹೊನ್ನಾಪುರ ಮುಂತಾದವರು ಆರಂಭಿಸಿದ 'ಪಂಚಮ' ಪತ್ರಿಕೆ ದಲಿತ ಸಾಹಿತ್ಯದ ಹೊಸ ಆಲೋಚನೆ, ಅಭಿವ್ಯಕ್ತಿಗೆ ವೇದಿಕೆ ರೂಪಿಸಿಕೊಡುವಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿತು. ಈ ಪತ್ರಿಕೆಯೂ ನಾಡಿನ ತುಂಬ ಹೊಸ ಬರಹಗಾರರನ್ನು ಹುಟ್ಟು ಹಾಕಿತು. ದಲಿತರು ಬರೆದ ವಿಚಾರ, ವಿಮರ್ಶೆ, ಕಥೆ, ಕಾದಂಬರಿ, ಕಾವ್ಯಗಳು, ಹೃದಯ ಕಲಕಬಲ್ಲ ಜೀವಂತಿಕೆಯನ್ನು ಪಡೆದುಕೊಂಡವು. ದಲಿತ ಸಾಹಿತ್ಯದಲ್ಲಿ ಕಲೆಗಾರಿಕೆಗಿಂತಲೂ ವಾಸ್ತವ ಬದುಕಿನ ಬರ್ಬರತೆ ಎದ್ದು ಕಾಣುತ್ತದೆ. ದಲಿತ ಸಾಹಿತ್ಯವು ಆಕ್ರೋಷದಿಂದ ಕೂಡಿದ ಸಾಹಿತ್ಯವಾಗಿತ್ತು. ಶತಮಾನಗಳಿಂದ ನೋವುಂಡ ಜನ ಮಾತನಾಡುವಾಗ ಶೋಷಕರ ರೀತಿಯಲ್ಲಿ ತಣ್ಣಗೆ, ನಾಜೂಕಾಗಿ ಮಾತನಾಡಲಾಗಲಿಲ್ಲ. ಇವರ ಆಕ್ರೋಶಕ್ಕೆ ಅಂದಿನ ಸಾಮಾಜಿಕ, ಸಾಂಸ್ಕೃತಿಕ ಸ್ಥಿತಿಯೇ ಕಾರಣವಾಗಿತ್ತು.

ಕಲೆಗಾರಿಕೆಯೇ ಸಾಹಿತ್ಯವಲ್ಲ, ಬದುಕು ಸತ್ಯ ಎಂಬ ನಿಲುವಿನಲ್ಲಿರುವ ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು' ೧೯೭೫ ರಲ್ಲಿ ಪ್ರಕಟವಾಯಿತು. ಅಲ್ಲಿಂದ ಮುಂದೆ ನಾಟಕ, ಕಥೆ, ಕಾವ್ಯ, ಕಾದಂಬರಿ ಕ್ಷೇತ್ರಗಳಲ್ಲಿ ಅತಿ ಹೆಚ್ಚು ಕೃಷಿ ನಡೆದು, ದಲಿತ ಸಂವೇದನಾಮುಖಿ ಸಾಹಿತ್ಯವು ಬೆಳೆಯಿತು. ಮಹಾದೇವರ 'ಒಡಲಾಳ', 'ಕುಸುಮಬಾಲೆ' ಕಾದಂಬರಿಗಳು, ಸಿದ್ಧಲಿಂಗಯ್ಯನವರ 'ಸಾವಿರಾರು ನದಿಗಳು', 'ಕಪ್ಪು ಕಾಡಿನ ಹಾಡು', 'ಪಂಚಮ', 'ನೆಲಸಮ', 'ಏಕಲವ್ಯ' ನಾಟಕಗಳು ಪ್ರಕಟಗೊಂಡವು. ಅರವಿಂದ ಮಾಲಗತ್ತಿಯವರ 'ಮೂಕನಿಗೆ ಬಾಯಿ ಬಂದಾಗ', 'ಕಪ್ಪು ಕಾವ್ಯ', 'ಕಾರ್ಯ' (ಕಾದಂಬರಿ), 'ಗೌರ್ಮೆಂಟ್ ಬ್ರಾಹ್ಮಣ' (ಆತ್ಮಕತೆ) ಕೃತಿಗಳು ಪ್ರಕಟವಾದುದು ಇದೇ ಸಂದರ್ಭದಲ್ಲಿ ಹಾಗೆಯೇ ಮುಳ್ಳೂರು ನಾಗರಾಜ, ಮ.ನ. ಜವರಯ್ಯ, ಚೆನ್ನಣ್ಣ ವಾಲೀಕಾರ, ಮೊಗಳ್ಳಿ ಗಣೇಶ್ ಮುಂತಾದ ದಲಿತರ ಲೇಖಕರು ತಮ್ಮ ವಿಚಾರ, ವಿಮರ್ಶೆ, ಕಾವ್ಯ ಕಥಾ ಸಾಹಿತ್ಯಗಳನ್ನು ವಿಪುಲವಾಗಿ ಬೆಳೆಸುತ್ತಲೇ ಪ್ರಗತಿಪರ ಸಂಘಟನೆ, ಹೋರಾಟಗಳಲ್ಲಿ ತಮ್ಮನ್ನು ಗುರುತಿಸಿಕೊಂಡರು.

ಈ ಎಲ್ಲಾ ಸಾಂಸ್ಕೃತಿಕ ಸಂವೇದನೆಗಳು ದಲಿತರ ಜೀವನದ ಒಳನೋಟಗಳನ್ನು ಸೂಕ್ಷ್ಮ ಗ್ರಹಿಕೆಗಳನ್ನು, ದಲಿತರ ಬದುಕ ಬವಣೆಗಳನ್ನು ಚಿತ್ರಿಸಿದವು. ತಮ್ಮನ್ನು ತುಳಿತಕ್ಕೆ ಒಳಪಡಿಸಿದ ಮೇಲು ಸಂಸ್ಕೃತಿಯ ಜನವಿರೋಧಿ ಮೌಲ್ಯಗಳನ್ನು ದಲಿತ ಸಾಹಿತ್ಯ ತಿರಸ್ಕರಿಸಿತು. ಜನಪರ ಮೌಲ್ಯಗಳು ತುಂಬಿದ ಹೊಸ ವಿಚಾರಗಳ ಆವಿಷ್ಕಾರದಲ್ಲಿ

ಇದು ತೊಡಗಿತು. ಇದು ತಮ್ಮ ಮೇಲೆ ನಡೆಯುತ್ತಿರುವ ದಬ್ಬಾಳಿಕೆಗೆ ಸಂವೇದನಾ ಶೀಲರಾದ ದಲಿತರು ತೋರಿದ ಪ್ರತಿಕ್ರಿಯೆಯಾಗಿತ್ತು. ದಲಿತ ಸಾಹಿತಿಗಳ ಕೃತಿಗಳಲ್ಲಿನ ವಸ್ತುವಿನ ಆಯ್ಕೆ ಮತ್ತು ಅದರ ನಿರ್ವಹಣೆಯಲ್ಲಿ ಈ ಅಂಶವನ್ನು ಗುರುತಿಸಬಹುದಾಗಿದೆ. ಬಹುಪಾಲು ದಲಿತ ಸಾಹಿತಿಗಳು ದಲಿತ ವಿಮೋಚನಾ ಹೋರಾಟಗಳಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಗುರುತಿಸಿಕೊಂಡವರೇ ಆಗಿದ್ದಾರೆ. ಆದಕಾರಣ ದಲಿತ ಸಾಹಿತ್ಯವನ್ನು ದಲಿತರು ತಮ್ಮ ಹಕ್ಕುಗಳಿಗಾಗಿ ಹೋರಾಡಲು ಪ್ರೇರಣೆ ಕೊಡುವ ಸ್ಫೂರ್ತಿ ಸಾಹಿತ್ಯವೆಂದೇ ಹೇಳಬಹುದು.

ದಲಿತ ಸಂವೇದನಾ ಸಾಹಿತ್ಯದ ಉದ್ದೇಶ ಮತ್ತು ಆಶಯಗಳು ದಲಿತರಲ್ಲಿ ತಮ್ಮ ಪರಿಸರದ, ಸ್ಥಿತಿಯ ಬಗ್ಗೆ ಅರಿವು ಮೂಡಿಸುವುದಷ್ಟಕ್ಕೇ ಸೀಮಿತವಾಗಿಲ್ಲ. ಶೋಷಕರಲ್ಲಿ ತಮ್ಮ ಬಗ್ಗೆ ಪಾಪ ಪ್ರಜ್ಞೆ ಉಂಟು ಮಾಡುವ ಹೊಣೆಗಾರಿಕೆಯನ್ನು ಹೊತ್ತಿವೆ. ಖ್ಯಾತ ದಲಿತ ಕವಿ ಸಿದ್ಧಲಿಂಗಯ್ಯನವರ ಒಂದೆರಡು ಕವಿತೆಯ ಸಾಲುಗಳನ್ನು ಉದಾಹರಣೆಯಾಗಿ ನೋಡಿದಲ್ಲಿ ಈ ಅಂಶವು ಹೆಚ್ಚು ಸ್ಪಷ್ಟವಾಗುತ್ತದೆ.

ಒಟ್ಟಾರೆಯಾಗಿ ಇಪ್ಪತ್ತನೇ ಶತಮಾನದಿಂದ ಕೊನೆಯ ಕಾಲು ಶತಮಾನದಲ್ಲಿ ನಡೆದ ಕನ್ನಡದ ಹೊಸ ತಲೆಮಾರಿನ ಹುಡುಕಾಟಗಳು, ಸಂವೇದನೆಗಳು, ಸೃಜನಶೀಲತೆಗಳು, ಜಾಗತೀಕರಣದ ಸಂದರ್ಭಗಳು, ಬಹುರಾಷ್ಟ್ರೀಯ ಕಂಪನಿಗಳ ಹಿಡಿತಗಳು, ಆರ್ಥಿಕ ಉದಾರೀಕರಣ ನೀತಿಗಳು ಸಾಹಿತ್ಯದ ಮೇಲೆ ಪ್ರಭಾವ ಬೀರತೊಡಗಿವೆ. ಬಂಡಾಯ ಸಾಹಿತ್ಯದ ಸ್ತ್ರೀ ಸಂವೇದನೆ. ಮುಸ್ಲಿಂ ಸಂವೇದನೆ ಮತ್ತು ದಲಿತ ಸಾಂಸ್ಕೃತಿಕ ಜಗತ್ತು ಅನೇಕ ಸ್ಥಿತ್ಯಂತರಗಳನ್ನು ತನ್ನ ಒಡಲೊಳಗೆ ಅರಗಿಸಿಕೊಳ್ಳುತ್ತಾ ಹೊಸ ಹೊಸ ಸಾಧ್ಯತೆಗಳಿಗೆ ಹಾದಿ ಮಾಡಿಕೊಟ್ಟಿತ್ತು.

---

೧. ಸಂ. ಡಾ. ಎಚ್. ಎಸ್. ಶ್ರೀಮತಿ –ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ – ಪುಟ–೩೮೦,

೨. ಡಾ.ಬಿ.ಎನ್. ಸುಮಿತ್ರಾಬಾಯಿ –'ಸ್ತ್ರೀವಾದಿ ಚಿಂತನೆ; ಹಿನ್ನೆಲೆ' (ಸ್ತ್ರೀವಾದ) ಪುಟ –೧.

೩. ಜಿ.ಎಸ್.ಅಮೂರ– 'ಮಹಿಳಾ ಕಾಂದಬರಿಯ ಹೊಸ ಮಾದರಿಗಳು' (ಕನ್ನಡ ಕಥನ ಪ್ರಥಮ ಸಾಹಿತ್ಯ ಕಾದಂಬರಿ) ಪುಟ–೩೬೫

೪. ಸಂ. ಗವೀಶ ಹಿರೇಮಠ –'ಮಹಿಳೆ ಮತ್ತು ಆಧುನೀಕತೆ' ಪುಟ –೩೬

೫. ಅದೇ – ಪುಟ – ೪೮

೬. ಸಾರಾಅಬೂಬಕರ್ –"ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ" (ಮುಸ್ಲಿಂ ಸಂವೇದನೆ ಮತ್ತು ನಾನು) ಪುಟ–೧೨೬.

೭. ಡಾ.ಅರವಿಂದ ಮಾಲಗತ್ತಿ –'ಕನ್ನಡ ದಲಿತ ಸಾಹಿತ್ಯ' (ಸಾಹಿತ್ಯ, ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ) ಪುಟ–೧೪೯.

೮. ಡಾ. ಸಿದ್ದಲಿಂಗಯ್ಯ 'ದಲಿತ ಸಾಹಿತ್ಯದ ಬಗ್ಗೆ' (ಜನ ಸಂಸ್ಕೃತಿ) ಪುಟ–೨೨೭.

ಅಧ್ಯಾಯ – ೪

ಸಾರಾ ಅವರ ಕಾದಂಬರಿಗಳಲ್ಲಿ ಮುಸ್ಲಿಂ ಸಮಾಜ

ಸದಾ ಘೋಷಾ ಹೊದ್ದುಕೊಂಡು ಹೊರಗಿನ ಪ್ರಪಂಚಕ್ಕೆ ಅಸ್ಪಷ್ಟವಾಗಿಯೇ ಇದ್ದ ಮುಸ್ಲಿಂ ಸಮಾಜದ ಮುಖವು, ಸಾರಾ ಎಂಬ ಲೇಖಕಿಯೊಬ್ಬರ ಕೃತಿಗಳಿಂದಾಗಿ ತೆರೆ ಸರಿದು ಹೊರಜಗತ್ತು ನಿಬ್ಬೆರಗಾಗುವಂತೆ ಮಾಡಿತು. ತೀರಾ ಸಂಪ್ರದಾಯವಾದಿಯಾದ ಧರ್ಮವು ಮಹಿಳೆಯರಿಗೆ ಸಮಾಜದಲ್ಲಿ ಯಾವ ರೀತಿ ನ್ಯಾಯ ಒದಗಿಸಿದೆ? ಯಾವ ರೀತಿ ಅವರನ್ನು ಕಾಪಾಡುತ್ತಿದೆ? ಎಂಬುದಕ್ಕಿಂತ ಹೆಚ್ಚಾಗಿ ಎಷ್ಟೆಲ್ಲಾ ರೀತಿಯಲ್ಲಿ ಅವರನ್ನು ಶೋಷಣೆಗೆ ಗುರಿಪಡಿಸುತ್ತಿದೆ ಎಂಬ ಸತ್ಯ ಅನಾವರಣಗೊಂಡಿತು. ಮುಸ್ಲಿಂ ಸಮಾಜದ ಅನಿಷ್ಠ ಪದ್ಧತಿಗಳಾದ ಬಹುಪತ್ನಿತ್ವ, ಸುಲಭದ ವಿವಾಹ ವಿಚ್ಛೇದನ ಪದ್ಧತಿಗಳಿಂದಾಗಿ ಮುಸ್ಲಿಂ ಮಹಿಳೆಯರ ಬದುಕು ದುರಂತ ಕಥಾನಕಗಳಾಗುತ್ತಿರುವ ಶೋಚನೀಯ ಸಂಗತಿ ಬೆಳಕು ಕಂಡಿತು.

ಬಂಡಾಯ ಕಾಲಘಟ್ಟದಲ್ಲಿ ಕ್ರಾಂತಿಕಾರಿಯಾಗಿ ಹೊರಹೊಮ್ಮಿದ ಮುಸ್ಲಿಂ ಸಂವೇದನಾಮುಖಿ ಸಾಹಿತ್ಯವು, ಮುಸ್ಲಿಂ ಸಮಾಜದ ಕುರಿತ ಸತ್ಯಾಂಶಗಳನ್ನು ಹೊರಗೆಡಹಿತು. ತೆರೆದಿಟ್ಟಿತು. ಒಂದು ಸೀಮಿತ ಚೌಕಟ್ಟಿನೊಳಗೇ ಇದ್ದ ಮುಸ್ಲಿಂ ಸಮಾಜದ ಬಗೆಗಿನ ಹೊರಜಗತ್ತಿನ ಕಲ್ಪನೆಯನ್ನು ವಿಸ್ತರಿಸಿತು, ಕುತೂಹಲ–ಕೌತುಕಗಳನ್ನು ಇಮ್ಮಡಿಗೊಳಿಸಿತು. ಹೀಗೆ ಒಂದು ಅಜ್ಞಾತ ಸಮಾಜದ ಅಂತರಂಗವನ್ನು ಬಿಡಿಬಿಡಿಯಾಗಿ ಬಿಡಿಸಿಟ್ಟ ಹಿರಿಮೆ ಮುಸ್ಲಿಂ ಲೇಖಕರದು. ಇವರ ಸಾಹಿತ್ಯದ ಹಿಂದಿನ ಆಶಯಗಳೂ ಅಷ್ಟೇ ಮಹತ್ವ ಪಡೆದಿವೆ. ತಮ್ಮ ಸಮಾಜದಲ್ಲಿ ವಿಧವಿಧವಾಗಿ ನಡೆಯುತ್ತಿರುವ ಶೋಷಣೆಗಳಿಗೆ ತಡೆಯೊಡ್ಡುವ, ಅಲ್ಲಿನ ಮೌಢ್ಯತೆ, ಅನಾಗರೀಕತೆಗಳನ್ನು ಎತ್ತಿ ತೋರಿಸಿ, ಮಾನವೀಯ ನೆಲೆಯಲ್ಲಿ ಮಹಿಳೆಯರನ್ನು ಕಾಣುವಂತೆ ಮಾಡುವ ಮಹದಾಶಯ ಈ ಲೇಖಕರದು. ಆ ಮೂಲಕ ಸುಸಂಸ್ಕೃತಿ, ಸಮಾನತೆಯನ್ನು ಸಮಾಜದಲ್ಲಿ ನೆಲೆಗೊಳಿಸುವ ಅವಿರತ ಪ್ರಯತ್ನ ಮುಸ್ಲಿಂ ಮೂಲದ ಬಂಡಾಯ ಸಾಹಿತಿಗಳದು. ಹೀಗೆ ತನ್ನ ಸಮಾಜದ ಕುರಿತು ಅನುಕಂಪ, ಕಾಳಜಿ ಹೊಂದಿದ ಸಾರಾ ಅಬೂಬಕ್ಕರ್‌ರವರು ಬರವಣಿಗೆ ಆರಂಭಿಸಿದ್ದೂ ಕೂಡಾ ತನ್ನ ಸಮಾಜದ ಸ್ವರೂಪದಲ್ಲಿನ ಬದಲಾವಣೆಯ ಒಂದು ಪ್ರಯತ್ನವಾಗಿಯೇ. ಇದರ ಹೊರತು ತನ್ನ ಬರವಣಿಗೆಯ ಮೂಲಕ ಪ್ರಶಸ್ತಿ, ಕೀರ್ತಿ ಪಡೆಯುವುದಕ್ಕಲ್ಲ.

ಅದುವರೆಗೆ ನಮಗೆ ಪರಿಚಿತವಾಗಿದ್ದ ಮುಸ್ಲಿಂ ಸಮಾಜವೆಂದರೆ ಕನ್ನಡ ಸಾಹಿತ್ಯದಲ್ಲಿ ಮುಸ್ಲಿಮೇತರರಿಂದ ಚಿತ್ರಿತವಾಗಿದ್ದ, ಕೆಲವು ಪಾತ್ರಗಳ ಮೂಲಕ ಕಲ್ಪಿಸಿಕೊಂಡ ಒಂದು ಸಮಾಜವಾಗಿತ್ತು.

ಅದು ಜಟಕಾಸಾಬಿಯೋ, ಹೋಟೆಲ್ ಕಾರ್ಮಿಕನೋ, ಬೂಬಮ್ಮನೋ, ಮೀನು ಮಾರುವವನೋ ಆಗಿ ಬಂದು ಹೋಗುತ್ತಿದ್ದ ಪಾತ್ರಗಳಷ್ಟೆ. ಆದರೆ, ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಮಾಜದ ನೈಜ ಚಿತ್ರಣ ದೊರೆತದ್ದು, ಎಪ್ಪತ್ತರ ದಶಕದ ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ ಬಂದ ಮುಸ್ಲಿಂ ಲೇಖಕರಿಂದ. ಸಾರಾ ಅವರ ಮಹತ್ವದ ಕಾದಂಬರಿಯಾದ 'ಚಂದ್ರಗಿರಿಯ ತೀರದಲ್ಲಿ' ಪ್ರಕಟವಾದಾಗ 'ಇಸ್ಲಾಂ ಸಮಾಜವೆಂದರೆ ಹೀಗೆಯೇ?' ಎಂದು ಅಚ್ಚರಿ ಪಟ್ಟು ವಿಚಾರ ಮಾಡಲು ಆರಂಭಿಸಿದ್ದುಂಟು. ಈ ರೀತಿಯ ಸಾಹಿತ್ಯಿಕ ಪ್ರಕ್ರಿಯೆಗಳಿಂದಾಗಿ ಸಮಾಜದಲ್ಲಿ ಬದಲಾವಣೆಯ ಗಾಳಿ ಬೀಸಲು ಆರಂಭವಾಯಿತು.

ರಹಸ್ಯಮಯವಾಗಿದ್ದ ಇಸ್ಲಾಂ ಲೋಕದ ಸಂಸ್ಕೃತಿಯನ್ನು ಸಾಹಿತ್ಯದ ಮೂಲಕ ದಾಖಲುಗೊಳಿಸಿದವರಲ್ಲಿ ಫಕೀರ ಅಹ್ಮದ್ ಕಟ್ಪಾಡಿ, ಮುಮ್ತಾಜ್ ಬೇಗಂ, ಬೋಳುವಾರ ಅಹ್ಮದ್ ಕುಂಞ, ಸಾರಾ ಅಬೂಬಕ್ಕರ್ ಮುಖ್ಯರಾದವರು. ಸಾರಾ ಅವರ ಬಹುತೇಕ ಕತೆ–ಕಾದಂಬರಿಗಳು ಮುಸ್ಲಿಂ ಸಮಾಜದಲ್ಲಿರುವ ಹಲವು ಮುಖ್ಯ ಸಮಸ್ಯಗಳ ಕುರಿತಾದವುಗಳೇ. ಇಸ್ಲಾಂನಲ್ಲಿ ಹಾಸುಹೊಕ್ಕಾಗಿರುವ, ಕಾನೂನಿನ ರಕ್ಷಣೆ ಪಡೆದಿರುವ ಹಲವಾರು ಸಂಗತಿಗಳನ್ನು ವಸ್ತುವಾಗಿಸಿಕೊಂಡು ಕೃತಿರಚನೆಯಲ್ಲಿ ತೊಡಗಿದ್ದಾರೆ. ಹಾಗೆಯೇ ಮುಸ್ಲಿಂ ಸಾಮಾಜಿಕ ಜೀವನ ವಿಧಾನದ ಒಳನೋಟಗಳು ಇಲ್ಲಿ ಲಭ್ಯವಾಗಿವೆ.

ಕೌಟುಂಬಿಕ ಪರಿಸರ :

ಮೂಲತಃ ಸಂಪ್ರದಾಯಸ್ಥ ಕುಟುಂಬ ವ್ಯವಸ್ಥೆಯನ್ನು ಹೊಂದಿದ ಮುಸ್ಲಿಂ ಸಮಾಜವು ಪುರುಷರಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿದೆ. ಕುಟುಂಬದ ಮುಖ್ಯಸ್ಥ ಪುರುಷನೇ. ಕುಟುಂಬಕ್ಕೆ ಆತನದೇ ಅಧಿಪತ್ಯ. ಸಾರಾ ಅವರ ಕಾದಂಬರಿಗಳಲ್ಲಿ ಬರುವ ಕುಟುಂಬಗಳೆಲ್ಲ ಬಡ ಅಥವಾ ಮಧ್ಯಮ ವರ್ಗದ ಕುಟುಂಬಗಳೇ ಆಗಿವೆ. ಕುಟುಂಬ ನಿರ್ವಹಣೆಯ ಹೊಣೆಯು ಸಂಪೂರ್ಣವಾಗಿ ಪುರುಷನದೇ. 'ಉದ್ಯೋಗಂ ಪುರುಷ ಲಕ್ಷಣಂ' ಎಂಬಂತೆ ಮನೆಯಿಂದ ಹೊರಗೆ ಹೋಗಿ ದುಡಿಯುವುದು ಪುರುಷನೇ ಹೊರತು ಸ್ತ್ರೀಯಲ್ಲ. ಒಂದು ವೇಳೆ ಅವಳು ದುಡಿಮೆ ಮಾಡುವಂತಿದ್ದರೆ, ಅದು ಮನೆಯ ಒಳಗೇ ಕುಳಿತು ಮಾಡುವ ಬೀಡಿ ಕಟ್ಟುವ, ಕಸೂತಿ ಹಾಕುವಂತಹ ಸಣ್ಣಪುಟ್ಟ ಕೆಲಸಗಳಿಗೆ ಮಾತ್ರ ಮೀಸಲು.

ಮುಸಲ್ಮಾನ ಪುರುಷನ ಮುಖ್ಯ ವೃತ್ತಿ ವ್ಯಾಪಾರ. ಕೆಲವರು ದೊಡ್ಡ ಪ್ರಮಾಣದಲ್ಲಿ ಕೆಲವರು ಚಿಕ್ಕ ಪ್ರಮಾಣದಲ್ಲಿ ಅವರವರ ಶಕ್ತಿಗನುಸಾರವಾಗಿ ವ್ಯಾಪಾರ ಮಾಡುತ್ತಾರೆ. ಬಡವರಾದ ಮುಸಲ್ಮಾನರು ಕೂಲಿ ಮಾಡಿ ಸಂಸಾರ ನೂಕುವ ಹಲವಾರು ಸಂದರ್ಭಗಳನ್ನು ಸಾರಾ ಅವರ ಕಾದಂಬರಿಗಳಲ್ಲಿ ಕಾಣಬಹುದು. ಕೆಲವೊಮ್ಮೆ ಗಂಡನಾದವನು ಹೇಳದೇ

ಕೇಳದೇ ಹೆಂಡತಿ ಮಕ್ಕಳನ್ನು ಬಿಟ್ಟು ಹೋಗುವ ಪ್ರಸಂಗಗಳೂ ಬರುತ್ತವೆ. ಹಾಗೆ ಹೋದವನು ಮತ್ತೊಂದು ವಿವಾಹ ಮಾಡಿಕೊಂಡು, ಈ ಹೆಂಡತಿ ಮಕ್ಕಳನ್ನು ಸಂಪೂರ್ಣವಾಗಿ ಮರೆಯುವ ಸನ್ನಿವೇಶಗಳುಂಟು. ಆ ಒಂದು ಸಂದರ್ಭದಲ್ಲಿ ಹೆಂಡತಿಯಾದವಳು ಶ್ರೀಮಂತರ ಮನೆಗೆಲಸ ಮಾಡಿಕೊಂಡು ಮಕ್ಕಳನ್ನು ಸಾಕುವ, ಸಂಸಾರ ನಿರ್ವಹಣೆ ಮಾಡುವ ಹೊಣೆ ಹೊರುತ್ತಾಳೆ. ಇಂಥ ಪ್ರಸಂಗ 'ಸಹನಾ' ಕಾದಂಬರಿಯಲ್ಲಿ ಎದುರಾಗುತ್ತದೆ. ನಸೀಮಳ ತಾಯಿ ಸಕೀನ ತನ್ನ ಗಂಡ ಬಿಟ್ಟು ಹೋದ ನಂತರ ಶ್ರೀಮಂತರ ಮನೆಯ ಮುಸುರೆ ತಿಕ್ಕುತ್ತಾ, ಬಾಣಂತಿ ಕೆಲಸ ಮಾಡಿಕೊಂಡು ತನ್ನ ಮಗಳನ್ನು ಸಾಕುತ್ತಾಳೆ.

ಮುಸ್ಲಿಂ ಕುಟುಂಬಗಳಲ್ಲಿ ಹತ್ತು ವರ್ಷ ದಾಟುತ್ತಿದ್ದಂತೆ ಹೆಣ್ಣು ಮಕ್ಕಳಿಗೆ ಮದುವೆ ಮಾಡಿಬಿಡುವುದು ಸರ್ವೇಸಾಮಾನ್ಯವಾಗಿದೆ. ನಂತರ ಅಷ್ಟು ಚಿಕ್ಕವಯಸ್ಸಿಗೇ ಒಂದರ ಮೇಲೊಂದರಂತೆ ಮಕ್ಕಳನ್ನು ಹೆರುತ್ತಾ, ಜೊತೆಗೆ ಸಂಸಾರದ ಹೊಣೆ ಹೊರಲು ಸಿದ್ಧಳಾಗಬೇಕಾಗುತ್ತದೆ. ಹೀಗೆ ಹದಿಮೂರಕ್ಕೆ ಮದುವೆಯಾದ ನಸೀಮಾ ವರ್ಷಕ್ಕೊಂದರಂತೆ ಮಕ್ಕಳನ್ನು ಹೆತ್ತು ಆರೋಗ್ಯ ಕೆಡಿಸಿಕೊಂಡಾಗ, ಗಂಡ ಬೇರೊಂದು ವಿವಾಹವಾಗುತ್ತಾನೆ. ನಂತರ ತವರು ಮನೆಗೆ ಬಂದು ನೆಲೆಸಿದ ನಸೀಮಾಳು ತಾಯಿಯ ಆರೈಕೆಯಿಂದ ಮೈಕೈ ತುಂಬಿಕೊಂಡು ತಕ್ಕಮಟ್ಟಿಗೆ ನೋಡುವಂತಾದಾಗ, ಆಕೆಗೆ ಇಪ್ಪತ್ತು ವರ್ಷ ಎಂದು ಹೇಳಿ ಲೇಖಕರು ಓದುಗರನ್ನು ಬೆಚ್ಚಿ ಬೀಳಿಸುತ್ತಾರೆ. ಎಲ್ಲ ಹೆಣ್ಣು ಮಕ್ಕಳಿಗೂ ಇಪ್ಪತ್ತಕ್ಕೆ ಬದುಕು ಆರಂಭವಾದರೆ, ನಸೀಮಳ ಬದುಕ ಬವಣೆ ಮುಗಿದಿರುತ್ತದೆ. ಇಂತಹ ಒಂದು ವಿಪರ್ಯಾಸ ಮುಸ್ಲಿಂ ಹೆಣ್ಣುಮಕ್ಕಳದು. ಬಾಲ್ಯದಲ್ಲಿಯೇ ವಿವಾಹ ಮಾಡಿ ಮುಗಿಸುವ ತವಕದಲ್ಲಿರುವ ಮುಸ್ಲಿಂ ಸಮಾಜದ ಮೌಢ್ಯತೆಯಿಂದಾಗಿ ಈ ಬಗೆಯ ದುರಂತಮಯ ಬದುಕು ಇಲ್ಲಿನ ಸ್ತ್ರೀಯರದ್ದಾಗಿರುವುದನ್ನು ಗಮನಿಸಬಹುದು.

ಮತ್ತೊಂದು ವಿಪರ್ಯಾಸವೆಂದರೆ, ಮುಸ್ಲಿಂ ಸಮಾಜವು ಕುಟುಂಬ ಯೋಜನೆಯ ಕ್ರಮದ ಅನುಸರಣೆಯನ್ನು ಧರ್ಮ ವಿರೋಧಿ ಕೃತ್ಯವಾಗಿ ಪರಿಗಣಿಸಿರುವುದು. "ಮಕ್ಕಳನ್ನು ಕೊಡುವುದು ದೇವರು. ಅವನು ಕೊಡುವಾಗ ನಮ್ಮಿಂದ ಬೇಡ ಎನ್ನಲಾಗುತ್ತದೆಯೇ?"[7] ಎಂಬ ಇದೇ ನಿಲುವು ಬಹುತೇಕ ಎಲ್ಲಾ ಮುಸ್ಲಿಮರಲ್ಲಿರುವುದು ಆಶ್ಚರ್ಯಕರ ಸಂಗತಿಯಾಗಿದೆ. ಈ ಅಜ್ಞಾನದಿಂದಾಗಿಯೇ ಒಬ್ಬ ಗಂಡಸಿಗೆ ಮೂರ್ನ್ನಾಲ್ಕು ಜನ ಹೆಂಡತಿಯರು, ಒಬ್ಬೊಬ್ಬರಿಗೂ ಐದು ಆರಕ್ಕಿಂತ ಹೆಚ್ಚು ಮಕ್ಕಳಿರುವ ಕುಟುಂಬಗಳನ್ನು ನಾವು ಹೆಚ್ಚಾಗಿ ಕಾಣುತ್ತೇವೆ. ಧರ್ಮದ ಹೆಸರಿನಲ್ಲಿ ಏನೇ ಹೇಳಿದರೂ ಕಣ್ಣುಮುಚ್ಚಿ ನಂಬುವ ಜನರಿರುವಾಗ ಅದನ್ನು ದುರುಪಯೋಗಪಡಿಸಿ ಕೊಳ್ಳುವ ಮಂದಿಗೂ ಕೊರತೆಯಿಲ್ಲ. "ಇಹಲೋಕದಲ್ಲಿ ಯಾವ ಸುಖ-ಸೌಲಭ್ಯಗಳಿಗೂ ಆಸೆಪಡಬೇಡಿ, ನಿಮಗೆ

ಎಲ್ಲಾ ಸೌಕರ್ಯಗಳೂ ಪರಲೋಕದಲ್ಲಿ ಲಭಿಸುತ್ತವೆ. ಕುಟುಂಬ ನಿಯಂತ್ರಣವನ್ನೂ ಮಾಡದೆ ದೈವಾರಾಧನೆ ಮಾಡುತ್ತಾ ಕಾಲ ಕಳೆಯಿರಿ"[೨] ಎಂದು ಉಪದೇಶ ಮಾಡುವ ವಿದ್ಯಾವಂತ ಧರ್ಮಾಂಧ ಮುಸ್ಲಿಮರ ಕುರಿತು ಲೇಖಕರು ಸಿಡಿಮಿಡಿಗೊಳ್ಳುತ್ತಾರೆ. ಇದರ ಪರಿಹಾರಾರ್ಥವಾಗಿ ಒಂದು ಸಲಹೆ ನೀಡುತ್ತಾರೆ. "ಮುಸ್ಲಿಮರು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಮುಂದುವರೆಯಬೇಕು. ಆಗ ಮಾತ್ರ ಈ ರೀತಿ ಹಾದಿ ತಪ್ಪಿಸಲು ಸಾಧ್ಯವಿಲ್ಲ"[೩] ಎಂಬುದು ಲೇಖಕರು ತೋರಿಸುವ ಹಾದಿ.

'ಮಾತೃದೇವೋಭವ' ಎಂದು ಎಲ್ಲಾ ಧರ್ಮಗಳು ತಾಯಿಗೆ ಪೂಜನೀಯ ಸ್ಥಾನ ಕಲ್ಪಿಸಿರುವಂತೆ, ಇಸ್ಲಾಂ ಧರ್ಮದಲ್ಲಿಯೂ ತಾಯಿಗೆ ಅತ್ಯುತ್ತಮ ಸ್ಥಾನವನ್ನು ನೀಡಲಾಗಿದೆ. ತಾಯಿಯ ಪಾದಗಳಡಿಯಲ್ಲಿ ಮಗನ ಸ್ವರ್ಗವೆಂದು ಇಲ್ಲಿ ಬೋಧಿಸಲಾಗಿದೆ. ಸೊಸೆ ಬಂದರೂ ತಾಯಿಯೇ ಮನೆಯ ಯಜಮಾನಿಯಾಗಿರುತ್ತಾಳೆ. ಮಕ್ಕಳನ್ನು ಒಂಬತ್ತು ತಿಂಗಳು ಹೊಟ್ಟೆಯಲ್ಲಿಟ್ಟು, ಸಾವು-ಬದುಕಿನ ನಡುವೆ ಹೋರಾಡಿ ಜನ್ಮ ನೀಡುವವಳು ತಾಯಿ. ತನ್ನೆಲ್ಲಾ ಸುಖ-ಸಂತೋಷಗಳನ್ನು ಬದಿಗೊತ್ತಿ ಮಕ್ಕಳ ಭವಿಷ್ಯ ರೂಪಿಸಬೇಕಾದವಳು ತಾಯಿಯಾದ್ದರಿಂದ ಎಲ್ಲಾ ಧರ್ಮಗಳು ತಾಯಿಗೆ ದೈವತ್ವ ಕಲ್ಪಿಸಿವೆ. ಇದೇ ಒಂದು ಪರಿಕಲ್ಪನೆಯಲ್ಲಿ ಇಲ್ಲಿನ ಎಲ್ಲಾ ಕಾದಂಬರಿಗಳಲ್ಲೂ ತಾಯಿಯ ಪಾತ್ರ ಮೂಡಿಬಂದಿರುವುದನ್ನು ಗಮನಿಸಬಹುದು. ಆದರೆ, ತಾಯಿಗಿರುವ ಉತ್ತಮ ಸ್ಥಾನಮಾನಗಳು ಮುಸ್ಲಿಂ ಸಮಾಜದಲ್ಲಿ ಹೆಂಡತಿಗೆ ಇಲ್ಲದಿರುವುದು ಶೋಚನೀಯವಾಗಿದೆ.

ಮುಸ್ಲಿಂ ಸಾಮಾಜಿಕ ಪರಿಸರದಲ್ಲಿ ಶಿಕ್ಷಣಕ್ಕೆ ಅಷ್ಟೇನೂ ಮಹತ್ವ ಕೊಟ್ಟಿಲ್ಲ. ಈ ಕಾರಣದಿಂದಲೇ ಇಲ್ಲಿನ ಸಮಾಜಕ್ಕೆ ನಾಗರೀಕತೆಯ ಸ್ಪರ್ಶವಾದಂತಿಲ್ಲ. ಒಂದು ವೇಳೆ ಶಿಕ್ಷಣವೆಂಬುದಿದ್ದರೂ ಅದು ಗಂಡು ಮಕ್ಕಳಿಗೆ ಮೀಸಲು. ಮಹಿಳೆಯರಿಗೆ ವಿದ್ಯೆಯೆಂಬುದು ಗಗನ ಕುಸುಮವಾಗಿದೆ. 'ಹೆಣ್ಣು ಮಕ್ಕಳು ವಿದ್ಯೆ ಕಲಿತು ಮಾಡುವುದೇನಿದೆ? ಮನೆವಾಳ್ತೆಯ ಕ್ರಮಗಳು ತಿಳಿದಿದ್ದರೆ ಸಾಕು' ಎಂಬ ನಿಲುವು ಮುಸ್ಲಿಂ ಹೆಣ್ಣುಮಕ್ಕಳನ್ನು ಶಾಲೆಯಿಂದ ದೂರವಿರಿಸಿದೆ. ಗಂಡು ಮಕ್ಕಳಿಗೂ ಸಹ ಒಂದು ಹಂತದವರೆಗೆ ಮಾತ್ರ ಶಿಕ್ಷಣ ದೊರೆಯುತ್ತದೆ. ಅಲ್ಲಿಂದ ಮುಂದೆ ಅವರನ್ನು ಯಾವುದಾದರೊಂದು ದುಡಿಮೆಗೆ ಹಚ್ಚುವುದು ಸಾಮಾನ್ಯ ಸಂಗತಿ. ಖುರಾನ್ ಪಾರಾಯಣ ಮಾಡಲು, ಧರ್ಮಗ್ರಂಥಗಳನ್ನು ಓದಲು ಬರುವಷ್ಟು ಪಾಠವನ್ನು ಮೌಲಾವಿಗಳಿಂದ ಹೇಳಿಸಿದರೆ ಅಷ್ಟಕ್ಕೇ ಅವರ ಕಲಿಕೆಗೂ ಪೂರ್ಣವಿರಾಮ ದೊರೆಯುತ್ತದೆ. ಅಲ್ಲಿಂದ ಮುಂದೆ ಅವರು ಶಾಲೆಗೆ ಹೋಗಿ ಕಲಿಯುವುದೇನೂ ಉಳಿದಿರುವುದಿಲ್ಲ. ಸಾರಾ ಅವರ ಕಾದಂಬರಿಯ ಎಲ್ಲಾ ಪಾತ್ರಗಳೂ ಇದೇ ಮಟ್ಟದಲ್ಲಿರುವಂತಹವು. ಆದರೆ, ಇದಕ್ಕೆ ಅಪವಾದವೆಂಬಂತೆ 'ಪ್ರವಾಹ ಸುಳಿ' ಕಾದಂಬರಿಯ ಜೊಹರಾಳ ಮಗ ನವಾಜ್, ಹೆಚ್ಚು ಓದಿ, ಸರ್ಕಾರಿ ಕೆಲಸಕ್ಕೆ ಸೇರಿರುತ್ತಾನೆ.

ಹಾಗೆಯೇ 'ವಜ್ರಗಳು' ಕಾದಂಬರಿಯ ನಾಯಕಿ ನಫೀಸಳನ್ನು ಬಾಲ್ಯದಿಂದಲೂ ಪ್ರೀತಿಸುತ್ತಿದ್ದ ಶಫಿಯುಲ್ಲಾ ಚೆನ್ನಾಗಿ ಕಲಿತು ಕೆಲಸಕ್ಕೆ ಸೇರಿರುತ್ತಾನೆ. ಹೀಗೆ ಅಲ್ಲಲ್ಲಿ ಅಪರೂಪಕ್ಕೆಂಬಂತೆ ವಿದ್ಯಾವಂತರಾದ ಮುಸ್ಲಿಂ ಜನಾಂಗದವರನ್ನು ಕಾಣಬಹುದು. ಇದೆಲ್ಲದಕ್ಕೂ ಮೂಲಭೂತವಾದಿ ಮುಸ್ಲಿಂ ಸಮಾಜದ ಧೋರಣೆಯೇ ಕಾರಣ.

ಸ್ವತಃ ಲೇಖಕಿ ಸಾರಾ ಅವರು ಶಾಲೆಗೆ ಹೋಗುವ ದಿನಗಳಲ್ಲಿ ಎಷ್ಟೋ ರೀತಿಯ ಅಡ್ಡಿ–ಆತಂಕಗಳನ್ನು ಎದುರಿಸಿದ್ದನ್ನು 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಎಂಬ ತಮ್ಮ ಆತ್ಮಚರಿತ್ರೆಯಲ್ಲಿ ಉಲ್ಲೇಖಿಸುತ್ತಾರೆ. ಆದರೆ ಅವರ ತಂದೆಯ ಪ್ರೋತ್ಸಾಹ, ಸಹಕಾರ ಜೊತೆಗಿದ್ದ ಕಾರಣ ಅವರ ಓದು ಸುಗಮವಾಗಿ ಸಾಗಿತು. ತಮ್ಮ ಮುಂದಿನ ಜನಾಂಗದ ಭವಿಷ್ಯವನ್ನು ರೂಪಿಸಬೇಕಾದ ಹೆಣ್ಣಿಗೆ ಗಂಡಿಗಿಂತ ಹೆಚ್ಚು ವಿದ್ಯೆಯ ಅವಶ್ಯಕತೆಯಿದೆ ಎಂಬ ಸಾರಾ ಅವರ ತಂದೆಯ ವಿಚಾರವಂತಿಕೆಯಿಂದ ಸಾರಾ ಇವರ ವಿದ್ಯೆ ಎಸ್.ಎಸ್.ಎಲ್.ಸಿ.ವರೆಗೂ ಸಾಗಿತು. ಆದರೆ ಅವರೂ ಕೂಡ ಅದಕ್ಕಿಂತ ಹೆಚ್ಚು ಕಲಿಯಲಾಗಲಿಲ್ಲ. 'ಹೆಣ್ಣು ಮಕ್ಕಳು ಹೆಚ್ಚು ಕಲಿತಷ್ಟೂ ಹಾಳಾಗಿ ಬಿಡುತ್ತಾರೆ. ಅಷ್ಟಕ್ಕೂ ಹೆಣ್ಣಾದವಳು ಕಲಿತು ದೇಶ ಆಳಬೇಕಾಗಿಲ್ಲ. ಅವಳು ಮನೆಯ ನಾಲ್ಕು ಗೋಡೆಗಳ ಮಧ್ಯೆ ಸುರಕ್ಷಿತವಾಗಿರಲಿ' ಎಂಬುದು ಮುಸ್ಲಿಂ ಸಮಾಜ ಹೆಣ್ಣುಮಕ್ಕಳ ಕುರಿತು ತಳೆದಿರುವ ನಿಲುವು. ಸಾರಾ ಆವರು ತಮ್ಮ ಕೃತಿಗಳ ಮೂಲಕ ವಿಶ್ಲೇಷಿಸುತ್ತಾ ಪಾತ್ರಗಳ ಮೂಲಕ ತಮ್ಮ ಪ್ರತಿಕ್ರಿಯೆ, ಪ್ರತಿಭಟನೆ ವ್ಯಕ್ತಪಡಿಸುತ್ತಾರೆ. ಹೆಣ್ಣಾಗಲೀ, ಗಂಡಾಗಲೀ ವ್ಯಕ್ತಿಗೆ ಶಿಕ್ಷಣ ಮುಖ್ಯ. ಒಂದು ಸಮಾಜ ಅಜ್ಞಾನದಿಂದ ಹೊರಬರಬೇಕಾದರೆ ಶಿಕ್ಷಣದ ಮೂಲಕ ಮಾತ್ರ ಸಾಧ್ಯವೆಂಬುದು ಲೇಖಕರ ಅಭಿಪ್ರಾಯ.

ಸ್ತ್ರೀಯರ ಸ್ಥಾನಮಾನಗಳು :

ಮುಸ್ಲಿಂ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯರಿಗೆ ಕಲ್ಪಿಸಿರುವ ಸ್ಥಾನಮಾನಗಳು ತೀರಾ ಕೆಳಮಟ್ಟದಲ್ಲಿವೆ. ಈ ಸಮಾಜವು ಸ್ತ್ರೀಯರನ್ನು ಎರಡನೆಯ ದರ್ಜೆಯಲ್ಲಿಯೇ ಗುರುತಿಸಿರುವುದು ಈ ಕಾದಂಬರಿಗಳ ಉದ್ದಕ್ಕೂ ಸ್ಪಷ್ಟವಾಗುತ್ತದೆ. ಸ್ತ್ರೀಯರ ಬದುಕು ಸದಾ ಪುರುಷನ ನೆರಳಲ್ಲೇ ಸಾಗಬೇಕು. ಪುರುಷ ನಿರ್ಮಿತ ಸಾಮಾಜಿಕ, ಧಾರ್ಮಿಕ ಚೌಕಟ್ಟಿನೊಳಗೇ ಅವರು ಬದುಕಬೇಕು. ಅಪ್ಪಿತಪ್ಪಿಯೂ ಅವುಗಳು ವ್ಯತ್ಯಾಸವಾಗುವುದನ್ನು ಪುರುಷ ಸಹಿಸಲಾರ. ಸ್ತ್ರೀ ಎಂದೆಂದಿಗೂ ಪುರುಷನ ಅಧೀನದಲ್ಲಿರಬೇಕೆಂಬುದೇ ನಿಯಮ. ಬಾಲ್ಯದಲ್ಲಿ ತಂದೆಯ ರಕ್ಷಣೆಯಲ್ಲಿ, ಯೌವ್ವನದಲ್ಲಿ ಗಂಡನ ರಕ್ಷಣೆಯಲ್ಲಿ ಹಾಗೂ ಮುಪ್ಪಿನಲ್ಲಿ ಮಗನ ರಕ್ಷಣೆಯಲ್ಲಿ ಬದುಕು ಕಂಡುಕೊಳ್ಳಬೇಕಾದವರು ಸ್ತ್ರೀಯರು. ಮನುಸ್ಮೃತಿಯ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಮಾತು ಇಲ್ಲಿ ಬಹುವಾಗಿ ಒಪ್ಪುತ್ತದೆ.

ಸ್ತ್ರೀಯು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂಬಂತೆ ಸ್ತ್ರೀಯರಿಗೆ ಶೈಕ್ಷಣಿಕ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯಗಳೇನನ್ನು ಮುಸ್ಲಿಂ ಸಮಾಜ ನೀಡಿಲ್ಲ. ಇಲ್ಲಿನ ಕಾದಂಬರಿಗಳ ಎಲ್ಲಾ ಸ್ತ್ರೀ ಪಾತ್ರಗಳೂ ಕೂಡಾ ಈ ಒಂದು ಮಿತಿಯಲ್ಲಿಯೇ ವರ್ತಿಸುತ್ತದೆ. ಇಲ್ಲಿನ ಸ್ತ್ರೀಯರು ಸಮಾಜವನ್ನು ಎದುರಿಸಲಾರದ, ಧರ್ಮವನ್ನು ಪ್ರಶ್ನಿಸಿದ, ತಮಗಾದ ಅನ್ಯಾಯವನ್ನು ಪ್ರತಿಭಟಿಸದ ಸೌಮ್ಯ ಸ್ವರೂಪಿಗಳೇ ಆಗಿದ್ದಾರೆ.

ಸ್ತ್ರೀಯಾದವಳು ಗಂಡನ ಬೇಕು ಬೇಡಗಳನ್ನು ಪೂರೈಸುತ್ತಾ, ಮಕ್ಕಳ ಪಾಲನೆ ಪೋಷಣೆ ಮಾಡುತ್ತಾ, ಮನೆಯ ನಾಲ್ಕು ಗೋಡೆಗಳ ಮಧ್ಯೆ ಇದ್ದುಕೊಂಡು, ಅಲ್ಲಿಯ ಕೆಲಸ ಕಾರ್ಯಗಳನ್ನು ನೋಡಿಕೊಂಡಿರುವುದು ಸ್ತ್ರೀಯರ ಆದ್ಯ ಕರ್ತವ್ಯ. ಅದರ ಹೊರತಾಗಿ ಆಕೆ ಬೇರೇನೂ ಆಸೆ-ಆಮಿಷಗಳಿಗೆ ಬಲಿಯಾಗದೆ ತನ್ನೆಲ್ಲಾ ಒಳಿತು-ಕೆಡುಕುಗಳನ್ನು ಗಂಡಸಿನ ಕೈಗೊಪ್ಪಿಸಿ, ಆತನ ಆಸರೆಯಲ್ಲೇ ಸ್ವರ್ಗ ಕಾಣಬೇಕೆಂಬುದು ಈ ಸಮಾಜದ ನಿಯಮ. ಇದು ಮಹಿಳೆಯರ ಬಗ್ಗೆ ಈ ಸಮಾಜ ತಳೆದಿರುವ ಆತಂಕಕಾರಿ ನಿಲುವಿನ ಪರಾಕಾಷ್ಠೆ ಎಂಬುದು ಸಾರಾ ಅವರ ಒಂದು ಕತೆಯಲ್ಲಿ ಸ್ಪಷ್ಟಗೊಳ್ಳುತ್ತದೆ. "ಹೆಂಗಸರನ್ನು ಕಾಲಿನ ಚಪ್ಪಲಿಗಳಂತೆ ಬಳಸಿಕೊಳ್ಳಬೇಕು' ಬೇಕಾದಾಗ ಉಪಯೋಗಿಸಿ, ಬೇಡವಾದಾಗ ಮೂಲೆಯಲ್ಲಿ ಬಿಟ್ಟುಬಿಡಬೇಕು"[9] ಎಂಬ ಈ ಮಾತುಗಳಿಂದ ಮುಸ್ಲಿಂ ಹೆಣ್ಣಿನ ದಯಾನೀಯ ಸ್ಥಿತಿಯ ಅರಿವಾಗುತ್ತದೆ.

ಹೆಣ್ಣನ್ನು ಮನುಷ್ಯಳೆಂದು ಒಪ್ಪಿಕೊಳ್ಳಲು ನಿರಾಕರಿಸುವ ಪುರುಷ ಪ್ರಧಾನ ವ್ಯವಸ್ಥೆಯ ಮನಸ್ಥಿತಿಯನ್ನು ಇಲ್ಲಿ ಗುರುತಿಸಬಹುದಾಗಿದೆ. 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯ ನಾದಿರಾ, ಆಕೆಯ ತಾಯಿ ಫಾತಿಮಾ, 'ಸಹನಾ'ದ ಸಕೀನ, ಆಕೆಯ ಮಗಳು ನಸೀಮ, 'ವಜ್ರಗಳು' ಕಾದಂಬರಿಯ ನಾಫೀಸಾ, 'ಸುಳಿ'ಯಲ್ಲಿನ ಮಮ್ಮೂಟಿಯ ಹೆಂಡತಿ ರುಖಿಯಾ – ಇವೆಲ್ಲಾ ಸ್ತ್ರೀ ಪಾತ್ರಗಳೂ ಕೂಡಾ ಪುರುಷರ, ವ್ಯವಸ್ಥೆಯ ಕೈಗೊಂಬೆಗಳಂತೆ ವರ್ತಿಸುತ್ತಾರೆಯೇ ಹೊರತು, ವ್ಯವಸ್ಥೆಯ ವಿರುದ್ಧ ತಿರುಗಿ ಬೀಳುವ ಧೈರ್ಯವನ್ನು ಕಳೆದುಕೊಂಡಿದ್ದಾರೆ. 'ದೇವರೇ ನನ್ನನ್ನೇಕೆ ಹೆಣ್ಣಾಗಿ ಹುಟ್ಟಿಸಿದೆ, ನಾನೂ ಗಂಡಾಗಿದ್ದರೆ ಎಲ್ಲರಂತೆ ಇರಬಹುದಿತ್ತು' ಎಂದು ತಮ್ಮ ಅಸ್ತಿತ್ವವನ್ನು ತಾವೇ ಅಳಿದುಕೊಳ್ಳುವ ಕರುಣಾಜನಕ ಸ್ತ್ರೀ ಪಾತ್ರಗಳೇ ಇವರ ಕಾದಂಬರಿಯ ಉದ್ದಕ್ಕೂ ಭೇಟಿಯಾಗುತ್ತವೆ.

ಈ ಎಲ್ಲಾ ಸಮಾಜದ ಶೋಷಣೆ, ದೌರ್ಜನ್ಯಗಳನ್ನು ಕಣ್ಣಾರೆ ಕಂಡ ಲೇಖಕಿ ತಾನೂ ಕೂಡಾ ಒಂದು ಹೆಣ್ಣಾಗಿ ಸಮಾಜದ ವಿರುದ್ಧ ದನಿಯೆತ್ತದೆ ಇರಲು ಸಾಧ್ಯವಾಗಲಿಲ್ಲ. ತನ್ನ ಕತೆ-ಕಾದಂಬರಿಗಳ ಮೂಲಕ ಲೇಖಕಿ ಸಾರಾ ಅವರು ಇವುಗಳನ್ನೆಲ್ಲಾ ಸಾಧಿಸಿಕೊಂಡಿದ್ದಾರೆ. ಒಟ್ಟಾರೆಯಾಗಿ ಇಸ್ಲಾಂ ಧರ್ಮವು ಮಹಿಳೆಗೆ ಹಲವಾರು

ನಿಯಂತ್ರಣಗಳನ್ನು ಹೇರಿ, ಉಸಿರುಗಟ್ಟಿಸುವ ವಾತಾವರಣದಲ್ಲಿ ಬದುಕುವಂತೆ ಮಾಡಿದೆ. ಸ್ತ್ರೀಯರ ಆಶಯಗಳೆಲ್ಲಾ ಮೂಲೆಗುಂಪಾಗಿ, ಪುರುಷ ಪ್ರಧಾನ ಆಶಯಗಳಿಗೆ ಮಹತ್ವ ದೊರೆತಿದೆ.

ವಿವಾಹ–ವಿಚ್ಛೇದನ :

ಇಸ್ಲಾಂ ಧರ್ಮವು ಗಂಡಸರಿಗೆ ನಾಲ್ಕು ಜನ ಹೆಂಡತಿಯನ್ನು ಹೊಂದುವ ಅವಕಾಶವನ್ನು ಕಲ್ಪಿಸಿದೆ. ಹಾಗೆಯೇ ಹಲವಾರು ವರ್ಷಗಳಿಂದ ಸುಖವಾಗಿ ಸಂಸಾರ ಮಾಡಿದ್ದರೂ, ಯಾವುದೋ ಒಂದು ಕಾರಣಕ್ಕೆ ಆ ಹೆಂಡತಿಯನ್ನು ಮೂರು ಬಾರಿ 'ತಲಾಖ್' ಹೇಳುವುದರ ಮೂಲಕ ಸುಲಭವಾಗಿ ವಿಚ್ಛೇದಿಸುವ ವ್ಯವಸ್ಥೆಯೂ ಮುಸ್ಲಿಂ ಸಮಾಜದಲ್ಲಿದೆ. ಆದರೆ, ಈ ರೀತಿಯ ವಿಚ್ಛೇದನೆ ನೀಡುವ ವಿಚಾರ ಹೆಂಡತಿಯ ಒಪ್ಪಿಗೆಯನ್ನು ಬಯಸುವುದಿಲ್ಲ. ಅವಳಿಗೆ ಅದನ್ನು ಪ್ರಶ್ನಿಸುವ, ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ, ತನಗಾದ ಅನ್ಯಾಯದ ವಿರುದ್ಧ ಧ್ವನಿಯೆತ್ತುವ ಯಾವುದೇ ಒಂದು ಅವಕಾಶವೂ ಮಹಿಳೆಯರಿಗಿಲ್ಲ. ಇಸ್ಲಾಮಿಕ್ ಧಾರ್ಮಿಕ ನಿಯಮಗಳೆಲ್ಲವೂ ಪುರುಷನ ಪರವಾಗಿರುವುದರಿಂದ ಮಹಿಳೆ ಅಸಹಾಯಕಳಾಗಿದ್ದಾಳೆ. ಈ ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆ ವಿವಾಹಿತೆಯಾದರೂ ಕೂಡ ಆಕೆಯ ಸಾಂಸಾರಿಕ ಬದುಕು ಅಭದ್ರತೆಯಿಂದ ಕೂಡಿರುವುದನ್ನು ಕಾಣಬಹುದು. ಈ ಒಂದು ಹಿನ್ನೆಲೆಯಲ್ಲಿ 'ಚಂದ್ರಗಿರಿಯ ತೀರದಲ್ಲಿ' ಮತ್ತು 'ವಜ್ರಗಳು' ಕಾದಂಬರಿಗಳು ಮಹತ್ವ ಪಡೆದುಕೊಂಡಿವೆ.

ತನ್ನ ತಂದೆಯ ಕುತಂತ್ರದಿಂದ ಗಂಡನಿಂದ ಬೇರೆಯಾದ ನಾದಿರಾ ಕೊನೆಯಲ್ಲಿ ತನ್ನ ಗಂಡನೊಡನೆ ಒಂದಾಗಬಯಸಿದರೂ ಧಾರ್ಮಿಕ ಕಟ್ಟಳೆಯು ಅವಳನ್ನು ಮತ್ತು ಅವಳ ಬದುಕನ್ನು ಚಂದ್ರಗಿರಿಯ ನದಿಯಲ್ಲಿ ಪರ್ಯಾವಸನಗೊಳಿಸುತ್ತದೆ. ಹಾಗೆಯೇ 'ವಜ್ರಗಳು' ಕಾದಂಬರಿಯ ನಾಯಕಿ ನಾಫೀಸಾಳು ಎರಡು ಮದುವೆಯಾಗಿ ಇಬ್ಬರಿಂದಲೂ ತಲಾಖ್ ಪಡೆಯುತ್ತಾಳೆ. ಇಲ್ಲೆಲ್ಲಿಯೂ ಇವರ ಅಂತರಂಗದ ಭಾವನೆಗಳನ್ನು ಅರ್ಥಮಾಡಿಕೊಳ್ಳುವ, ಅವುಗಳಿಗೆ ಬೆಲೆಕೊಡುವ ಉದಾರತೆ ಯಾರಲ್ಲಿಯೂ ಕಂಡುಬರುವುದಿಲ್ಲ.

ಇಷ್ಟೆಲ್ಲದರ ನಡುವೆ ಒಂದು ಸಮಾಧಾನಕರ ಸಂಗತಿಯೆಂದರೆ, ವಿಚ್ಛೇದಿತ ಮಹಿಳೆಗೆ ಪುನರ್ ವಿವಾಹದ ಅವಕಾಶ ಕಲ್ಪಿಸಿರುವುದು. ಆದರೆ, ಇಲ್ಲಿಯೂ ತಲಾಖ್‌ನ ಭಯ ಸ್ತ್ರೀಯರಿಗಿದ್ದೇ ಇದೆ. ಅಲ್ಲದೆ ತಲಾಖ್‌ನ ನಂತರ ಮರುಮದುವೆಯಾಗಬಯಸುವ ಗಂಡಸಿಗೆ, ಹೆಂಡತಿಯಾಗಿ ಬರುವವಳು ಈ ಮೊದಲೇ ಮದುವೆಯಾಗಿ ಆ ಗಂಡನಿಂದ ವಿಚ್ಛೇದನ ಪಡೆದವಳೂ ಆಗಿರಬಹುದು. ಒಂದು ವೇಳೆ ಆಕೆಗೆ ಮಕ್ಕಳಿದ್ದರೆ ಆ ಮಕ್ಕಳ

ಹೊಣೆ ವಿಚ್ಛೇದಿತ ಗಂಡನದಾಗಿರುತ್ತದೆ. ಮಕ್ಕಳು ಚಿಕ್ಕವಾಗಿದ್ದರೆ ಒಂದು ಹಂತದವರೆಗೆ ಅವುಗಳನ್ನು ಸಾಕಿ ನಂತರ ಗಂಡನಿಗೆ ಒಪ್ಪಿಸಬೇಕಾಗುತ್ತದೆ. ಅಲ್ಲಿಯವರೆಗೂ ಆ ಮಕ್ಕಳ ನಿರ್ವಹಣೆಯ ಖರ್ಚು-ವೆಚ್ಚಗಳನ್ನು ಆತನೇ ಭರಿಸಬೇಕಾಗುತ್ತದೆ. ಹೀಗೆ ಬಯಸಿದಾಗ ಮದುವೆಯಾಗುವ, ಬೇಡವೆಂದಾಗ ವಿಚ್ಛೇದಿಸುವ ಸ್ವಾತಂತ್ರ್ಯವನ್ನು ಇಸ್ಲಾಂ ಧರ್ಮವು ಪುರುಷನಿಗೆ ನೀಡಿದೆ. ಇದಕ್ಕೆ ಧಾರ್ಮಿಕ ಕಾನೂನಿನ ಅನುಮತಿಯಿದೆ. ಈ ವಿಚಾರದಲ್ಲಿ ಗಂಡಸು ಸರ್ವಸ್ವತಂತ್ರನಾಗಿದ್ದಾನೆ.

ಆದರೆ, ಒಮ್ಮೆ ವಿವಾಹವಾದ ಗಂಡ-ಹೆಂಡತಿ ತಲಾಖ್‌ನ ನಂತರ ಮತ್ತೆ ಒಂದಾಗಬೇಕಾದರೆ ಧಾರ್ಮಿಕ ತೊಡಕು ಎದುರಾಗುತ್ತದೆ. ಅಂತಹ ಸನ್ನಿವೇಶದಲ್ಲಿ ಆಕೆ ಮತ್ತೊಂದು ವಿವಾಹವಾಗಿ ಆತನಿಂದ ತಲಾಖ್ ಪಡೆದವಳಾಗಿರಬೇಕು ಅಥವಾ ಒಂದು ದಿನಕ್ಕಾದರೂ ಬೇರೊಬ್ಬನನ್ನು ವಿವಾಹವಾಗಬೇಕೆಂಬುದು ಇಸ್ಲಾಂ ಸಮಾಜ ರೂಪಿಸಿರುವ ನಿಯಮ. 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯು ಇದೇ ಒಂದು ಅಂಶವನ್ನು ಕೇಂದ್ರವಾಗಿರಿಸಿಕೊಂಡು ರಚನೆಯಾದ ಕಾದಂಬರಿಯಾಗಿದೆ.

ಇತರೆ ಸಾಂಸ್ಕೃತಿಕ ಅಂಶಗಳು :

ಇಸ್ಲಾಂ ಧರ್ಮದಲ್ಲಿ ಉಡುಗೆ-ತೊಡುಗೆ ವಿಚಾರವಾಗಿಯೂ ಹಲವಾರು ನಿಯಮಗಳಿವೆ. ಅದರಲ್ಲೂ ಸ್ತ್ರೀಯರ ಉಡುಪಿನ ವಿಷಯದಲ್ಲಿ ಕಟ್ಟುನಿಟ್ಟಾದ ನಿರ್ಬಂಧಗಳಿವೆ. ಹತ್ತು ವರ್ಷ ಪ್ರಾಯ ದಾಟಿದ ಯಾವ ಮುಸ್ಲಿಂ ಹೆಣ್ಣುಮಗಳೂ ಕೂಡ ಘೋಷಾ ಇಲ್ಲದೆ ಮನೆಯ ಹೊರಬಾಗಿಲಿಗೂ ಬರುವಂತಿಲ್ಲ. ಇತರ ಗಂಡಸರ ದೃಷ್ಟಿ ಇವರ ಮೇಲೆ ಬೀಳಬಾರದೆಂಬ ಉದ್ದೇಶದಿಂದ ಈ ರೀತಿಯ ಉಡುಪಿನ ಒಳಗೆ ತಮ್ಮ ಸ್ತ್ರೀಯರನ್ನು ಮರೆಮಾಡುವ ಪ್ರಯತ್ನ ಮಾಡಿದ್ದಾರೆ.

ಸಾರಾ ಅವರು ಶಾಲೆಗೆ ಹೋಗುತ್ತಿದ್ದ ಕಾಲದಲ್ಲಿ ಅವರನ್ನು ಸಂಪ್ರದಾಯವಾದಿ ಮುಸಲ್ಮಾನರು ನಿಂದಿಸಿದ್ದೂ ಇದೆ. ಅಷ್ಟು ದೊಡ್ಡವಳಾದ ಹುಡುಗಿ ಬುರ್ಕಾ ಇಲ್ಲದೆ ಶಾಲೆಗೆ ಹೋಗುವುದನ್ನು ಸಹಿಸದ ಅವರು ಲೇಖಕಿಯ ತಂದೆ-ತಾಯಿಯವರ ಜೊತೆಯಲ್ಲಿಯೇ "ಮುಸ್ಲಿಂ ಹುಡುಗಿಯರೆಲ್ಲ ಹೀಗೆ ಘೋಷಾ ಇಲ್ಲದೆ ಬೀದಿಯಲ್ಲಿ ತಿರುಗ ಹೊರಟರೆ ಇಸ್ಲಾಂ ಮತ ಉಳಿದೀತೇ?"[೫] ಎಂದು ಅವಲತ್ತುಕೊಂಡಿದ್ದರು.

ಆದರೆ ಬುರ್ಕಾ ಧರಿಸುವುದರ ಹಿನ್ನೆಲೆಯೆಂದರೆ, ಹಿಂದೊಂದು ಕಾಲದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿದ್ದ ಆಕ್ರಮಣವನ್ನು ತಡೆಯುವ ಸಲುವಾಗಿ ಒಂದು ಪರಿಹಾರವೆಂಬಂತೆ ಪ್ರವಾದಿಗಳು ಬುರ್ಕಾಧಾರಣೆಯನ್ನು ಬೋಧಿಸಿದ್ದರು. ಆದರೆ ಕ್ರಮೇಣ ಸಮಾಜದಲ್ಲಿ ಅದೇ ಒಂದು ಸಂಪ್ರದಾಯವೆಂಬಂತೆ ಬೆಳೆದು ಇಂದು ಮಹಿಳೆಯರ

ಪಾಲಿಗೆ ಬಂಧನವಾಗಿ ಪರಿಣಮಿಸಿದೆ. ಈ ಹಿನ್ನೆಲೆಯಲ್ಲಿಯೇ ಸ್ತ್ರೀಯರನ್ನು ಸಾಮೂಹಿಕ ಪ್ರಾರ್ಥನೆಗಳಿಗೆ ನಿಷೇಧಿಸಿ, ಅವರವರ ಮನೆಗಳಲ್ಲಿಯೇ ದಿನಕ್ಕೆ ಮೂರು ಬಾರಿ ಪ್ರಾರ್ಥನೆ ಮಾಡುವುದನ್ನು ಕಡ್ಡಾಯಗೊಳಿಸಿರಬಹುದು. ಸ್ತ್ರೀಯರು ಮಸೀದಿಗೆ ತೆರಳಿ ನಮಾಜ್ ಮಾಡುವ ಪರಿಪಾಠ ಬೆಳೆದಿಲ್ಲ. ಆದರೆ, ಇತ್ತೀಚೆಗೆ ಕೇರಳದಲ್ಲಿ ಮಹಿಳೆಯರು ಮಸೀದಿಗೆ ಹೋಗಲಾರಂಭಿಸಿದ್ದನ್ನು ಲೇಖಕರು ಉಲ್ಲೇಖಿಸುತ್ತಾರೆ.[೬]

ಮತ್ತೊಂದೆಡೆ ಮುಸ್ಲಿಂ ಸಮಾಜವೆಂಬುದು ಮೌಢ್ಯ, ಕಂದಾಚಾರ, ಅಂಧಾನುಸರಣೆಗಳೇ ತುಂಬಿದ ಕೂಪದಂತಿದೆ. ಸಾಂತ್ವನ ಬಯಸುವ ಮನೋವೇದನೆಗಳಿಗೂ, ವೈದ್ಯರ ಔಷಧೋಪಚಾರ ಬಯಸುವ ದೈಹಿಕ ಯಾತನೆಗಳಿಗೂ, ಅಗೋಚರವಾದ ಜಿನ್ನ್ (ಯಕ್ಷ) ಕಾಟಗಳಿಗೂ ವ್ಯತ್ಯಾಸ ತಿಳಿಯದ ಈ ಜನತೆ ಎಲ್ಲಕ್ಕೂ ಸೈತಾನನ ಉಪದ್ರವವೆಂದೇ ಹಣೆಪಟ್ಟಿ ಹಚ್ಚಿ ಅನಾಹುತಕ್ಕೆ ದಾರಿ ಮಾಡಿಕೊಡುತ್ತಾರೆ. ಈ ರೀತಿಯ ಒಂದೆರಡು ನಿದರ್ಶನಗಳು ಇಲ್ಲಿನ ಕಾದಂಬರಿಗಳಲ್ಲಿ ಕಾಣಬಹುದು. 'ವಜ್ರಗಳು' ಕಾದಂಬರಿಯ ನಾಯಕಿ ನಫೀಸಾ ಗಂಡನಿಂದ ತಲಾಖ್ ಪಡೆದು, ತನ್ನ ಕರುಳ ಕುಡಿಯನ್ನು ಗಂಡನಿಗೇ ಒಪ್ಪಿಸಿಯಾದ ನಂತರ, ಬದುಕಿನ ಭರವಸೆಗಳೆಲ್ಲಾ ಹುಸಿಯಾಗಿ ಮಾನಸಿಕವಾಗಿ ಜರ್ಜರಿತಳಾಗುತ್ತಾಳೆ. ಆದರೆ, ಆಕೆಯ ಅಂತರಾಳದ ನೋವು-ಆತಂಕಗಳನ್ನು ಅರ್ಥಮಾಡಿಕೊಳ್ಳುವ ವ್ಯವಧಾನವಿಲ್ಲದ ಆಕೆಯ ಪೋಷಕರು, ಖುರಾನ್ ಪಾರಾಯಣ ಮಾಡಲು ಬರುವ ಮೌಲವಿಗಳಿಂದ ನೂಲು ಮಂತ್ರಿಸಿ ಆಕೆಗೆ ಕಟ್ಟುವುದು, ಆಕೆಯ ಮೈಯಲ್ಲಿ ಜಿನ್ನ್ ಸೇರಿಕೊಂಡಿದೆ ಎಂದು ಮಾಟಮಂತ್ರ ಮಾಡಿಸುವುದು, ಎಳನೀರಿನ ಮೇಲೆ ಖುರಾನ್ ಶ್ಲೋಕ ಬರೆದು ಒಲೆಯಲ್ಲಿ ಹೂತಿಡುವುದು, ತಟ್ಟೆಯಲ್ಲಿ ಖುರಾನ್ ಶ್ಲೋಕ ಬರೆದು ನೀರಿನಲ್ಲಿ ಕಲಕಿ ಕುಡಿಸುವುದು, ಖುರಾನ್ ಶ್ಲೋಕ ಹೇಳಿ ತಲೆಯ ಮೇಲೆ ಊದಿಸುವುದು - ಇವೇ ಮೊದಲಾದ ಅರ್ಥವಿಲ್ಲದ ಆಚರಣೆಗಳಲ್ಲಿ ಬಲವಾದ ನಂಬಿಕೆಯಿಟ್ಟಿರುವುದನ್ನು ಇಲ್ಲಿ ಗಮನಿಸಬಹುದು.

ಇಂತಹುದೇ ಒಂದು ಸನ್ನಿವೇಶವನ್ನು 'ಸಹನಾ' ಕಾದಂಬರಿಯಲ್ಲೂ ಕಾಣಬಹುದು. ಖಾಯಿಲೆ ಬಿದ್ದ ನಸೀಮಳಿಗೆ ಆಕೆಯ ಅತ್ತೆ ಹೇಳುವ ಮಾತು "ಸೈತಾನನ ಉಪದ್ರವವಿರಬೇಕು, ತಟ್ಟೆಯಲ್ಲಿ ಶ್ಲೋಕ ಬರೆಸಿ ಕುಡಿದರೆ ಸೈತಾನ್ ಬಿಟ್ಟು ಹೋಗುತ್ತದೆ"[೭] ಎಂಬುದೇ ಹೊರತು ಆಕೆಯನ್ನು ವೈದ್ಯರಲ್ಲಿಗೆ ಕರೆದೊಯ್ದು ಔಷಧೋಪಚಾರ ಮಾಡಿಸುವ ಆಲೋಚನೆ ಅವರ ತಲೆಯೊಳಗಿರುವುದಿಲ್ಲ. ಕೊನೆಗೆ ನಸೀಮ ಕ್ಷಯರೋಗ ಪೀಡಿತಳಾಗಿ ಆಗಲೋ, ಈಗಲೋ ಸಾಯುವಂತಾದಾಗಲೂ ಆಕೆಯ ಗಂಡ ಖಾಯಿಲೆ ಬಿದ್ದ ಇವಳಿಂದೇನೂ ಪ್ರಯೋಜನವಿಲ್ಲವೆಂದು ಬೇರೊಂದು ಮದುವೆ ಮಾಡಿಕೊಳ್ಳಲು ತಯಾರಿ ನಡೆಸುತ್ತಾನೆ. ಇದರ ಹೊರತು ರೋಗಪೀಡಿತಳಿಗೆ ಶುಶ್ರೂಷೆ ಮಾಡಿಸುವ ಬಗ್ಗೆ ಚಿಂತಿಸುವುದಿಲ್ಲ.

ಸಮಾಜದಲ್ಲಿನ ಇಂತಹ ಅಜ್ಞಾನ, ಮೂಢನಂಬಿಕೆಯ ಹಲವಾರು ಪ್ರಸಂಗಗಳು ಸಾರಾ ಅವರ ಎಲ್ಲಾ ಕಾದಂಬರಿಗಳ ಉದ್ದಕ್ಕೂ ಎದುರಾಗುತ್ತದೆ.

ಇಸ್ಲಾಂ ಸಮಾಜದಲ್ಲಿ ಕಾನೂನಿನ ಅಧಿಪತಿ ಮಸೀದಿಯ ಮೌಲವಿಗಳೇ ಆಗಿದ್ದಾರೆ. ಅವರು ಹೇಳಿದ್ದೇ ನ್ಯಾಯ, ಹೊರಡಿಸಿದ್ದೇ ಕಾನೂನು. ಮೌಲವಿಗಳ ಒಂದೊಂದು ಮಾತುಗಳನ್ನು ಮುಸ್ಲಿಂ ಸಮಾಜ ವೇದವಾಕ್ಯಗಳಂತೆ ಪರಿಪಾಲಿಸುತ್ತದೆ. ಸಮಾಜದಲ್ಲಿ ಏನೇ ಏರುಪೇರಾದರೂ ಮೊದಲು ಧಾವಿಸುವುದು, ಸಲಹೆ-ಸೂಚನೆಗಳನ್ನು ಪಡೆಯುವುದು ಮಸೀದಿಯ ಮೌಲವಿಗಳಿಂದಲೇ. ಅವರು ಇಸ್ಲಾಮಿನ ದೈವಾಂಶ ಸಂಭೂತರಂತೆ ಪ್ರತಿನಿಧಿತರಾಗಿದ್ದಾರೆ. ನಾದಿರಾ ಮತ್ತು ರಶೀದ್ ಒಂದಾಗಬೇಕೆಂದು ಬಯಸಿದಾಗ ಆಕೆಯ ತಂದೆ ಮೊದಲು ಸಲಹೆಗಾಗಿ ಧಾವಿಸಿದ್ದು, ಮಣಿಪುರದ ಮೌಲವಿಗಳ ಬಳಿಗೆ. ಹಾಗೆಯೇ ಮೈ ಸರಿಯಿಲ್ಲದಾಗ, ಮನಸ್ಸು ಕೆಟ್ಟಾಗ, ಆಸ್ತಿಯ ಕುರಿತು ವಿವಾದಗಳು ತಲೆದೋರಿದಾಗ, ಗಂಡ-ಹೆಂಡತಿಯರ ಸಮಸ್ಯೆಗಳು ಎದುರಾದಾಗ, ಮಕ್ಕಳ ಹೊಣೆಗಾರಿಕೆ, ಇನ್ನಿತರ ಎಲ್ಲ ರೀತಿಯ ಸಮಸ್ಯೆಗಳಿಗೂ ತಮಗೆ ತಿಳಿದಂತೆ ನ್ಯಾಯ ತೀರ್ಮಾನ ಮಾಡುವವರು ಮಸೀದಿಯ ಮೌಲವಿಗಳೇ ಹೊರತು ಕೋರ್ಟು-ಕಛೇರಿಗಳಲ್ಲ. ಹೀಗೆ ಸಾಮಾಜಿಕ, ಧಾರ್ಮಿಕ, ಕೌಟುಂಬಿಕ ವಿವಾದಗಳೆಲ್ಲವೂ ಇಲ್ಲಿ ವಿಚಾರಣೆಯಾಗುತ್ತವೆ. ಇದೇ ಇಸ್ಲಾಂನ ನ್ಯಾಯಪದ್ಧತಿಯಾಗಿದೆ.

ಪುರುಷ ಕೇಂದ್ರಿತ ವ್ಯವಸ್ಥೆಯಲ್ಲಿ ಪುರುಷನು ತನ್ನ ಅನುಕೂಲಕ್ಕೆ ತಕ್ಕಂತೆ ಕಾನೂನನ್ನು ತಿದ್ದಿ ರೂಪಿಸಿಕೊಳ್ಳುವ ಅವಕಾಶ ಪಡೆದಿದ್ದಾನೆ. ಇಲ್ಲಿನ ಕಾನೂನಿನ ಪ್ರಕಾರ ಇಸ್ಲಾಂ ನಿಯಮಗಳನ್ನು ಚಾಚೂತಪ್ಪದೆ ಅನುಸರಿಸಬೇಕೇ ಹೊರತು ಪ್ರಶ್ನಿಸುವಂತಹ ಹಕ್ಕಿಲ್ಲ. "ಪ್ರಶ್ನೆ ಕೇಳುವ ಹಕ್ಕು ನಮಗಿಲ್ಲ. ನಾವು ಅನುಸರಿಸಿಕೊಂಡು ನಡೆಯಬೇಕಾದವರೇ ಹೊರತು, ಪ್ರಶ್ನೆ ಕೇಳಬೇಕಾದವರಲ್ಲ"[೮] ಎಂಬ ಮನಸ್ಥಿತಿಗೆ ತಲುಪಿದ ಸಮಾಜವನ್ನು ಇಲ್ಲಿ ಕಾಣಬಹುದು. ಈ ಮಾತುಗಳನ್ನು ಅವರ ಮನಸ್ಸಿನಲ್ಲಿ ಅಚ್ಚೊತ್ತಿರುವವರೂ ಕೂಡ ಮ್ಯೊಲಿಯಾರರೇ ಆಗಿದ್ದಾರೆ! ಮೂಲಭೂತವಾಗಿ ಶಿಕ್ಷಣ ಪಡೆಯದ ಸಮಾಜವನ್ನು ಧರ್ಮದ ಹೆಸರಿನಲ್ಲಿ ತನಗಿಷ್ಟ ಬಂದಂತೆ ಆಡಿಸುವ ಕಲೆ ಧರ್ಮಗುರುಗಳಿಗೆ ತಿಳಿದಿದೆ. ಅದರಲ್ಲೂ ತಲಾಕ್ ಮತ್ತು ಬಹುಪತ್ನಿತ್ವದ ವಿಚಾರದಲ್ಲಿ ಈ ಕರ್ಮ ಸ್ತ್ರೀಯರನ್ನು ತನ್ನ ಕಪಿಮುಷ್ಠಿಯೊಳಗೆ ಕ್ರೂರವಾಗಿ ನಡೆಸಿಕೊಂಡಿದೆ. ಈ ಎಲ್ಲಾ ತಾರತಮ್ಯ ಧೋರಣೆಯ ಕುರಿತಾಗಿ ಸಾರಾ ಅವರು ಮನಮುಟ್ಟುವಂತೆ ತಮ್ಮ ಕೃತಿಗಳಲ್ಲಿ ಚಿತ್ರಿಸಿರುವುದನ್ನು ಕಾಣಬಹುದು.

ಮುಸಲ್ಮಾನ ಸಮಾಜದ ಆಹಾರ ಪದ್ಧತಿಗಳ ಕುರಿತು ಅವಲೋಕಿಸುವಾಗ ಮೊದಲ ನೋಟಕ್ಕೆ ಅರಿವಾಗುವ ಒಂದು ಅಂಶವೆಂದರೆ, ಇವರ ಮುಖ್ಯ ಆಹಾರ ಮಾಂಸಾಹಾರ ವಾಗಿರುವುದು. ಅದರಲ್ಲೂ ಮೀನು ಮತ್ತು ಅದರ ವಿವಿಧ ಬಗೆಯ ತಿಂಡಿಗಳು ದಿನನಿತ್ಯದ ಆಹಾರದಲ್ಲಿ ಮುಖ್ಯ ಸ್ಥಾನ ಪಡೆದಿವೆ. ಲೇಖಕಿ ಸಾರಾ ಅವರು ಮೂಲತಃ ಕರಾವಳಿ ತೀರದವರಾಗಿರುವುದರಿಂದ ಆ ಪ್ರದೇಶದ ಆಹಾರ ಪದ್ಧತಿಯ ಸೊಗಡು ಅವರ ಕೃತಿಗಳಲ್ಲೆಲ್ಲಾ ಹರಡಿಕೊಂಡಿದೆ. ವಿಶೇಷವಾಗಿ ತೀರಪ್ರದೇಶಗಳಲ್ಲಿ ಮೀನುಗಾರಿಕೆ ಹೆಚ್ಚಾಗಿ ಜನಜೀವನದ ಮೇಲೆ ಪ್ರಭಾವ ಬೀರಿರುತ್ತದೆ. ಆದಕಾರಣ ಆ ಪ್ರದೇಶದ ಮುಖ್ಯ ಆಹಾರವಾಗಿ ಮೀನು ಬಳಕೆಯಾಗುವುದು ಸಾಮಾನ್ಯವಾಗಿದೆ.

ಮದುವೆ ಸಮಾರಂಭಗಳು, ಹಬ್ಬಹರಿದಿನಗಳು, ಅಳಿಯನ ಆತಿಥ್ಯ, ನೆಂಟರಿಷ್ಟರ ಉಪಚಾರ ಎಲ್ಲಕ್ಕೂ ವಿಶೇಷ ಅಡುಗೆಯೆಂದರೆ ಕೋಳಿ, ಮೀನು, ಕುರಿಮಾಂಸದಿಂದ ತಯಾರಾದ ಭಕ್ಷ್ಯಭೋಜ್ಯಗಳೇ. ಈ ಆಹಾರಗಳ ಕುರಿತಾದ ವಿವರಗಳು ಸಾರಾ ಅವರ ಎಲ್ಲಾ ಕಾದಂಬರಿಗಳಲ್ಲಿಯೂ ದೊರೆಯುತ್ತವೆ. ಅದರಲ್ಲಿಯೂ 'ಪ್ರವಾಹ-ಸುಳಿ' ಎಂಬ ಕಾದಂಬರಿಯಲ್ಲಿ ಇವುಗಳ ಕುರಿತು ಹೆಚ್ಚು ವಿವರಗಳು ಸಿಗುತ್ತವೆ. ದಿಢೀರನೆ ಶ್ರೀಮಂತನಾದ ಮಮ್ಮೂಟಿಯ ಮನೆಯಲ್ಲಿ ಆಗಾಗ ನಡೆಯುವ ಅದ್ದೂರಿ ಸಮಾರಂಭಗಳಲ್ಲಿ ಮೀನು ಸಾರು, ಕೋಳಿ ಸೂಪು, ಕೋಳಿ ಮತ್ತು ಕುರಿಮಾಂಸದ ವಿವಿಧ ಪಲ್ಯಗಳು, ಬಿರಿಯಾನಿ – ಮುಂತಾದ ವಿವಿಧ ಬಗೆಯ ಮಾಂಸಾಹಾರಿ ಭಕ್ಷ್ಯಗಳು ತಯಾರಾಗುತ್ತಿದ್ದವು. ಅಲ್ಲದೆ ವಿಶೇಷ ರುಚಿಯುಳ್ಳ ಕಾಣೆಮೀನು, ಮೊಡವು, ಮಾಂಜಿಗಳಿಂದ ತಯಾರಾದ ತಿಂಡಿಗಳು, ಸಾಧಾರಣ ಗುಂಪಿಗೆ ಸೇರುವ ಬಂಗುಡೆ, ಭೂತಾಯಿ ಮತ್ತು ಸೀಗಡಿ ಮೀನುಗಳ ವಿವಿಧ ತಿಂಡಿಗಳು ಇವರ ಆಹಾರದಲ್ಲಿ ಪಾಲುಪಡೆಯುವಂತಹವು. ಹಾಗೆಯೇ ಬಾರದ ಅಳಿಯನಿಗಾಗಿ ತಯಾರಾಗುತ್ತಿದ್ದ ವಿಧವಿಧ ತಿಂಡಿ-ತಿನಿಸುಗಳ ಬಗ್ಗೆ 'ವಜ್ರಗಳು' ಕಾದಂಬರಿಯಲ್ಲಿ ವಿವರ ದೊರೆಯುತ್ತದೆ.

ಈ ಎಲ್ಲಾ ವಿವರಗಳಿಂದ ಕರಾವಳಿ ತೀರದ ಆಹಾರಪದ್ಧತಿಗಳ ಕುರಿತು ಮಾಹಿತಿ ಲಭ್ಯವಾಗುತ್ತದೆ. ಒಂದು ಸಮಾಜದ ಕುರಿತು ಅಧ್ಯಯನಕ್ಕೆ ತೊಡಗುವಾಗ ಈ ಎಲ್ಲಾ ಅಂಶಗಳೂ ಪ್ರಾಮುಖ್ಯತೆ ಪಡೆದುಕೊಳ್ಳುತ್ತವೆ. ಯಾವುದೇ ಬರಹಗಾರರು ಹುಟ್ಟಿ ಬೆಳೆದ ಸಾಮಾಜಿಕ ಪರಿಸರದ ಹಿನ್ನೆಲೆ ಅವರ ಕೃತಿಗಳಲ್ಲಿ ಪ್ರತಿಫಲಿತವಾಗಿರುತ್ತದೆ ಎಂಬುದಕ್ಕೆ ಈ ಅಂಶ ಒಂದು ನಿದರ್ಶನವಾಗಿದೆ.

ಈ ಒಂದು ಸಾಮಾಜಿಕ ಪರಿಸರದ ಹಿನ್ನೆಲೆಯಲ್ಲಿ ಬರವಣಿಗೆ ಆರಂಭಿಸಿದ ಸಾರಾ ಅವರು ತನ್ನ ಜಾತಿ-ಧರ್ಮವೆಂಬ ವ್ಯಾಮೋಹಕ್ಕೆ ಒಳಗಾಗದೆ, ಮಾನವೀಯತೆಯ

ನೆಲೆಗಟ್ಟಿನಲ್ಲಿ ನಿಂತು, ವೈಚಾರಿಕತೆಯ ಚೌಕಟ್ಟಿನೊಳಗೆ ಕೃತಿರಚನೆಗಿಳಿಯುತ್ತಾರೆ. ತನ್ನ ಧರ್ಮದಲ್ಲಿರುವ ದೋಷಗಳನ್ನು ಎತ್ತಿ ಹಿಡಿದು, ಅವುಗಳ ಬಗೆಗೆ ಅರಿವು ಮೂಡಿಸುವ, ಅವುಗಳನ್ನು ನಿವಾರಿಸುವ ಪ್ರಯತ್ನದಲ್ಲಿ ತೊಡಗುತ್ತಾರೆ. ದಡದಲ್ಲಿ ನಿಂತು ನೋಡುವವರಿಗೆ ಎಲ್ಲವೂ ಸುಂದರವಾಗೇ ಕಾಣುತ್ತದೆ. ಆದರೆ ನೀರಿನಲ್ಲಿರುವವರಿಗೆ ಮಾತ್ರ ಅಲ್ಲಿ ಕಷ್ಟ-ಸುಖಗಳ ಅರಿವಾಗುತ್ತದೆ. ನೀರಿನೊಳಗೆ ಮುತ್ತುಗಳೂ ಇವೆ, ಮೊಸಳೆ-ತಿಮಿಂಗಲಗಳೂ ಇವೆ. ಹಾಗೆಯೇ ಮೇಲುನೋಟಕ್ಕೆ ಗೋಚರವಾಗುವುದನ್ನು ಬರೆಯುವ ಇತರ ಲೇಖಕರಿಗಿಂತ, ಅದೇ ಧರ್ಮದಲ್ಲಿ ಹುಟ್ಟಿ ಬೆಳೆದು, ಅದೇ ಸಾಮಾಜಿಕ ಪರಿಸರದಲ್ಲಿ ಬದುಕುತ್ತಿರುವ ಲೇಖಕರಿಗೆ ಆ ಸಮಾಜದ ಗುಣ-ದೋಷಗಳ ಕುರಿತು ಸ್ಪಷ್ಟ ಅರಿವಿರುತ್ತದೆ. ಅಂತೆಯೇ ಮುಸ್ಲಿಂ ಲೇಖಕರಾದ ಸಾರಾ ಅವರ ಕೃತಿಗಳಿಗೆ ಇತರರ ಕೃತಿಗಳಿಗಿಂತ ಹೆಚ್ಚು ಪ್ರಾಮುಖ್ಯತೆ ಇದೆ. ಇವರ ಬರವಣಿಗೆ ವಸ್ತುನಿಷ್ಠತೆಯಿಂದ ಕೂಡಿ, ಅನುಭವಜನ್ಯವಾಗಿವೆ. ಇವರ ಕೃತಿಗಳ ಅಧ್ಯಯನದಿಂದ ಮುಸಲ್ಮಾನ ಸಮಾಜದ ಎಲ್ಲಾ ಮುಖಗಳೂ ಸ್ಪಷ್ಟವಾಗುತ್ತವೆ.

---

೧. ಸಾರಾ ಅಬೂಬಕ್ಕರ್ 'ಸಹನಾ' ಕಾದಂಬರಿ ಪುಟ – ೯೮
೨. ಅದೇ – 'ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ' (ಧರ್ಮ ಮತ್ತು ಮಹಿಳೆ) ಪುಟ – ೨೧೯
೩. ಅದೇ – 'ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ' (ಮತಾಂಧತೆ ಮತ್ತು ಕೋಮುವಾದ) ಪುಟ – ೨೫೫
೪. ಅದೇ – 'ಚಪ್ಪಲಿಗಳು' ಕಥಾ ಸಂಕಲನ
೫. ಅದೇ – ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು – ಪುಟ-೧೩೦
೬. ಅದೇ – ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ (ಮುಸ್ಲಿಂ ಸಮಾಜದ ಮಹಿಳೆಯರ ಕೆಲವು ಸಮಸ್ಯೆಗಳು) ಪುಟ – ೧೧೦
೭. ಅದೇ – 'ಸಹನಾ' ಕಾದಂಬರಿ ಪುಟ – ೧೧೩
೮. ಅದೇ – 'ಚಂದ್ರಗಿರಿಯ ತೀರದಲ್ಲಿ' ಪುಟ – ೮೯

ಅಧ್ಯಾಯ - ೫

ಸಾರಾ ಅವರ ಕಾದಂಬರಿಗಳಲ್ಲಿ ಮುಸ್ಲಿಂ ಮಹಿಳೆಯರ ಶೋಷಣೆ ಮತ್ತು ಪ್ರತಿಭಟನೆ

ಮಾನವ ಚರಿತ್ರೆಯಲ್ಲಿ ಮೊದಲು ದಾಸ್ಯಕ್ಕೆ ಒಳಗಾದ ಮನುಷ್ಯ ಜೀವಿ ಎಂದರೆ ಮಹಿಳೆಯೇ ಆಗಿದ್ದಾಳೆ. ಈ ಕಾರಣಕ್ಕಾಗಿ ಆಗಸ್ಟ್ ಬೆಬೆಲ್‌ರವರು 'ಮಹಿಳೆ ಜಗತ್ತಿನ ಪ್ರಥಮ ಶೋಷಿತೆ' ಎಂದು ಕರೆದಿದ್ದಾರೆ. ಪುರುಷಾಧಿಪತ್ಯದ ಈ ಸಮಾಜದಲ್ಲಿ ಶೋಷಣೆಗೆ ಒಳಗಾಗಿರುವ ಮಹಿಳೆಯರು ಕೇವಲ ಯಾವುದೇ ಒಂದು ಕೋಮಿನ, ಜಾತಿಯ, ಧರ್ಮದ ಮಹಿಳೆಯಲ್ಲ. ಶೋಷಣೆ ಎಂಬುದು ಇವೆಲ್ಲವುಗಳನ್ನು ಮೀರಿ ಒಟ್ಟಾರೆಯಾಗಿ ಮಹಿಳಾ ಜನಾಂಗವನ್ನೇ ಬೆಂಬಿಡದೇ ಕಾಡುತ್ತಿರುವ ಭೂತದಂತಿದೆ. ಮಹಿಳೆಯರು ವೈಯಕ್ತಿಕವಾಗಿ, ಕೌಟುಂಬಿಕವಾಗಿ, ಸಾಮಾಜಿಕವಾಗಿ, ಸಾರ್ವಜನಿಕ ಬದುಕಿನಲ್ಲಿ ಹಾಗೂ ನೌಕರಿ ಮಾಡುವ ಸ್ಥಳಗಳಲ್ಲಿಯೂ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವುದು ನಿತ್ಯದ ಕರ್ಮವಾಗಿದೆ.

ಇತ್ತೀಚಿನ ಎರಡು ದಶಕಗಳಿಂದ ಮಹಿಳೆಯರನ್ನು ಪರಿವರ್ತಿಸುವಂತೆ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಬದಲಾವಣೆಗಳು ತೀವ್ರವಾಗಿ ನಡೆಯುತ್ತಿವೆ. ಈ ಕಾರಣಗಳಿಂದಾಗಿ ಮಹಿಳಾ ಚಳುವಳಿಗಳು ತಳೆದಿರುವ ಧೋರಣೆ, ಸ್ವರೂಪ ಮತ್ತು ಎದುರಿಸುತ್ತಿರುವ ಸವಾಲುಗಳು ಪದೇ ಪದೇ ಚರ್ಚೆಗೊಳಪಡುತ್ತಿವೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ಮೌಲ್ಯಗಳ ವಿರುದ್ಧ ಹೋರಾಟಗಳು, ದಬ್ಬಾಳಿಕೆ, ವರದಕ್ಷಿಣೆ, ಬಹುಪತ್ನಿತ್ವ, ಅತ್ಯಾಚಾರ, ಬಾಲ್ಯವಿವಾಹ, ವಿಚ್ಛೇದನೆ, ದುಡಿಯುವ ಮಹಿಳೆಯರ ಹಾಗೂ ಕಾರ್ಮಿಕ ಮಹಿಳೆಯರ ಸಮಸ್ಯೆಗಳು ಚಳುವಳಿಯ ಸ್ವರೂಪ ತಾಳಿದವು. ಈ ಎಲ್ಲಾ ಸಮಸ್ಯೆಗಳಿಗಾಗಿ ಹೋರಾಡುತ್ತಲೇ ಸೈದ್ಧಾಂತಿಕ ನೆಲೆಗಟ್ಟುಗಳು ಸೃಷ್ಟಿಯಾಗಿವೆ. ಪುರುಷ ಸಮಾನ ಹಕ್ಕುಗಳಿಗಾಗಿ ಜಗತ್ತಿನಾದ್ಯಂತ ಮಹಿಳೆಯರು ಈ ಶತಮಾನದ ಆದಿಯಿಂದಲೂ ಹೋರಾಡುತ್ತಲೇ ಬಂದಿದ್ದಾರೆ. ಮಹಿಳಾ ಜನಾಂಗವು ಇಂದಿನ ಈ ಸ್ಥಿತಿ ತಲುಪಲು ಅನೇಕ ಹೋರಾಟದ ಮಜಲುಗಳನ್ನು ಹಾದು ಬರಬೇಕಾಯಿತು. ಆದರೆ ಎಷ್ಟೇ ಹೋರಾಟಗಳನ್ನು ಮಾಡಿದರೂ ಇಂದಿಗೂ ಗಂಡು ಹೆಣ್ಣುಗಳ ನಡುವಿನ ತಾರತಮ್ಯ ಮುಂದುವರಿಯುತ್ತಲೇ ಇದೆ. ಇಷ್ಟೇ ಅಲ್ಲದೇ ಮಹಿಳಾ ಹೋರಾಟಗಳು ಮುಂದುವರಿಯುತ್ತಿದ್ದಂತೆಲ್ಲಾ ಪುರುಷ ಸಮಾಜ ಆಕೆಯ ಮೇಲೆ ತನ್ನ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸಲು ಹಲವು ವಿಧಗಳಲ್ಲಿ ಪ್ರಯತ್ನಿಸುತ್ತಲೇ

ಇದೆ. ಹಾಗೆಯೇ ಮಹಿಳೆಯರನ್ನು ನಿರಂತರ ಶೋಷಣೆಗೊಳಪಡಿಸುತ್ತಾ ಕೀಳರಿಮೆಯಿಂದ ನರಳುವಂತೆ ಮಾಡಿದೆ.

ಅದರಲ್ಲೂ ಮುಸ್ಲಿಂ ಸಮಾಜದ ಮಹಿಳೆಯರ ಮೇಲೆ ನಡೆಯುತ್ತಿರುವ ಶೋಷಣೆಗಳು ತೀರ ಅಮಾನವೀಯವಾದವುಗಳಾಗಿವೆ. ಇಲ್ಲಿನ ಮಹಿಳೆ ಪುರುಷರಿಂದ ಮಾತ್ರ ಶೋಷಣೆಗೊಳಗಾಗಿಲ್ಲ, ಇಸ್ಲಾಂ ಧರ್ಮವೂ ಕೂಡ ಇವರ ಜೊತೆ ಕೈ ಜೋಡಿಸಿದೆ. ಧಾರ್ಮಿಕವಾಗಿ ಹಲವಾರು ವಿಧದ ಶೋಷಣೆಗಳು ಮತ್ತು ಮಾನಸಿಕ ಹಿಂಸೆಗಳನ್ನು ಈ ಮಹಿಳೆಯರು ಅನುಭವಿಸುತ್ತಿದ್ದಾರೆ. ಧರ್ಮವನ್ನು ಮುಂದಿಟ್ಟುಕೊಂಡು ಹಲವಾರು ಕಟ್ಟುಪಾಡುಗಳನ್ನು ಸೃಷ್ಟಿಸಿ, ಇದು ಬೇಡ, ಅದು ಬೇಡ ಎಂದು ಹಲವಾರು ನಿರ್ಬಂಧಗಳನ್ನು ಹೇರಿ ಹೆಣ್ಣಿನ ಜನ್ಮವೇ ನನಗೆ ಬೇಡ ಎಂಬಂತಹ ಸ್ಥಿತಿಗೆ ಸ್ತ್ರೀಯರನ್ನು ತಂದಿಟ್ಟಿದ್ದಾರೆ. ತಮ್ಮ ಅಸ್ತಿತ್ವವನ್ನೇ ಶಪಿಸುವಂತಹ ಪರಿಸ್ಥಿತಿ ಮುಸ್ಲಿಂ ಮಹಿಳೆಯದು.

ಯಾವುದೇ ಒಂದು ಜೀವ ತನ್ನ ಹುಟ್ಟನ್ನು ಶಪಿಸುವುದು ಸಂಕಟದಿಂದ. ಈ ಸಂಕಟವೆಂಬುದು ಇಂದು ನಿನ್ನೆಯದಲ್ಲ. ವಚನಕಾರ್ತಿ ಅಕ್ಕನಿಂದ ಪ್ರಾರಂಭಿಸಿ ಇಲ್ಲವರೆಗೂ ಮಹಿಳೆಯರನ್ನು ಕಾಡುತ್ತಿದೆ. ಹೆಣ್ಣುದೇಹ ಹೊತ್ತ ಮಾತ್ರದಿಂದಲೇ ಅಪಮಾನ, ಹಿಂಸೆ, ನೋವು, ನಿಂದನೆ, ಪರೀಕ್ಷೆಗೆ ಒಳಗಾದ ಅಕ್ಕ ನೊಂದು ತನ್ನ ದೇಹವನ್ನೇ 'ಸುಡಲಿ ದೇಹವ' ಎಂದು ಶಪಿಸುವುದು ಸಮಾಜದ ಕಾರಣದಿಂದಲೇ. ಅದೇ ಅಳಲು-ಆತಂಕ ಆಧುನಿಕ ಮಹಿಳೆಯರನ್ನು ಇಂದಿಗೂ ಕಾಡುತ್ತಿದೆ.

ಹೆಣ್ಣನ್ನು ದಲಿತಳೆಂದು ಪರಿಗಣಿಸಿರುವ ಪುರುಷ ಸಮಾಜ ಅವಳನ್ನು ಎರಡನೇ ದರ್ಜೆಯ ಪ್ರಜೆಯಾಗಿಯೇ ಕಂಡಿದೆ. ಹೆಣ್ಣಾಗಿ ಹುಟ್ಟಿದ ತನ್ನದಲ್ಲದ ತಪ್ಪಿಗೆ ಸ್ತ್ರೀಯರು ಅದರಲ್ಲೂ ಮುಸ್ಲಿಂ ಸ್ತ್ರೀಯರು ಅನುಭವಿಸಬೇಕಾದ ಸಂಕಟ, ನೋವುಗಳನ್ನು ಮುಸ್ಲಿಂ ಸಾಹಿತಿಗಳು ತಮ್ಮ ಕೃತಿಗಳಲ್ಲಿ ಪ್ರತಿಫಲಿಸಿದ್ದಾರೆ. ಅದರಲ್ಲೂ ಮುಸ್ಲಿಂ ಸಂವೇದನೆಗಳು ದಾಖಲಾಗುವ ಸಂದರ್ಭದಲ್ಲಿ ಹೆಣ್ಣಿನ ಅನುಭವಕ್ಕೆ ದಕ್ಕುವ ಅನೇಕ ವಿಷಯಗಳನ್ನು, ಹೆಣ್ಣಾಗಿ ಹುಟ್ಟಿದ ಕಾರಣಕ್ಕಾಗಿಯೇ ಎದುರಿಸಬೇಕಾದ ಅನೇಕ ಸಂಧಿಗ್ಧ ಸನ್ನಿವೇಶಗಳನ್ನು ಮುಸ್ಲಿಂ ಮಹಿಳಾ ಸಾಹಿತಿಗಳು ದಾಖಲಿಸಿದ್ದಾರೆ. ಈ ನಿಟ್ಟಿನಲ್ಲಿ ಸಾರಾ ಅವರ ಕತೆ-ಕಾದಂಬರಿಗಳು ಬಹುತೇಕ ಇಸ್ಲಾಂ ಸಂಸ್ಕೃತಿಯ ಹೆಣ್ಣನ್ನೇ ಚಿತ್ರಿಸಿದೆ. ಒಂದು ಜನಾಂಗದ ಮಹಿಳೆ ಬದುಕುತ್ತಿರುವ ಸಮಾಜದ ಚಿತ್ರಣ ಇವರ ಕೃತಿಗಳಲ್ಲಿದೆ. ಅವರ ಬರವಣಿಗೆಯ ಉದ್ದೇಶ, ದಾರಿ, ದಿಕ್ಕುಗಳು ಬಹಳ ಸ್ಪಷ್ಟವಾಗಿವೆ. ಆರೋಗ್ಯ ಪೂರ್ಣವಾದ ಆಲೋಚನೆಗಳು ಇಲ್ಲಿ ಒಡಮೂಡಿವೆ. ಇವು ಹಳೆ ವ್ಯವಸ್ಥೆಯಿಂದ ನೋವು ತಿನ್ನುತ್ತಲೇ ಹೊಸದಕ್ಕಾಗಿ ಹಂಬಲಿಸುವ, ಹೊಸದನ್ನು ಬಯಸುವ ಚಿತ್ರಣಗಳೇ ಆಗಿವೆ. ಮುಸ್ಲಿಂ ಸಂಸ್ಕೃತಿಯನ್ನು

ದಿಟ್ಟವಾಗಿ ಆವರಿಸಿಕೊಂಡು ಬರೆಯುವ ಸಾರಾ ಅವರ ನಾಯಕಿಯರು, ಧರ್ಮದ ಮಿತಿಯಲ್ಲೇ ಸಂಚರಿಸುತ್ತಾರೆಯೇ ಹೊರತು ಬೌದ್ಧಿಕ ಆಯಾಮ ಪಡೆದುಕೊಳ್ಳುವುದಿಲ್ಲ. ಅವು ಧಾರ್ಮಿಕ ಮಿತಿಯಲ್ಲಿಯೇ ಸಂಚರಿಸುತ್ತಲೇ ಹೊಸದನ್ನು ಬಯಸುವಂತಹವಾಗಿದೆ.

ಸಾರಾ ಅವರ ಕಾದಂಬರಿಗಳಲ್ಲೆಲ್ಲಾ ಸ್ತ್ರೀಯರು ಒಂದಲ್ಲ ಒಂದು ರೀತಿಯಲ್ಲಿ ಶೋಷಣೆಗೊಳಗಾಗುವುದನ್ನು ಕಾಣಬಹುದು. ಅವು ಕೌಟುಂಬಿಕವಾಗಿಯೋ, ಸಾಮಾಜಿಕವಾಗಿಯೋ, ಧಾರ್ಮಿಕವಾಗಿಯೋ, ಆರ್ಥಿಕವಾಗಿಯೋ ಆಗಿರಬಹುದು. ತನ್ನ ಮೇಲೆ ಎಷ್ಟೇ ಶೋಷಣೆ ನಡೆದರೂ ಬಾಯಿಬಿಟ್ಟು ಎದುರಾಡದ, ಪ್ರತಿಭಟಿಸದ ಪಾತ್ರಗಳೇ ಇಲ್ಲಿಯವು. ಕೊನೆಗೆ ಸಹಿಸಲಸಾಧ್ಯವಾದಾಗ ತಮ್ಮ ಜೀವವನ್ನೇ ಬಲಿಕೊಡುತ್ತವೆಯೇ ಹೊರತು ತಿರುಗಿಬೀಳುವ ಸನ್ನಿವೇಶಗಳಿಲ್ಲ. ಮುಸ್ಲಿಂ ಸಮಾಜದ ಅನಿಷ್ಟ ಪದ್ಧತಿಗಳಾದ ತಲಾಖ್, ಬಹುಪತ್ನಿತ್ವ, ಮರುವಿವಾಹದ ನಿಯಮ, ಘೋಷಾ ಪದ್ಧತಿ ಇವೇ ಮೊದಲಾದವು ಮುಸ್ಲಿಂ ಮಹಿಳೆಯರನ್ನು ಶೋಷಣೆಗೊಳಪಡಿಸಿ, ಹಿಂಡಿ ಹಿಪ್ಪೆ ಮಾಡಿರುವ ಪದ್ಧತಿಗಳು. ಧರ್ಮ ನಿಯಮಗಳನ್ನೆಲ್ಲಾ ಗಂಡಸೇ ರೂಪಿಸಿದ ಕಾರಣ ಹೆಣ್ಣು ದೇಹ ಮೂಲದಿಂದಲೇ ಶೋಷಿತಳಾಗುತ್ತಾಳೆ.

ಸಾರಾ ಅವರ ಪ್ರಮುಖ ಕಾದಂಬರಿ 'ಚಂದ್ರಗಿರಿಯ ತೀರದಲ್ಲಿ' ಎಂಬ ಕೃತಿಯು ಶೋಷಣೆಯ ಒಂದು ರೂಪವಾದ 'ತಲಾಖ್' ನ ಸುತ್ತ ಹೆಣೆದುಕೊಂಡಿರುವ ಕತೆಯಾಗಿದೆ. ಇದು ಕನ್ನಡ ಸಾಹಿತ್ಯ ಲೋಕದಲ್ಲಿ ಹೊಸ ಸಾಂಸ್ಕೃತಿಕ ದಾಖಲೆಯಾಯಿತು. ಈ ಕಾದಂಬರಿಯು ಚಂದ್ರಗಿರಿ ನದಿಯಿಂದ ಆರಂಭವಾಗಿ, ಕೊನೆಗೆ ಬದುಕಿನಲ್ಲಿ ನೊಂದು-ಬೆಂದ ನಾದಿರಾ ಈ ನದಿಯಲ್ಲಿಯೇ ಆತ್ಮಹತ್ಯೆ ಮಾಡಿಕೊಳ್ಳುವುದರೊಂದಿಗೆ ಮುಕ್ತಾಯವಾಗುತ್ತದೆ. ಈಕೆಯು ತನ್ನ ಜನ್ಮದಾತನೆನಿಸಿಕೊಂಡ ತಂದೆಯಿಂದ, ಒಂದು ರೀತಿಯಲ್ಲಿ ಶೋಷಣೆಗೊಳಗಾದರೆ, ತನ್ನ ಗಂಡನಿಂದ ಮತ್ತೊಂದು ರೀತಿಯಲ್ಲಿ ಹಾಗೂ ಧರ್ಮದ ಹೆಸರಿನಲ್ಲಿ ಇನ್ನೊಂದು ರೀತಿಯಲ್ಲಿ ಶೋಷಣೆಗೊಳಗಾಗುತ್ತಾಳೆ.

ಸಂಪ್ರದಾಯದ ಹೆಸರಿನಲ್ಲಿ ಬದುಕು ಬಂಧಿಯಾಗಿರುವ ಕರಾಳತೆಯ ಅನುಭವದ ಮೂಕವೇದನೆ, ಧ್ವನಿ ಇಲ್ಲದ ನೋವುಗಳು ಇಲ್ಲಿ ಹರಳುಗಟ್ಟಿನಿಂತಿವೆ. ವ್ಯವಸ್ಥೆಗೆ ಪ್ರತಿರೋಧ ವ್ಯಕ್ತಪಡಿಸಲು ಧೈರ್ಯ ಸಾಲದ ಅಸಹಾಯಕತೆ ಮನಮಿಡಿಯುವಂತೆ ಈ ಕಾದಂಬರಿಯಲ್ಲಿ ಚಿತ್ರಿತವಾಗಿದೆ.

ತಂದೆಯೆನಿಸಿಕೊಂಡ ವ್ಯಕ್ತಿಯ ತೀರಾ ವಿಚಿತ್ರ ಸ್ವಭಾವದಿಂದಾಗಿ ಹಚ್ಚಹಸಿರಾಗಿದ್ದ ಮಗಳ ಬಾಳಿಗೆ ಕೈಯಾರೆ ಬೆಂಕಿ ಹಚ್ಚುವ ಹೃದಯ ವಿದ್ರಾವಕ ಘಟನೆ ನಡೆಯುತ್ತದೆ. ಕೊಟ್ಟ ಮನೆಗೂ, ಹುಟ್ಟಿದ ಮನೆಗೂ ಕೀರ್ತಿ ತರುವಂತಹ ಸ್ವಭಾವದವಳಾದ ನಾದಿರಾಳನ್ನು

ಅಷ್ಟೇ ವಿನಯವಂತ, ಸಭ್ಯ, ಮೃದುಹೃದಯಿಯಾದ ರಶೀದ್‌ಗೆ ವಿವಾಹ ಮಾಡಿರುತ್ತಾರೆ. ಇವರದು ಅಪರೂಪದ, ಅನುರೂಪದ ಸಾಮರಸ್ಯ ದಾಂಪತ್ಯ. ಆದರೆ ಮೈಮುರಿದು ದುಡಿಯಲಾರದ ಮೈಗಳ್ಳ ತಂದೆ ಹಣದ ಸಹಾಯವನ್ನು ಅಳಿಯನಿಂದ ಪಡೆಯುವಲ್ಲಿ ವಿಫಲನಾಗಿ, ಅಳಿಯನಿಗೆ ಹೇಳದೇ ಕೇಳದೇ ಅತ್ತೆಯ ಅನುಮತಿಯಿಂದ ಮಗಳನ್ನು ತವರಿಗೆ ಕರೆತರುತ್ತಾನೆ. ಈತನ ಉದ್ದೇಶ ಅಳಿಯನ ವಿರುದ್ಧ ಸೇಡು ತೀರಿಸಿಕೊಳ್ಳುವುದಾಗಿರುತ್ತದೆ. ಗಂಡನ ಅನುಮತಿ ಪಡೆಯದೆ ತಂದೆಯ ಹಿಂದೆ ಬಂದುದ್ದಕ್ಕೆ ನಾದಿರಾ ನಂತರ ಪಶ್ಚಾತ್ತಾಪ ಪಡುತ್ತಾಳೆ. ತಂದೆಯ ಹಠಮಾರಿತನದ ಮುಂದೆ ಮಗಳ ಅಸಹಾಯಕತೆ ದಿನದಿನಕ್ಕೆ ಕಿತ್ತು ತಿನ್ನುತ್ತಿರುತ್ತದೆ.

ಗಂಡನ ಮನೆಗೆ ಕಳುಹಿಸದ ತಂದೆ, ಕರೆದುಕೊಂಡು ಹೋದವರೇ ತಂದು ಬಿಡಲಿ ಎಂದು ಹಠ ಮಾಡುವ ಗಂಡ, ಇವರಿಬ್ಬರ ನಡುವೆ ನರಕಯಾತನೆ ಅನುಭವಿಸುವವಳು ನಾದಿರಾ. ಇಲ್ಲೆಲ್ಲಿಯೂ ತೀರ್ಮಾನ ತೆಗೆದುಕೊಳ್ಳುವ ಅವಕಾಶ ಅವಳ ಪಾಲಿಗೆ ಸಿಗುವುದೇ ಇಲ್ಲ. ಆದರೆ ಇವಳ ಈ ಅಸಹಾಯಕತೆಯನ್ನು ಬಂಡವಾಳವಾಗಿಸಿಕೊಂಡ ತಂದೆ ಆಕೆಯನ್ನು ಬೀಡಿಕಟ್ಟುವ ಕೆಲಸಕ್ಕೆ ಹಚ್ಚುತ್ತಾನೆ. ಇಲ್ಲಿಂದಲೇ ಆಕೆಯ ನರಕದ ಬದುಕು ಆರಂಭವಾಗುತ್ತದೆ. ಅರೆಗಳಿಗೆಯೂ ಅಗಲಿರಲಾರದ ಪತಿಯ ಸಾಮಿಪ್ಯವನ್ನು ಕಿತ್ತುಕೊಂಡ ತಂದೆಗೆ 'ನನ್ನನ್ನೇಕೆ ಹುಟ್ಟಿಸಿದಿರಿ? ನನಗೇಕೆ ಮದುವೆ ಮಾಡಿದಿರಿ?' ಎಂದು ಚೀರಿ ಕೇಳಬೇಕೆಂದುಕೊಳ್ಳುತ್ತಾಳೆ. ಆದರೆ ಆ ಮಾತುಗಳೆಲ್ಲಾ ಗಂಟಲಲ್ಲೇ ಹೂತು ಹೋಗುತ್ತವೆ. ಒಂದು ಕ್ಷಣ ಪ್ರತಿಭಟಿಸಬೇಕೆಂಬ ಧೈರ್ಯ ತೋರಿದರೂ ಮರುಕ್ಷಣದಲ್ಲಿಯೇ ಆ ಪ್ರಯತ್ನದಲ್ಲಿ ಸೋಲುತ್ತಾಳೆ.

ಒಂದೊಮ್ಮೆಗೆ ತನ್ನ ಪ್ರೀತಿಯ ಚಂದ್ರಗಿರಿಯನ್ನು ದ್ವೇಷಿಸುತ್ತಾಳೆ, 'ಮಧ್ಯದಲ್ಲಿ ಈ ನದಿ ಇಲ್ಲದಿದ್ದರೆ ತಾನು ಹೇಗಾದರೂ ಮಾಡಿ ಕಾವಳ್ಳಿಗೆ ಹೋಗುತ್ತಿದ್ದೆ' ಎಂದು ಹೇಳಿಕೊಳ್ಳುವ ಆಕೆಯ ಮನದ ತುಡಿತ ತಂದೆಗಾಗಲೀ, ಗಂಡನಿಗಾಗಲೀ ತಿಳಿಯುವುದೇ ಇಲ್ಲ. ಅವಳ ಸಮಾಜದಲ್ಲಿ ಹೆಣ್ಣಿನ ತಲ್ಲಣಗಳಿಗೆ ಬೆಲೆಯೇ ಇಲ್ಲ. ಈ ಸಮಾಜ ಆಕೆಯನ್ನು ಎಂದೂ ಒಬ್ಬಳೇ ನದಿದಾಟುವುದಕ್ಕೆ ಬಿಟ್ಟಿಲ್ಲ. ದೋಣಿಯಲ್ಲಿ ಒಬ್ಬಳೇ ಕುಳಿತು ಎಲ್ಲಿಯೂ ಹೋಗಲು ಬಿಟ್ಟಿಲ್ಲ, ಹಾಗೆ ಹೋದರೂ ತನ್ನ ಪರಿಚಿತರ ಬಾಯಿಗೆ ಆಹಾರವಾಗಬೇಕಾಗುತ್ತದೆ. ಹೀಗೆಲ್ಲಾ ಯೋಚಿಸುತ್ತಾ ಅಸಹಾಯಕತೆಯ ಉರಿಯಲ್ಲಿ ಭಸ್ಮವಾಗುತ್ತಾಳೆ ನಾದಿರಾ.

ಮತ್ತೊಂದು ಆಘಾತವೆಂಬಂತೆ, ಗಂಡನನ್ನು ಸೇರುವ ಆಸೆಯನ್ನು ಹೊತ್ತವಳಿಗೆ ಆತನಿಂದ ಸಿಕ್ಕಿದ್ದು ಮಗುವನ್ನು ತನ್ನಿಂದ ಕಿತ್ತುಕೊಂಡ ಗಾಯದ ಮೇಲಿನ ಬರೆ. ರಶೀದನ ಉದ್ದೇಶ ಮಗುವನ್ನು ಬಿಟ್ಟಿರಲಾರದ ನಾದಿರಾ ತಮ್ಮ ಮನೆಗೆ ಬಂದೇ

ಬರುವಳೆಂಬ ದೂರದ ಆಸೆ. ಆದರೆ ಅಹಂಕಾರಿ, ಅವಿವೇಕಿಯಾದ ಮಹಮದ್‌ಖಾನ್‌ನ ಕಲ್ಲುಹೃದಯ ಇದಕ್ಕೆಲ್ಲಾ ಅವಕಾಶಕೊಡುವುದಿಲ್ಲ. ಈ ಅತಿರೇಖ ಎಲ್ಲಿಗೆ ಮುಟ್ಟುತ್ತದೆಂದರೆ ಮಗಳ ಸಮ್ಮತಿಯಿಲ್ಲದೆ ಅಳಿಯನಿಂದ ತಲಾಖ್ ಕೊಡಿಸುವವರೆಗೆ ಬಂದು ನಿಲ್ಲುತ್ತದೆ. ಅಲ್ಲಿಂದ ಮುಂದೆ ಆಕೆಗೆ ಬೇರೊಂದು ವಿವಾಹ ಮಾಡಿಸುವ ಆಲೋಚನೆ ಆತನದು. ಗಂಡನಿಂದ ತಲಾಖ್ ಬಂದ ವಿಚಾರ ತಿಳಿದ ನಾದಿರಾಳ ಅಸ್ತಿತ್ವವೇ ನಡುಗಿಹೋಗುತ್ತದೆ. ಯಾವ ತಪ್ಪನ್ನೂ ಮಾಡದ ಅಮಾಯಕಿಯ ಮೇಲೆ ಧಾರ್ಮಿಕತೆಯು ತನ್ನ ದಬ್ಬಾಳಿಕೆ, ಶೋಷಣೆಯ ಅಸ್ತ್ರವನ್ನು ಎಸೆದಿರುತ್ತದೆ. ಹೀಗೆ ಅನ್ಯಾಯಕ್ಕೆ ಗುರಿಯಾದ ನಾದಿರಾಳು ತನ್ನ ಕಿವಿಯನ್ನು ತಾನೇ ನಂಬಲಾರದವಳಾಗುತ್ತಾಳೆ. ಇಂತಹ ಪರಿಸ್ಥಿತಿಗೆ ತಾನು ತಲುಪುವೆನೆಂದು ಆಕೆ ಕನಸಿನಲ್ಲಿಯೂ ಎಣಿಸಿರುವುದಿಲ್ಲ. ತನ್ನ ಗಂಡ ಎಂದಾದರೊಂದು ದಿನ ಬಂದು ತನ್ನನ್ನು ಕರೆದೊಯ್ಯುತ್ತಾನೆಂದು ನಂಬಿದ್ದ ನಿರೀಕ್ಷೆ ಹುಸಿಯಾಗಿ ಕೇವಲ ಭ್ರಮೆ ಅವಳದಾಗುತ್ತದೆ. ಸ್ವತಂತ್ರ್ಯ ಅಸ್ತಿತ್ವವಿಲ್ಲದೆ, ಅನ್ಯಾಶ್ರಯದ ಹಂಗಿನರಮನೆಯಲ್ಲಿ, ಒಡೆಯನ ಸಂತತಿಯನ್ನು ಹೆತ್ತುಕೊಡುವ ತೊಗಲು ಚೀಲವಾದ ಹೆಣ್ಣನ್ನು ನಿರಂತರ ಕಾಲ್ಚೆಂಡಿನಂತೆ ಒದೆಯಲಾಗುತ್ತದೆ.

ಇತ್ತ ಸತ್ಯಾಸತ್ಯತೆಯನ್ನರಿಯುವ ಗೋಜಿಗೆ ಹೋಗದ ರಶೀದ್ ನಾದಿರಾಳನ್ನು ಬಿಟ್ಟು ಬೇರೆ ವಿವಾಹವಾಗಲು ನಿರಾಕರಿಸಿ, ನಾದಿರಾಳ ನೆನಪಿನಲ್ಲೇ ಬಾಳುವ ದೃಢನಿರ್ಧಾರ ಕೈಗೊಳ್ಳುತ್ತಾನೆ. ಈತ ಒಮ್ಮೆ ತನ್ನ ಬಿಗುಮಾನವನ್ನು ಬಿಟ್ಟು ನಾದಿರಾಳನ್ನು 'ಮನೆಗೆ ಬಾ' ಎಂದು ಕರೆದಿದ್ದರೆ, ತುದಿಗಾಲಲ್ಲೇ ನಿಂತಿದ್ದ ಆಕೆ ಓಡೋಡಿ ಬರುತ್ತಿದ್ದಳು. ಆದರೆ ಆ ಧೈರ್ಯ ತೋರದ ಈತ ದುರ್ಬಲ ಮನಸ್ಕನಾಗಿ ಕಂಡುಬರುತ್ತಾನೆ. ಕೊನೆಗೊಮ್ಮೆ ಮೀನು ಮಾರುವ ಪಾರುವಿನಿಂದ ನಿಜಾಂಶ ತಿಳಿದು ಅಚಾತುರ್ಯದಲ್ಲಿ ನಡೆದ ಅನಾಹುತಕ್ಕೆ ಪಶ್ಚಾತ್ತಾಪ ಪಡುತ್ತಾನೆ. ತಂದೆ ಮಾಡಿದ ತಪ್ಪಿಗೆ ಮಗಳಿಗೆ ಶಿಕ್ಷೆ ವಿಧಿಸಿದ್ದಕ್ಕಾಗಿ ನೊಂದುಕೊಂಡ ರಶೀದ್ ಮತ್ತೆ ನಾದಿರಾಳನ್ನು ಸೇರುವ ಬಯಕೆ ವ್ಯಕ್ತಪಡಿಸುತ್ತಾನೆ.

ಈ ನಡುವೆ ಬೀಡಿ ಕಟ್ಟುವ ಕಾಯಕದಿಂದ ತವರಿನ ಆರ್ಥಿಕ ಭಾರ ಹೊರುವ ಆದಾಯದ ಮೂಲವಾದ ಈಕೆಯನ್ನು ಅಷ್ಟು ಸುಲಭವಾಗಿ ಕಳುಹಿಸಿಕೊಡಲು ಸಿದ್ಧನಿಲ್ಲದ ಸ್ವಾರ್ಥಿ ತಂದೆ, ತನ್ನದೇ ವಯಸ್ಸಿನ ಶ್ರೀಮಂತನಿಗೆ ನಾದಿರಾಳನ್ನು ಕಟ್ಟುವ ಪ್ರಯತ್ನ ಮಾಡುತ್ತಾನೆ. ಈ ಸಂದರ್ಭದಲ್ಲಿ ಸಿಡಿದೇಳುವ ನಾದಿರಾ ಮರುಮದುವೆ ಮಾಡಿದರೆ ಚಂದ್ರಗಿರಿಯಲ್ಲಿ ಆಶ್ರಯ ಪಡೆಯುತ್ತೇನೆಂದು ತನ್ನ ತಂದೆಯನ್ನು ಬೆದರಿಸುತ್ತಾಳೆ. ಈ ರೀತಿಯ ವಿರೋಧವನ್ನು ಮೊದಲೇ ತೋರಿದ್ದರೆ, ಆಗುವ ಅನಾಹುತವು ತಪ್ಪುತ್ತಿತ್ತು. ಆದರೆ, ಅದಕ್ಕೆ ಪರಿಸ್ಥಿತಿ ಅವಕಾಶಕೊಟ್ಟಿರಲಿಲ್ಲ. ಹೆಣ್ಣಾದವಳಿಂದ ಎಷ್ಟೆಲ್ಲಾ ರೀತಿಯಿಂದ ಪ್ರಯೋಜನ ಪಡೆದುಕೊಳ್ಳಬಹುದೆಂಬ ದಿಕ್ಕಿನಲ್ಲಿ ಪುರುಷನ ಆಲೋಚನೆ ಹರಿಯುವುದನ್ನು

ಇಲ್ಲಿ ಗಮನಿಸಬಹುದು. ಈ ಸನ್ನಿವೇಶದಲ್ಲಿ ಬದುಕು ಆಕೆಗೆ ಮಾತನ್ನಾಡುವ ಧೈರ್ಯ ಕೊಡುತ್ತದೆ. ಆದರೆ ರಶೀದ್ ಮತ್ತೆ ಅವಳೊಂದಿಗೆ ಬಾಳಲು ಇಷ್ಟಪಟ್ಟಾಗ ಧರ್ಮ ಅದಕ್ಕೆ ಸಮ್ಮತಿಸುವುದಿಲ್ಲ.

ಈ ಕಾದಂಬರಿಯಲ್ಲಿ ಬರುವ ಮುಖ್ಯ ವಿಷಯ 'ಷರಿಯತ್ ನಿಯಮ' ಇದರ ಪ್ರಕಾರ "ಗಂಡನಿಂದ ತಲಾಖ್ ಪಡೆದ ಮಹಿಳೆಯನ್ನು ಮತ್ತೆ ಅದೇ ಗಂಡನು ವಿವಾಹವಾಗಬೇಕೆಂದರೆ ಅಥವಾ ಒಟ್ಟಿಗೆ ಇರಲು ಬಯಸಿದರೆ, ಆತನ ಹೆಂಡತಿ ಮತ್ತೆ ಇನ್ನೊಬ್ಬನನ್ನು ವಿವಾಹವಾಗಿ ಆತನಿಂದಲೂ ತಲಾಖ್ ಪಡೆದಿರಬೇಕು ಅಥವಾ ಅವಳು ಬೇರೊಬ್ಬನನ್ನು ಮದುವೆಯಾಗದಿದ್ದರೆ ಒಂದು ದಿನಕ್ಕಾದರೂ ಒಬ್ಬನನ್ನು ವಿವಾಹವಾಗಿ ಆತನೊಡನೆ ಒಂದು ರಾತ್ರಿಯನ್ನು ಕಳೆಯಬೇಕು. ಮರುದಿನ ಅವನಿಂದ ತಲಾಖ್ ಹೇಳಿಸಿಕೊಂಡು ಮೂರು ತಿಂಗಳು ಕಾಯಬೇಕು. ಅವನಿಂದ ಆಕೆಯು ಗರ್ಭಿಣಿಯಾಗಿಲ್ಲವೆಂದು ನಿಶ್ಚಯವಾದ ಮೇಲೆ ಮೊದಲ ಗಂಡನು ಅವಳನ್ನು ಮರು ವಿವಾಹವಾಗಬಹುದು,"[1] ಇದು 'ಷರಿಯತ್ ನಿಯಮ'. ಈ ಸಂದರ್ಭದಲ್ಲಿ ನಾದಿರಾ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾಳಾದರೂ ಆ ಮಾತುಗಳಾವುವೂ ಆಕೆಯ ಬಾಯಿಯಿಂದ ಹೊರಬೀಳುವುದೇ ಇಲ್ಲ. "ಒಂದು ಹೊತ್ತು ತನ್ನ ದೇಹವನ್ನು ಮತ್ತೊಬ್ಬನಿಗೆ ಒಪ್ಪಿಸಲು ತಾನೇನು ದನವೇ? ಹೃದಯ ಭಾವನೆಗಳೊಂದೂ ಇಲ್ಲದ ಮೃಗ ತಾನು ಎನ್ನುವಂತೆ ಇವರು ವರ್ತಿಸುತ್ತಾರಲ್ಲ?"[2] ಎಂದು ತನ್ನ ತಂದೆ ಮತ್ತು ಗಂಡನ ಮೇಲೆ ತಿರಸ್ಕಾರ, ಅಸಹನೀಯವಾದ ರೋಷ ಉಕ್ಕುತ್ತದೆ.

ಆದರೂ ಕೌಟುಂಬಿಕ ಒತ್ತಡಗಳಿಗೆ ಮಣಿದು ರಶೀದ್‌ನನ್ನು ಮತ್ತೆ ಕೂಡುವ ಹಂಬಲದಿಂದ ನಾದಿರಾ ಈ ಕಟ್ಟಳೆಯನ್ನು ಒಪ್ಪಲು ಬಹು ಕಷ್ಟದಿಂದ ಸಿದ್ಧಳಾಗುತ್ತಾಳೆ. ಐವತ್ತು ವರ್ಷದ ಒಂದು ದಿನದ ವರ, ಅಸಹ್ಯರೂಪದ ಅಲಿಯೊಡನೆ ಅವಳ ನಿಖಾಹ ಕೂಡಾ ನಡೆದು ಹೋಗುತ್ತದೆ. ಈ ಕ್ಷಣದಲ್ಲಿ ನಾದಿರಾಳ ಮನಸ್ಸಿನಲ್ಲಿ ನಡೆಯುವ ತಳಮಳವನ್ನು ಸಾರಾ ಅವರು ಯಥಾರ್ಥವಾಗಿ ಗ್ರಹಿಸಿದ್ದಾರೆ.

"ನಿಖಾಹ ಹೇಳುವುದು ನಾದಿರಾಳ ಕಿವಿಯ ಮೇಲೆ ಬೀಳುತ್ತಿದ್ದವು, 'ಮಹಮ್ಮದ್ ಖಾನ್‌ರ ಮಗಳು ನಾದಿರಾಳನ್ನು.....' ಕೊಡಲಿಯ ಒಂದೊಂದೇ ಪೆಟ್ಟು ತನ್ನ ಮೇಲೆ ಬೀಳುತ್ತಿರುವಂತೆ ಭಾಸವಾಗುತ್ತಿತ್ತು. ಭಾವನೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಸರ್ವಸಾಹಸ ಮಾಡುತ್ತಿದ್ದಳು, ಆಕೆ ತುಟಿಕಚ್ಚಿ ಅಳುವನ್ನು ತಡೆದಳು. ಕಾಲಚಕ್ರವನ್ನು ಹಿಡಿದು ನಿಲ್ಲಿಸುವಂತಿದ್ದರೇ?"[3] ಆದರೆ ಧರ್ಮಶಾಸ್ತ್ರವನ್ನು ಮೀರುವಂತೆಯೇ ಇಲ್ಲವಲ್ಲ? ನೋವಿಗೂ ಹೆಣ್ಣಿಗೂ ಅವಿನಾಭಾವ ಸಂಬಂಧ. ಪ್ರಪಂಚಕ್ಕೆ ಕಾಲಿಡದೆಯೂ ಹೆಣ್ಣು ಎಂಬ ಕಾರಣಕ್ಕೆ ಗರ್ಭ ಮೂಲದಿಂದಲೇ ಆತಂಕದಿಂದ ಬದುಕುವ ಸ್ಥಿತಿ ಹೆಣ್ಣಿನದು.

ಆದರೆ, ಅಲಿಯೊಡನೆ ಒಂದು ರಾತ್ರಿಯನ್ನು ಕಳೆಯುವುದು ಅಸಹ್ಯವೆನಿಸುತ್ತದೆ. ಇದಕ್ಕೆ ಕಾರಣ ಜಿಗುಪ್ಸೆ ಹುಟ್ಟಿಸುವ ಅಲಿಯ ಕುರೂಪವೊಂದೇ ಅಲ್ಲ, ಅವಳಲ್ಲಿ ಜಾಗೃತವಾಗುವ ನೈತಿಕ ಪ್ರಜ್ಞೆಯೂ ಹೌದು.

'ತನ್ನ ನ್ಯಾಯವಾದ ಗಂಡನನ್ನು, ತನ್ನ ಮಗುವನ್ನು ಸೇರಬೇಕಾದರೆ ಈತನಿಗೆ ಒಂದು ರಾತ್ರಿ ತನ್ನ ಮೈಯನ್ನು ಒಪ್ಪಿಸಬೇಕು?' ಕೊನೆಗೆ ಯಾವ ದ್ವಂದ್ವವೂ ಇಲ್ಲದೆ ನಾದಿರಾ ತನಗೆ ಏಕಮೇವ ಪರಿಹಾರವಾಗಿದ್ದ ಸಾವನ್ನು ಅಪ್ಪಿಕೊಳ್ಳುತ್ತಾಳೆ. ಮಸೀದಿಯ ಕೊಳದಲ್ಲಿಯೇ ಅವಳು ಬಿದ್ದು ಸಾಯುವ ಕ್ರಿಯೆಯು, ತನ್ನನ್ನು ಇಷ್ಟು ಹಿಂಸೆಗೆ ಗುರಿ ಮಾಡಿದ ಧಾರ್ಮಿಕತೆಗೆ ಪ್ರತಿಭಟನೆ ಮತ್ತು ಧಿಕ್ಕಾರದ ಸಾಂಕೇತಿಕವಾಗಿ ಬಂದಿದೆ.

ಧಾರ್ಮಿಕ ಕಟ್ಟಳೆಯೊಂದು ನಾದಿರಾ-ರಶೀದರ ಮರುಮದುವೆಯ ಮಾರ್ಗದಲ್ಲಿ ಕಷ್ಟಗಳನ್ನು ನಿರ್ಮಿಸಿ, ಅವರ ದುರಂತಕ್ಕೆ ಕಾರಣವಾಗುತ್ತದೆ. ಇಲ್ಲಿ ನಾದಿರಾಳ ಸಾವು ರಶೀದನ ಬದುಕಿನ ದುರಂತವೂ ಹೌದು. ಆದರೆ, ಈ ದುರಂತದ ಬೀಜ ಬಿತ್ತುವವನು ನಾದಿರಾಳ ಮುಂಗೋಪಿ ಹಾಗೂ ಸರ್ವಾಧಿಕಾರಿ ಪ್ರವೃತ್ತಿಯ ತಂದೆ ಮಹಮದ್‌ಖಾನ್ ಎನ್ನುವುದು ಮರೆಯಲಾಗದು. ನಾದಿರಾಳ ತಾಯಿಗೆ ಅವಳ ದುಃಖ ಅರ್ಥವಾಗುತ್ತದೆ. ಆದರೆ ಮಹಮದ್‌ಖಾನ್ ಎದುರು ಅವಳು ದನಿ ಎತ್ತಲಾರಳು. ಕೊನೆಗೆ ಅನಾರೋಗ್ಯದಿಂದ ಬಳಲಿ ಹಾಸಿಗೆ ಹಿಡಿದ ನಂತರವೇ ಖಾನನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ನಾದಿರಾಳ ದುರಂತದ ಹಿಂದೆ ಧರ್ಮದ ಕಟ್ಟಳೆಯಂತೆ, ಅವಳ ತಂದೆಯ ಪುರುಷ ಕೇಂದ್ರಿತ ಕ್ರೌರ್ಯ, ಆರ್ಥಿಕ ಒತ್ತಡಗಳೂ ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಗಮನಿಸಬೇಕಾಗುತ್ತದೆ. ಧರ್ಮಗ್ರಂಥಗಳಲ್ಲಿರುವುದನ್ನು ಅನುಷ್ಠಾನಕ್ಕೆ ತರುವಾಗ ಹೆಣ್ಣಾದವಳು ಯಾವ ರೀತಿಯ ಮಾನಸಿಕ ಚಿತ್ರಹಿಂಸೆಗೆ ಗುರಿಯಾಗುತ್ತಾಳೆಂಬುದನ್ನು ಈ ಒಂದು ಕಾದಂಬರಿಯು ತಿಳಿಸಿಕೊಡುತ್ತದೆ.

ನಾದಿರಾ ನಿಯಮಗಳನ್ನೆಂದೂ ಪ್ರಶ್ನಿಸಲಾರದ, ನಿಯಮಗಳನ್ನೆಂದೂ ಮೀರಲಾರದ, ನಿಯಮಗಳ ಸುಳಿಯಲ್ಲಿ ಸುತ್ತಿ, ಸುತ್ತಿ ಅಲ್ಲೇ ಮುಳುಗಿ ಹೋಗುತ್ತಿರುವ ಅಸಂಖ್ಯಾತ ಹೆಣ್ಣುಗಳ ಪ್ರತೀಕವಾಗಿದ್ದಾಳೆ. ಇಲ್ಲಿ ಸಾರಾ ಅವರು ಇಸ್ಲಾಂ ಧರ್ಮದಲ್ಲಿ ಬೀಡುಬಿಟ್ಟಿರುವ ಅಂಧಾಚರಣೆ, ಕಂದಾಚಾರ, ಮೌಢ್ಯ, ಶೋಷಣೆಯ ವಿವಿಧ ಮುಖಗಳನ್ನು ಬರವಣಿಗೆಯ ರೂಪಕ್ಕಿಳಿಸಿ, ಮುಸುಕು ಮರೆಯ ಶೋಷಣೆಗೆ ತೆರೆ ಎಳೆದಿದ್ದಾರೆ. ಧರ್ಮದ ಹೆಸರಿನಲ್ಲಿ ಅನೌಪಚಾರಿಕವಾಗಿ ನಡೆಯುತ್ತಿರುವ ಅನ್ಯಾಯ, ಅಕ್ರಮ, ಅನಾಚಾರಗಳನ್ನು ನಿಸ್ಸಂಕೋಚವಾಗಿ ಬಯಲಿಗೆಳೆದು ಪ್ರಶ್ನಿಸುವ ಪ್ರಯತ್ನ ಮಾಡಿದ್ದಾರೆ. ಹೆಣ್ಣನ್ನು ಮಾನವೀಯ ದೃಷ್ಟಿಯಿಂದ ನೋಡುವ ತುರ್ತಿನ ಅಗತ್ಯವನ್ನು ಒತ್ತಿ ಹೇಳುತ್ತಾ, ಧರ್ಮದ ಆಶ್ರಯ

ಸಿರಿಗನ್ನಡ ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪಡೆದುಕೊಂಡು ಸ್ತ್ರೀಯರನ್ನು ಶೋಷಣೆಗೆ ಗುರಿ ಮಾಡುವವರ ವಿರುದ್ಧ ಸಮರ ಸಾರಿದ್ದಾರೆ. ಕುರಾನನ್ನು ಟೀಕಿಸದೆ ಅದನ್ನು ತಪ್ಪಾಗಿ ಆಚರಿಸುತ್ತಿರುವ ಮೂರ್ಖರನ್ನು, ಸ್ವಾರ್ಥಿಗಳನ್ನು ನಿರ್ಭೀತಿಯಿಂದ ವಿಡಂಬಿಸಿದ್ದಾರೆ. ಯಾವುದೇ ಧರ್ಮದ ಮೂಲ ಸಿದ್ಧಾಂತಗಳು ಜನಹಿತಕಾರಿಯೇ ಆಗಿರುತ್ತವೆ. ಆದರೆ ಅನುಯಾಯಿಗಳಾದವರು ಮಾತ್ರ ತಮ್ಮ ಸ್ವಾರ್ಥಕ್ಕಾಗಿ ಅವುಗಳನ್ನು ಬದಲಾವಣೆ ಮಾಡಿಕೊಂಡು ಧರ್ಮದ ಹೆಸರಿನಲ್ಲಿ ಶೋಷಿಸುತ್ತಾರೆಂಬ ಧ್ವನಿಯನ್ನು ಕಾದಂಬರಿಯಲ್ಲಿ ಮಣಿಪುರದ ಖಾಜಿ ಸಾಹೇಬರ ಮಾತುಗಳಲ್ಲಿ ಸ್ಪಷ್ಟಪಡಿಸುತ್ತಾರೆ.

130315

"ಕುರಾನನ್ನು ಯಾರೂ ಸರಿಯಾಗಿ ಅರ್ಥಮಾಡಿಕೊಂಡಿಲ್ಲ, ಮೂರು ಬಾರಿ ತಲಾಖ್ ಹೇಳುವುದೆಂದರೆ ಅದು ಒಂದೇ ಬಾರಿ ಹೇಳುವುದಲ್ಲ. ಮೂರು ತಿಂಗಳಲ್ಲಿ ಪ್ರತ್ಯೇಕವಾಗಿ ತಿಂಗಳಿಗೊಂದರಂತೆ ಹೇಳಬೇಕು. ಮೂರು ಬಾರಿ ತಲಾಕ್ ಹೇಳುವುದೆಂದರೆ ಕುರಾನ್ ನಮಗೆ ಒದಗಿಸಿದ ಮೂರು ಅವಕಾಶಗಳು, ಮೂರನೇ ಅವಕಾಶವನ್ನು ಉಪಯೋಗಿಸಿಕೊಳ್ಳುವಾಗ ಚೆನ್ನಾಗಿ ಯೋಚಿಸಿ, ಇನ್ನೆಂದೂ ಈ ಹೆಂಡತಿ ತನಗೆ ಬೇಡ ಎಂಬ ದೃಢನಿರ್ಧಾರದೊಡನೆ ಮುಂದುವರಿಯಬೇಕು. ಆ ಮೂರು ತಿಂಗಳ ಅವಧಿ ಮುಗಿಯುವವರೆಗೆ ಗಂಡ–ಹೆಂಡತಿ ಒಂದೇ ಮನೆಯಲ್ಲಿ ವಾಸಿಸಬೇಕು. ಎರಡು ತಲಾಖ್ ಆದ ಮೇಲೆಯೂ ಗಂಡ–ಹೆಂಡತಿ ಒಂದಾದರೆ ಆ ವಿಚ್ಛೇದನ ಅಸಿಂಧುವಾಗುತ್ತದೆ. ಮೊದಲನೇ ಗಂಡನನ್ನು ವಿವಾಹವಾಗಲು ಒಂದು ರಾತ್ರಿಗೆ ಮತ್ತೋರ್ವನನ್ನು ವಿವಾಹವಾಗುವ ನಿಯಮವನ್ನು ಕುರಾನ್ ವಿಧಿಸಿಲ್ಲ. ಇದೆಲ್ಲಾ ಮೂರ್ಖ ಗಂಡಸರು ತಮ್ಮ ಸ್ವಾರ್ಥಕ್ಕಾಗಿ ಕೈಗೊಂಡ ಉಪಾಯಗಳು"[೪] ಎಂದು ಸಾರಾಸಗಟಾಗಿ ಟೀಕೆಗೆ ಗುರಿಪಡಿಸುತ್ತಾರೆ. ಸ್ತ್ರೀಯ ಅನುಮತಿ ಇಲ್ಲದೆ ತಲಾಖ್ ನೀಡುವ ಕ್ರಮದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಾರೆ. ಧರ್ಮಶಾಸ್ತ್ರವನ್ನು ತಮ್ಮ ಸ್ವಾರ್ಥಕ್ಕೆ ತಿರುಚಿಕೊಂಡು, ಹೆಂಗಳೆಯರ ಬಾಳಿಗೆ ಕಿಚ್ಚುಹಚ್ಚುವ ಅಮಾನವೀಯ ಕೃತ್ಯವನ್ನು ಟೀಕೆಗೊಳಪಡಿಸುತ್ತಾರೆ. ಧರ್ಮಶಾಸ್ತ್ರ ನೀಡಿದ ಅವಕಾಶಗಳನ್ನು ಸರಿಯಾಗಿ ಪರಾಮರ್ಶಿಸದೆ, ಅದರ ಸದುದ್ದೇಶವನ್ನು ಅರ್ಥಮಾಡಿಕೊಳ್ಳದಿರುವ ಮೂರ್ಖರನ್ನು ಲೇಖಕರು ಲೇವಡಿ ಮಾಡುತ್ತಾರೆ.

ನಾದಿರಾಳ ಗಂಡ ರಶೀದ್‌ನು ಕೂಡ ಇಲ್ಲಿ ವ್ಯವಸ್ಥೆಯ ವಿರುದ್ಧ ತಿರುಗಿ ಬೀಳುವ ಪ್ರಯತ್ನ ಮಾಡುವುದಿಲ್ಲ. ಮರುವಿವಾಹಕ್ಕಿರುವ ಅಡ್ಡಿಯನ್ನು ಈತ ವಿರೋಧಿಸುತ್ತಾನೆ. "ಅರ್ಥವಿಲ್ಲದ ಇಂಥ ನಿಯಮಗಳಿಗೆ ಬೆಂಕಿ ಹಚ್ಚಬೇಕು"[೫] ಎಂದು ತನ್ನ ಆಕ್ರೋಶ ವ್ಯಕ್ತಪಡಿಸುತ್ತಾನೆ. ಆದರೆ, ಅದನ್ನು ದಿಕ್ಕರಿಸಿ ಮುನ್ನಡೆಯುವ ಧೈರ್ಯ ತಾಳುವುದಿಲ್ಲ. ಜೊತೆಗೆ ಇವನ ತಾಯಿ 'ನಾವು ಅನುಸರಿಸಿಕೊಂಡು ನಡೆಯಬೇಕಾದವರೇ ಹೊರತು, ಪ್ರಶ್ನಿಸಬೇಕಾದವರಲ್ಲ' ಎಂದು ಹೇಳಿ ಈ ಆಕ್ರೋಶಕ್ಕೆ ತಣ್ಣೀರು ಸುರಿಯುತ್ತಾಳೆ. ಹಾಗೆಯೇ

ನಾದಿರಾಳ ತಂಗಿ ಜಮೀನಾಳು ಇಡೀ ಕಾದಂಬರಿಯಲ್ಲಿ ಮೌನ ಮುರಿದು ಮಾತಾಡುವುದು ಒಂದೇ ಬಾರಿಯಾದರೂ ವಾಸ್ತವತೆಗೆ ಹತ್ತಿರವಾಗುತ್ತಾಳೆ. 'ಅಕ್ಕ ನಿನಗೆ ಧೈರ್ಯವಿದ್ದರೆ ಈಗಿಂದೀಗಲೇ ಕಾವಳ್ಳಿಗೆ ಹೊರಟುಹೋಗು' ಎಂದು ಸೂಚಿಸುತ್ತಾಳೆ. ಆದರೆ ನಾದಿರಾ ಧರ್ಮದ ಸಂಕೋಲೆಯಲ್ಲಿ ಬಂಧಿತಳಾಗಿ ಹೊರಬರಲಾಗದವಳಾಗಿರುತ್ತಾಳೆ.

ಹೀಗೆ ಪುರುಷ ಸಮಾಜದಲ್ಲಿ ಹೆಣ್ಣಿನ ಶೋಷಣೆಗಳಿಗೆ ಕೊನೆಯೇ ಇಲ್ಲದಂತಾಗಿದೆ. 'ಮುಸ್ಲಿಂ ಹೆಣ್ಣಿಗೆ ಬಹಳಷ್ಟು ಅನ್ಯಾಯ ಮಾಡುವ ಹಾಗೂ ಶೋಷಣೆಗೊಳಗಾಗಿಸುವ ವ್ಯಕ್ತಿ ನಿಯಮವಿರುವುದು ಭಾರತದಲ್ಲಿ ಮಾತ್ರ' ಎಂದು ಲೇಖಕರು ಅಭಿಪ್ರಾಯಪಡುತ್ತಾರೆ. ಮುಸ್ಲಿಂ ಸಮಾಜದ ಈ ಸುಲಭದ ವಿವಾಹ ವಿಚ್ಛೇದನವಂತೂ ಮಹಿಳೆಯರಿಗೆ ಅನ್ಯಾಯ ಮಾಡುವ ಏಕಪಕ್ಷೀಯವಾದ ನಿಯಮವೆಂಬುದು ಈ ದೃಷ್ಟಿಯಿಂದ ಗಮನಿಸಿದಾಗ ಮನದಟ್ಟಾಗುತ್ತದೆ.

ಹಾಗೆಯೇ ಗಂಡ ಮತ್ತು ತಂದೆಯ ಪ್ರತಿಷ್ಠೆಯ ಕಾಳಗದಲ್ಲಿ ಏನೂ ಇಲ್ಲದವಳಾಗಿರುವ ಹೆಣ್ಣಿನ ಪಾತ್ರ 'ಚಂದ್ರಗಿರಿಯ ತೀರದಲ್ಲಿದ್ದರೆ', ತನ್ನ ಮನಸ್ಸು ಮತ್ತು ದೇಹಗಳ ಒಡೆತನಕ್ಕಾಗಿ ಹೋರಾಟ ನಡೆಸುವ ಸ್ತ್ರೀವಾದಿ ಹೆಣ್ಣಿನ ಪಾತ್ರ 'ಸಹನಾ' ಕಾದಂಬರಿಯಲ್ಲಿದೆ. ಹಕ್ಕು ಸ್ಥಾಪನೆಯ ದಿಸೆಯಲ್ಲಿ ನಡೆಸುವ ಸೌಮ್ಯವಾದ ಹೋರಾಟದ ಹೆಣ್ಣುಗಳೇ 'ಸಹನಾ' ಮತ್ತು 'ವಜ್ರಗಳು' ಕಾದಂಬರಿಯಲ್ಲಿದ್ದಾರೆ.

'ಸಹನಾ' ಕಾದಂಬರಿಯು ನಸೀಮು ಬದುಕಿನಲ್ಲಿ ನೋವುಂಡ ಹೆಣ್ಣು. ತಲೆತಲಾಂತರದಿಂದ ಅಪಮಾನ ಸಹಿಸಿಕೊಂಡು ಬಂದಿರುವ ಹೆಣ್ಣಿನ ಪ್ರತೀಕವಾಗಿದ್ದಾಳೆ. ಆದರೆ ಕೊನೆಯಲ್ಲಿ ಅಪಮಾನ, ಹಿಂಸೆಯ ವಿರುದ್ಧ ಬಂಡೇಳುವ ಸೌಮ್ಯ ಸ್ವರೂಪಿಣಿಯಾದ ನಸೀಮಾ, ಚಿಕ್ಕವಯಸ್ಸಿನಲ್ಲಿಯೇ ವಿವಾಹ, ವೈವಾಹಿಕ ಚೌಕಟ್ಟಿನೊಳಗೇ ಅವಳು ಕಂಡ ದಾರುಣ ಹೆಣ್ಣಿನ ಸ್ಥಿತಿ, ಬಹುಪತ್ನಿತ್ವಗಳಂತಹ ಅಸ್ತ್ರಗಳಡಿಯಲ್ಲಿ ಸಹಿಸಿದ ಅಪಮಾನಕ್ಕೆ ಉತ್ತರ ನೀಡುತ್ತಾಳೆ.

ಹದಿನಾಲ್ಕು ವರ್ಷಕ್ಕೆ ಹೆಣ್ಣು ಮಗುವೊಂದರ ತಾಯಿಯಾಗುವ ಈಕೆ ಹೆಣ್ಣು ಮಗುವನ್ನು ಹೆತ್ತ ತಪ್ಪಿಗಾಗಿ ಗಂಡ ಮತ್ತು ಅತ್ತೆಯರ ತಿರಸ್ಕಾರಕ್ಕೆ ಗುರಿಯಾಗುತ್ತಾಳೆ. 'ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದಂತೆ' ಎಂದು ಭಾವಿಸುವ ಇವರು ನಸೀಮಾಳನ್ನು ತಮ್ಮ ಕೈಲಾದ ಮಟ್ಟಿಗೆ ಹಿಂಸೆಗೆ ಗುರಿಪಡಿಸುತ್ತಾರೆ. ಪ್ರತಿಕೂಲ ಪರಿಸ್ಥಿತಿಯ ಗಂಡನ ಮನೆಯಲ್ಲಿ ಅತ್ತೆಯ ಶೋಷಣೆ, ಗಂಡನ ದೈಹಿಕ ಹಿಂಸೆಯಿಂದ ಅರೆಬೆಂದ ಜೀವವಾಗುತ್ತಾಳೆ. ಕಿತ್ತು ತಿನ್ನುವ ಬಡತನವಿರುವ ಆ ಮನೆಯಲ್ಲಿ ದುಡಿಯುವ ಕೈ ಒಂದಾದರೆ, ಕೂತು ಉಣ್ಣುವ ಬಾಯಿ ಹಲವು. ಈ ಪರಿಸ್ಥಿತಿಯಲ್ಲಿ ನಸೀಮಾ ಕಷ್ಟಪಟ್ಟು ದುಡಿದ ಬೀಡಿಯ

ಹಣ ಅತ್ತೆಯ ಪೆಟ್ಟಿಗೆ ಸೇರುತ್ತಿರುತ್ತದೆ. ಈ ನಡುವೆ ಅತ್ತೆಯ ಬೆದರಿಕೆಯ ಮಾತುಗಳಿಗೇನೂ ಕಡಿಮೆಯಿರಲಿಲ್ಲ.

"ಈ ಮನೆಯಲ್ಲಿ ನಾನು ಹೇಳಿದಂತೆ ಕೇಳಿಕೊಂಡಿರಬೇಕು. ತಾಯಿ ಮಗನ ಸಂಬಂಧ ರಕ್ತಸಂಬಂಧ. ಅದನ್ನು ಬೇರೆ ಮಾಡುವುದು ಅಷ್ಟು ಸುಲಭವಲ್ಲ. ಆದರೆ ಗಂಡ ಹೆಂಡತಿಯ ಸಂಬಂಧ ಮೂರು ತಲಾಖ್‌ನ ಸಂಬಂಧ. ಅದನ್ನು ಬೇರ್ಪಡಿಸಲು ಐದು ನಿಮಿಷವೂ ಬೇಕಾಗಿಲ್ಲ ಎಂಬುದನ್ನು ಚೆನ್ನಾಗಿ ನೆನಪಿಟ್ಟುಕೋ"[೬] ಎಂಬ ಅತ್ತೆಯ ಅಧಿಕಾರ ವಾಣಿಯಿಂದ ನಸೀಮಾ ತತ್ತರಿಸಿ ಹೋಗುತ್ತಾಳೆ. ವೈವಾಹಿಕ ಜೀವನದಲ್ಲಿ ಭದ್ರತಯೇ ಇಲ್ಲದೆ, ಅತಂತ್ರ ಸ್ಥಿತಿಯಲ್ಲಿ ಜೀವನ ನಡೆಸುತ್ತಿರುವ ಅಸಂಖ್ಯಾತ ಹೆಣ್ಣುಗಳ ಬಾಳನ್ನು ನಾಶವಾಗಿಸುವ ವ್ಯವಸ್ಥೆಯ ಕ್ರೂರಧ್ವನಿ ಇಲ್ಲಿ ಮೊಳಗಿರುವುದನ್ನು ಗಮನಿಸಬಹುದು.

ಅಸಹಾಯಕ ಹೆಣ್ಣೊಬ್ಬಳು ಸಂಸಾರದ ಹೊಣೆ ಹೊತ್ತು ನಲುಗುತ್ತಿದ್ದರೆ, ಅದೇ ವಯಸ್ಸಿನ ನೂರುದ್ದೀನ್ ಗೋಲಿ ಆಟವಾಡುತ್ತಾ ಕಾಲಕಳೆಯುತ್ತಿರುತ್ತಾನೆ. 'ತಾನೂ ಗಂಡಾಗಿ ಹುಟ್ಟಿದ್ದರೆ ಚೆನ್ನಾಗಿರುತ್ತಿತ್ತು, ಈ ಸಂಸಾರದ ಬಂಧನವೇ ಇರುತ್ತಿರಲಿಲ್ಲ' ಎಂದು ಎಷ್ಟೋ ಸಲ ನಿಟ್ಟುಸಿರಿಡುತ್ತಾಳೆ. ಗಂಡು ಹೆಣ್ಣಿನ ನಡುವಿನ ತಾರತಮ್ಯ ಭಾವದಿಂದಾಗಿ ಜೀವದ ಜೀವವಾಗಿದ್ದ ಮಗಳನ್ನು ಕಳೆದುಕೊಳ್ಳುತ್ತಾಳೆ. ಹೆಣ್ಣು ಮಗುವೆಂದು ನಿರ್ಲಕ್ಷಿಸಿದ್ದರ ಪರಿಣಾಮವಾಗಿ ಈ ಅನಾಹುತ ನಡೆಯುತ್ತದೆ. ಈ ಕಾರಣಕ್ಕಾಗಿಯೂ ತನ್ನ ಗಂಡ, ಅತ್ತೆಯ ಮೇಲೆ ಆಕ್ರೋಶಗೊಳ್ಳದೇ ನೋವನ್ನು ನುಂಗಿಕೊಂಡು ಸಹನೆಯನ್ನೇ ಮೆರೆಯುತ್ತಾಳೆ. ಮಗುವನ್ನು ಕಳೆದುಕೊಂಡು ಬರಗಾಲಕ್ಕೆ ಬಾಯಿ ಬಿಡುವ ಭೂಮಿಯಂತೆ ತತ್ತರಿಸಿ ಹೋಗುವ ನಸೀಮಾಳ ಚಿತ್ರಣವನ್ನು ಲೇಖಕರು ಕರುಣಾ ಜನಕವಾಗಿ ಚಿತ್ರಿಸುತ್ತಾರೆ, ಈ ನಡುವೆ ಮತ್ತೊಂದು ಹೆಣ್ಣು ಮಗುವಿಗೆ ಜೀವ ನೀಡುವ ನಸೀಮಳಿಗೆ ಗಂಡ ಕೊಡುವ ಉಡುಗೊರೆ "ಈ ಬಾರಿಯೂ ಹೆಣ್ಣನ್ನೇ ಹಡೆದೆಯಾ? ನಿನ್ನ ಹೊಟ್ಟೆಯಲ್ಲಿ ಗಂಡು ಮಗು ಹುಟ್ಟುವುದು ಕನಸಿನ ಮಾತು"[೭] ಎಂಬ ತಿರಸ್ಕಾರದ ಚುಚ್ಚುಮಾತು.

ಹೆಣ್ಣಾಗಿ ಹುಟ್ಟಿ ಪಡಬೇಕಾದ ಬವಣೆಯನ್ನು, ಹೆಣ್ಣು ಎಷ್ಟು ತಾತ್ಸಾರ,ತಿರಸ್ಕಾರಕ್ಕೆ ಒಳಗಾಗಿ ಹೀನಾಯ ವಾತಾವರಣದಲ್ಲಿ ಬೆಳೆಯಬೇಕಾದ ದುರಂತವನ್ನು, ಮನಮಿಡಿಯುವಂತೆ ಲೇಖಕರು ನಸೀಮಾಳಿಂದ ಹೀಗೆ ಹೇಳಿಸಿದ್ದಾರೆ. 'ಯಾಕಮ್ಮಾ ನೀನೂ ಹೆಣ್ಣಾಗಿ ಹುಟ್ಟಿದೆ, ಗಂಡಾಗಿದ್ದರೆ ಸರಿಯಾದ ಆಹಾರ, ಔಷಧಿ ದೊರೆತು ನೀನೂ ಬದುಕುತ್ತಿದ್ದೆ. ಹೆಣ್ಣಾಗಿದ್ದರಿಂದ ನಿನಗೆ ಒಂದು ತೊಟ್ಟು ಹಾಲೂ ಸಿಗಲಾರದು' ಎಂಬ ಈ ಮಾತುಗಳು ಹೆಣ್ಣಿನ ದುಃಸ್ಥಿತಿಯನ್ನು ಪರಿಚಯಿಸುತ್ತವೆ.

ಹೀಗೆ ಕಿತ್ತು ತಿನ್ನುವ ಬಡತನದಲ್ಲಿ ಮೇಲಿಂದ ಮೇಲೆ ಗರ್ಭಧರಿಸುತ್ತಾ, ಆರೋಗ್ಯ ಕೆಡಿಸಿಕೊಳ್ಳುವ ನಸೀಮ ಸಾವು-ಬದುಕಿನ ನಡುವೆ ಸೆಣಸಾಡುತ್ತಿರುತ್ತಾಳೆ. ಈ ಒಂದು ಸಂಧರ್ಭದಲ್ಲಿ ಈಕೆಯ ಅತ್ತೆ ತನ್ನ ಮಗನಿಗೆ ಬೇರೊಂದು ಮದುವೆಯ ಪ್ರಸ್ತಾಪ ಮಾಡುತ್ತಾಳೆ. ತನ್ನ ಮನದಲ್ಲಿದ್ದ ಮಾತನ್ನು ತಾಯಿಗೆ ಹೇಳಲಾರದೆ ಚಡಪಡಿಸುತ್ತಿದ್ದವನಿಗೆ ಹುಡುಕುತ್ತಿದ್ದ ಬಳ್ಳಿ ಕಾಲಿಗೆ ತೊಡರಿದಂತಾಗುತ್ತದೆ. ಇದಕ್ಕೆ ನಸೀಮ ಒಪ್ಪುವಳೇ ಎಂಬ ಈತನ ಪ್ರಶ್ನೆಗೆ ತಾಯಿ ಹೇಳುವ ಮಾತು, "ಕೋಳಿಯೊಡನೆ ಕೇಳಿ ಯಾರಾದರೂ ಮಸಾಲೆ ರುಬ್ಬುತ್ತಾರೆಯೇ? ಅವಳೊಡನೆ ಯಾಕೆ ಕೇಳಬೇಕು? ನಾಲ್ಕು ಹೆಂಡತಿಯನ್ನು ಇಟ್ಟುಕೊಳ್ಳಬಹುದೆಂದು ಇಸ್ಲಾಂ ಧರ್ಮ ಬೋಧಿಸುತ್ತದೆ. ನಾವೇನಾದರೂ ತಪ್ಪು ಕಾರ್ಯ ಮಾಡುತ್ತಿದ್ದೇವೆಯೇ? ಇಷ್ಟಕ್ಕೂ ಅವಳು ಸರಿಯಾಗಿದ್ದರೆ ನೀನು ಇನ್ನೊಂದು ಮದುವೆಗೆ ಯೋಚಿಸುತ್ತಿದ್ದೆಯಾ? ಅಥವಾ ಅವಳಿಗೆ ತಲಾಖ್ ಕೊಡುತ್ತೀಯಾ? ಅವಳಿಗೆ ಏನು ಕಡಿಮೆ ಮಾಡಿದ್ದೇವೇ? ಊಟ ಬಟ್ಟೆಗೆ ಏನಾದರೂ ಕೊರತೆ ಮಾಡಿದ್ದೇವೆಯೇ?"[೮] ಎಂಬ ಪ್ರೋತ್ಸಾಹಕಾರಿ ಮಾತುಗಳು ಹೆಂಡತಿಯಾದವಳಿಗೆ ಊಟ ಬಟ್ಟೆ ಒದಗಿಸಿದರೆ ಅಷ್ಟಕ್ಕೇ ಅವರ ಕರ್ತವ್ಯ ಮುಗಿಯುತ್ತದೆ, ಅವರ ಮನಸ್ಸಿನ ಮಾತುಗಳನ್ನು, ಸಂಕಟ, ನೋವು, ವೇದನೆಗಳನ್ನು ಕಟ್ಟಿಕೊಂಡು ಇವರಿಗೇನೂ ಆಗಬೇಕಿಲ್ಲ.

ಈ ವಿಷಯ ತಿಳಿದ ನಸೀಮಾಳ ಹೃದಯದ ಮೂಲೆ ಮೂಲೆಯಲ್ಲೂ ಬೆಂಕಿಯ ಜ್ವಾಲೆ ಎದ್ದು, ಆ ಜ್ವಾಲೆಯಲ್ಲಿ ತಾನು ಸುಟ್ಟುಹೋಗುತ್ತಿರುವಂತೆ ಆಕೆಗೆ ಭಾಸವಾಗುತ್ತದೆ. 'ಯಾ ಅಲ್ಲಾ, ಇನ್ನೂ ನನ್ನನ್ನು ಯಾಕೆ ಬದುಕಿಸುತ್ತೀ? ನನ್ನನ್ನು ಈಗಲೇ ನಿನ್ನ ಬಳಿಗೆ ಕರೆದುಕೋ' ಎಂದು ದೇವರಲ್ಲಿ ಮೊದಲ ಬಾರಿಗೆ ಮೊರೆಯಿಡುತ್ತಾಳೆ. ಗಂಡನನ್ನು ದೈನ್ಯಳಾಗಿ ಬೇಡಿಕೊಳ್ಳುತ್ತಾಳೆ. "ನನ್ನನ್ನು ಇಷ್ಟು ಬೇಗ ಮರೆತಿರಾ? ನಾನು ಯಾವ ತಪ್ಪು ಮಾಡಿದ್ದೇನೆ. ದಯವಿಟ್ಟು ನಾನು ಸಾಯುವವರೆಗೆ ತಡೆಯಿರಿ. ನನ್ನನ್ನು ಸುಖವಾಗಿ ಸಾಯಲಾದರೂ ಬಿಡಿ.... ನಾನು ಹೊರಟುಹೋಗುವವರೆಗೆ ತಡೆಯಿರಿ"[೯] ಎಂದು ಆತನ ಕಾಲಿಗೆ ತಲೆ ಚಚ್ಚಿಕೊಂಡು ಕಂಬನಿ ಮಿಡಿಯುತ್ತಾಳೆ. ಆದರೆ, ಆತನಿಂದ ಒಂದಿಷ್ಟು ಕನಿಕರವೂ ದೊರೆಯುವುದಿಲ್ಲ.

ತನ್ನ ತಾಯಿ ಆಗಾಗ ನುಡಿಯುತ್ತಿದ್ದ 'ಭೂಮಿಯಂತೆ ಸಹನೆ ಇರಬೇಕು' ಎಂಬಂತೆಯೇ ಇದ್ದ ಆಕೆಗೆ, ಈಗ ಮುಚ್ಚಿದ ಬಾಗಿಲಿನ ಹಿಂದಿನಿಂದ ತೇಲಿ ಬರುತ್ತಿದ್ದ ಪಿಸುಮಾತು, ನಗು ಕಿವಿಗೆ ಬಿದ್ದಾಗ, ಆಕೆಗೆ ಅಗ್ನಿಕುಂಡದಲ್ಲಿದ್ದಂತಹ ಭಯಂಕರ ಯಾತನೆಯನ್ನು ನೀಡುತ್ತಿತ್ತು. ಆದರೆ ಅವಳಿಂದ ಏನೂ ಮಾಡಲಾಗಲಿಲ್ಲ.

ತಾಯಿಯ ಆರೈಕೆಯಿಂದ ನವಚೇತನ ಪಡೆದು ಸಾವಿನ ಮನೆಯಿಂದ ಹಿಂತಿರುಗಿದ ನಸೀಮಾಳಿಗೆ ಇಪ್ಪತ್ತು ವರ್ಷ ತುಂಬಿರುತ್ತದೆ. ಇದು ನಸೀಮಾಳೊಬ್ಬಳ ಸಮಸ್ಯೆ ಅಲ್ಲ.

ಹಲವು ಹೆಣ್ಣು ಮಕ್ಕಳ ದುರಂತ ಬದುಕಿನ ವಾಸ್ತವತೆ. ಇಲ್ಲಿಂದ ಮುಂದೆ ಆಕೆಯಲ್ಲಿ ಪ್ರತಿಭಟನಾತ್ಮಕ ಮನೋಭಾವ ಚಿಗುರೊಡೆಯುತ್ತದೆ. ಬದುಕಿನಲ್ಲಿ ಹಠ, ಛಲಗಳನ್ನು ಮೂಡಿಸಿಕೊಳ್ಳುತ್ತಾಳೆ. ಸ್ವತಂತ್ರವಾಗಿ ಬದುಕುವ ಛಲ ತೊಟ್ಟು ಸಾಧಿಸಹೊರಡುತ್ತಾಳೆ. ಮಗಳು ರೋಸಿಯನ್ನು ವಿದ್ಯಾವಂತಳನ್ನಾಗಿ ಮಾಡಿ, ತನಗಾದ ಎಲ್ಲಾ ಅನ್ಯಾಯ, ಶೋಷಣೆಗಳ ವಿರುದ್ಧ ಪ್ರಬಲ ಅಸ್ತ್ರವನ್ನಾಗಿ ಮಾಡುವ ಹಠ ತೊಡುತ್ತಾಳೆ. "ನೀವು ರೋಗಿಯಾಗಿದ್ದಾಗ ನಾನು ಬೇರೊಬ್ಬನೊಡನೆ ಹೊರಟುಹೋಗಿದ್ದರೆ ಹೇಗಿರುತ್ತಿತ್ತು."[೧೦] ಎಂದು ಪ್ರಶ್ನೆಯನ್ನು ಗಂಡನಿಗೆ ಕೇಳುವ ಮೂಲಕ ಇಡೀ ಪುರುಷ ಸಮಾಜಕ್ಕೆ ಸವಾಲೆಸೆಯುತ್ತಾಳೆ. ಗಂಡಿನ ಆಸರೆ ಇಲ್ಲದೆಯೂ ಹೆಣ್ಣು ತನ್ನ ಎಲ್ಲಾ ಆಸೆ–ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಬಲ್ಲಳೆಂದು ನಸೀಮಾ ತನ್ನ ಬಾಲ್ಯದ ಕನಸು ಆಸೆಗಳನ್ನೆಲ್ಲಾ ಪೂರೈಸಿಕೊಂಡು ಬದುಕಿ ತೋರಿಸುತ್ತಾಳೆ.

'ಗಂಡನಾದವನು ಬೆಳಿಗ್ಗೆ ಹೆಂಡತಿ ಮಾಡಿದ ಅಡುಗೆಯನ್ನು ಉಂಡು ಹೋಗಿ ಮಧ್ಯಾಹ್ನದ ಹೊತ್ತಿಗೆ ತಲಾಖ್ ಕೊಡಬಹುದು. ಆದರೆ ಹೆಂಡತಿಯಾದವಳಿಗೆ ಬೇಡದ ಗಂಡನನ್ನು ಬಿಡುವ ಅಧಿಕಾರವಿಲ್ಲ. ಗಂಡ ತನ್ನ ಕಣ್ಣ ಮುಂದೆಯೇ ಇನ್ನೊಬ್ಬಳನ್ನು ಕಟ್ಟಿಕೊಂಡು ಸುಖಿಸುತ್ತಾ, ತನ್ನ ಹೃದಯವನ್ನು ಹೊಡೆದು ಚೂರು ಚೂರು ಮಾಡುತ್ತಿದ್ದರೂ, ತಾನು ಮಾತ್ರ ಬಾಯಿ ಮುಚ್ಚಿಕೊಂಡು ತೆಪ್ಪಗೆ ಬಿದ್ದಿರಬೇಕೆ?' ಎಂದು ಪ್ರಶ್ನಿಸುವ ನಸೀಮಾ ಅಪ್ಪ ಹಾಕಿದ ಆಲದಮರಕ್ಕೆ ನೇಣು ಬಿಗಿದುಕೊಳ್ಳದೇ, ಶತಶತಮಾನಗಳಿಂದ ಹೆಣ್ಣಿನ ಮೇಲೆ ವಿಧಿಸುತ್ತಿದ್ದ ಗೊಡ್ಡು ತತ್ವಾದರ್ಶಗಳ ವಿರುದ್ಧ ಅಸಹನೆಯನ್ನು ವ್ಯಕ್ತಪಡಿಸುತ್ತಾಳೆ.

ಸಹನೆಯ ಮುಸುಕನ್ನು ಹರಿದೊಗೆಯುವ ಮೂಲಕ ಜೀವನೋತ್ಸಾಹದ ಸಂಕೇತವಾಗುತ್ತಾಳೆ. ಇಲ್ಲಿ ನಸೀಮಾಳಿಗೆ ಭೂಮಿಯಷ್ಟು ಸಹನೆಯೂ ಇದೆ. ಹಾಗೆಯೇ ಅದನ್ನು ಮೀರಿ ತನ್ನ ಅಸ್ತಿತ್ವಕ್ಕಾಗಿ ಹಾತೊರೆಯುವ, ಶೋಷಣೆಯ ವಿರುದ್ಧ ಸಿಡಿದೇಳುವ, ಪ್ರತಿರೋಧವನ್ನು ಸೂಚಿಸುವ ಅಸಹನೆಯ ಜ್ವಾಲಾಮುಖಿಯೂ ಆಗುತ್ತಾಳೆ. ಬದುಕೆಂಬುದು ಆಕೆಗೆ ಕ್ರಾಂತಿಯ ಪಾಠ ಕಲಿಸಿರುತ್ತದೆ.

ಮತ್ತೆ ಮದುವೆಯಾದ ಹೆಂಡತಿಗೆ ತಲಾಖ್ ಕೊಟ್ಟು ಪುನಃ ನಸೀಮಾಳಲ್ಲಿಗೆ ಬರುವ ಆಕೆಯ ಗಂಡನಿಗೆ ತಾನು ಮತ್ತೊಮ್ಮೆ ಆ ಮನೆಗೆ ಬರಲಾರೆನೆಂಬ ದೃಢ ನಿರ್ಧಾರ ತಿಳಿಸುತ್ತಾಳೆ. ಇದಕ್ಕೆ ಪ್ರತ್ಯುತ್ತರವಾಗಿ ಆತ ಹೇಳುವ ಮಾತುಗಳು "ನಾನು ನಿನ್ನ ತಲಾಖ್ ಕೊಡದೆ ನೀನು ಇನ್ನೊಬ್ಬನನ್ನು ವಿವಾಹವಾಗುವುದು ಎಂದಿಗೂ ಸಾಧ್ಯವಿಲ್ಲ. ಆದರೆ ನಾನು ಇನ್ನೊಂದು ನಿಕಾಹ್ ಮಾಡಿಕೊಳ್ಳುತ್ತೇನೆಯೇ ಹೊರತು ಸಾಯುವವರೆಗೂ

ನಿನ್ನ ತಲಾಖ್ ಕೊಡಲಾರೆ"[೧೧] ಎಂದು. ಧರ್ಮದ ನಿಯಮಗಳನ್ನು ದುರುಪಯೋಗ ಪಡಿಸಿಕೊಳ್ಳುವ ಪುರುಷ ಸಮಾಜ ಹೆಣ್ಣನ್ನು ಶೋಷಣೆಗೊಳಪಡಿಸುವ ಒಂದು ಸಾಧನವನ್ನಾಗಿ ಧರ್ಮದ ನಿಯಮಗಳನ್ನು ಬಳಸಿಕೊಳ್ಳುತ್ತಿದೆ. ಆದರೆ ಇದಾವುದಕ್ಕೂ ಅಂಜದ ದಿಟ್ಟೆ ನಸೀಮಾ, "ನೀವು ತಲಾಖ್ ಎಂದು ಮೂರು ಬಾರಿ ಹೇಳದಿದ್ದರೂ ಪರವಾಗಿಲ್ಲ. ನನ್ನನ್ನರ್ಥ ಮಾಡಿಕೊಳ್ಳುವ ನನ್ನನ್ನು, ಕೇವಲ ನನ್ನನ್ನು ಮಾತ್ರ ಪ್ರೀತಿಸುವವನೊಬ್ಬ ಬಂದರೆ ಅಂತಹವನಿಗೆ ನನ್ನನ್ನು ನಾನೇ ಅರ್ಪಿಸಿಕೊಳ್ಳುತ್ತೇನೆ. ಅವನೊಡನೆ ಓಡಿ ಹೋಗುತ್ತೇನೆ. ಆಗ ನೀವೇನು ಮಾಡುತ್ತೀರಿ?"[೧೨] ಎಂದು ಕೇಳಬೇಕೆಂದು ಬಾಯಿಗೆ ಬಂದರೂ, ತಾಯಿಗೆ ಕೇಳಿಸಿದರೆ ನೋವಾದೀತೆಂದು ತಡೆಯುತ್ತಾಳೆ. ಇಷ್ಟರವರೆಗಿನ ರೋಷ ಅವಳಲ್ಲಿ ಉಕ್ಕಬೇಕಾದರೆ ಅದಕ್ಕೆ ಕಾರಣ ಅವಳು ಅನುಭವಿಸಿದ ನೋವುಗಳು.

ಇಷ್ಟೆಲ್ಲದರ ಪರಿಣಾಮವಾಗಿ ಸಮಾಜದ ಈ ವ್ಯವಸ್ಥೆಯ ವಿರುದ್ಧ ಅವಳ ಹೃದಯಲ್ಲಾಗಲೇ ದ್ವೇಷದ, ಪ್ರತೀಕಾರದ ಬೀಜವೊಂದು ಅಂಕುರಿಸತೊಡಗುತ್ತದೆ. ನಂತರ ಆಕೆ ಮಗಳ ಭವಿಷ್ಯ ರೂಪಿಸುವ ಪಣ ತೊಟ್ಟು ಹೈನುಗಾರಿಕೆ ಆರಂಭಿಸಿ, ಆರ್ಥಿಕ ಸ್ವಾತಂತ್ರ್ಯ ಪಡೆಯುವುದರೊಂದಿಗೆ, ತನ್ನ ಸ್ವಾತಂತ್ರ್ಯವನ್ನೂ ಪಡೆದುಕೊಳ್ಳುತ್ತಾಳೆ. ಇಲ್ಲಿಯ ಬಂಡಾಯ ಮೂರು ತಲೆಮಾರುಗಳೊಂದಿಗೆ ತಳುಕು ಹಾಕಿಕೊಂಡಿದೆ. ನಸೀಮಾ ಸ್ವತಂತ್ರಳಾದರೆ, 'ಚಂದ್ರಗಿರಿಯ ತೀರದಲ್ಲಿ'ಯ ನಾಯಕಿ ಅಪ್ಪ ಮತ್ತು ಗಂಡನ ಹಾಗೂ ಸಮಾಜದ ಕ್ರೂರತೆಗೆ ತನ್ನ ಜೀವವನ್ನೇ ಕಳೆದುಕೊಂಡು ಪ್ರತಿಭಟಿಸುತ್ತಾಳೆ. ನಸೀಮಾಳ ಪ್ರತಿಭಟನೆ ಅವಳ ಬದುಕನ್ನಷ್ಟೇ ಹಸನುಗೊಳಿಸದೆ, ಅದು ರೋಸಿಯ ಬದುಕನ್ನೂ ಪ್ರಭಾವಿಸುತ್ತದೆ. ಸ್ವಾತಂತ್ರ್ಯದ ಉಸಿರು ರೋಸಿಗೂ ದೊರೆಯುತ್ತದೆ.

ಒಟ್ಟಾರೆಯಾಗಿ ಲೇಖಕಿ ಸಾರಾ ಅವರು 'ಚಂದ್ರಗಿರಿಯ ತೀರದಲ್ಲಿ' ಸಾಧಿಸಲಾಗದ್ದನ್ನು 'ಸಹನಾ' ಕಾದಂಬರಿಯಲ್ಲಿ ಸಾಧಿಸಿಕೊಂಡಿದ್ದಾರೆ. ಮೂಕ ಕುರಿಯಂತಿರುವ ನಾದಿರಾಳ ಅಸಹಾಯಕತೆಗೆ ವಿರುದ್ಧವಾದ ಪಾತ್ರ ಚಿತ್ರಣ ನಸೀಮಾಳದ್ದು. ಲೇಖಕಿಯ ಮನಸ್ಥಿತಿಯೇ ಇಲ್ಲಿ ಪಾತ್ರವಾಗಿ ಹೊರಹೊಮ್ಮಿರುವುದನ್ನು ಕಾಣಬಹುದಾಗಿದೆ. ಜೊತೆಗೆ ಈ ಕಾದಂಬರಿಯ ಮುನ್ನುಡಿಯಲ್ಲಿ "ಸಹೋದರಿಯರೇ ಎಚ್ಚೆತ್ತುಕೊಳ್ಳಿ ಹೇಳಬೇಕಾದುದನ್ನು ಈಗಲಾದರೂ ಹೇಳಿ, ನಿಮ್ಮ ಬಾಯಿ ಮುಚ್ಚಿಸುವ ಪಿತೂರಿಯೊಂದು ಎಂದೋ ಆರಂಭವಾಗಿದೆ"[೧೩] ಎಂದು ಶೋಷಿತ ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಕರೆ ನೀಡುತ್ತಾರೆ.

ಮತ್ತೊಂದೆಡೆ 'ವಜ್ರಗಳು' ಕಾದಂಬರಿಯ ನಫೀಸಾಳು ಸುಖದ ಮುಖವನ್ನೇ ಅರಿಯದವಳು. ಸುಖದ ಮುಖವೇ ಸಿಗದೆ ಕೇವಲ ಗಾಣದೆತ್ತಿನಂತೆ ದುಡಿಯುವವಳು. ಬದುಕಿನುದ್ದಕ್ಕೂ ನೋವುಣ್ಣುತ್ತಲೇ ಹೋಗುವ ಹೆಣ್ಣಿನ ಕತೆಯನ್ನು ಈ ಕಾದಂಬರಿಯಲ್ಲಿ

ಕಾಣಬಹುದು. ಬಾಹ್ಯ ಸೌಂದರ್ಯದಿಂದ ಕಪ್ಪಾಗಿರುವ ನಫೀಸಾಳು, ಬದ್ರುದ್ದಿನನೆಂಬ ಪಟ್ಟಣದ ತಳುಕು ಬಳುಕಿಗೆ ಮಾರು ಹೋಗಿದ್ದ ವ್ಯಕ್ತಿಯನ್ನು ವಿವಾಹವಾಗುತ್ತಾಳೆ. ಆದರೆ, ಆಕೆಯ ಗಂಡ ಬಾಹ್ಯ ಸೌಂದರ್ಯಕ್ಕೆ ಬೆಲೆ ಕೊಟ್ಟನೇ ಹೊರತು, ಆಕೆಯ ಆಂತರಿಕ ಸೌಂದರ್ಯಕ್ಕೆ ಬೆಲೆ ಕೊಡುವುದಿಲ್ಲ.

ಹಳ್ಳಿಯ ಕಪ್ಪು ಹುಡುಗಿ ಎಂಬ ಕಾರಣಕ್ಕಾಗಿ ಆಕೆ ಬದ್ರುದ್ದೀನನಿಗೆ ಅಯೋಗ್ಯಳಾದ ಹೆಂಡತಿಯಾಗಿ, ಅತ್ತೆ–ನಾದಿನಿಯರ ತಾತ್ಸಾರಕ್ಕೆ ಗುರಿಯಾಗುತ್ತಾಳೆ. ವಾಸ್ತವಾಂಶ ತಿಳಿದ ನಫೀಸಾಳಿಗೆ ಅರಿವಾದದ್ದು. ತನ್ನಿನಿಯನ ಮನೋಮಂದಿರಕ್ಕೆ ತಾನು ಇನ್ನೆಂದೂ ಪ್ರವೇಶಿಸಲು ಸಾಧ್ಯವಿಲ್ಲವೆಂಬುದು. ಆ ಮಂದಿರದಿಂದ ತನ್ನನ್ನು ಹೊರಗಿಟ್ಟು ಹೊರಗಿನಿಂದ ಬಲವಾಗಿ ಅಗುಳಿಯನ್ನು ಹಾಕಲಾಗಿದೆ ಎಂಬ ಸತ್ಯ ತಿಳಿಯುತ್ತದೆ. ಹಳ್ಳಿಯ ಸಾಂಪ್ರದಾಯಿಕ ವಾತಾವರಣದಲ್ಲಿ ಬೆಳೆದ ನಫೀಸಾಳಿಗೆ ಆಧುನಿಕತೆಯ ಗಂಧ ಸೋಕಿರುವುದೇ ಇಲ್ಲ. ಆಕೆ ಬದಲಾಗುವುದಕ್ಕೆ ಯಾವುದೇ ಅವಕಾಶವೂ ಆಕೆಯ ಪಾಲಿಗೆ ಸಿಕ್ಕಿರುವುದೇ ಇಲ್ಲ. ಈ ನಡುವೆ ಬದ್ರುದ್ದೀನನು ಯಾಂತ್ರಿಕವಾಗಿ ಕೆಲವು ದಿನಗಳ ಕಾಲ ನಫೀಸಾಳ ದೈಹಿಕ ಸುಖವನ್ನು ಅನುಭವಿಸಿ, ಒಂದು ಗಂಡು ಮಗುವಿನ ತಾಯಿಯಾಗಿಸಿ, ಆಕೆಯ ಅಗತ್ಯವಿಲ್ಲವೆಂದಾಗ ಆಕೆಗೆ ತಲಾಖ್ ನೀಡುತ್ತಾನೆ. ಈ ರೀತಿ ನಫೀಸಾಳು ಸೌಂದರ್ಯ ರಹಿತವಾಗಿದ್ದುದ್ದೇ ಅವಳಿಗೆ ಶಾಪವಾಗಿ ಪರಿಣಮಿಸುತ್ತದೆ.

ಚಿಕ್ಕ ವಯಸ್ಸಿನಲ್ಲಿ ಮಗುವಿನ ತಾಯಿಯಾಗಿ, ವಿಚ್ಛೇದಿತಳಾಗಿ, ಒಂಟಿಯಾಗಿ ಕಾಲಕಳೆಯಬೇಕಾಗಿ ಬರುವುದು ವಿಪರ್ಯಾಸವೇ ಸರಿ. ಹೀಗೆ ಮುರುಟಿ ಹೋಗುತ್ತಿದ್ದ ಬದುಕಿಗೆ ಆಸರೆಯಾಗಿ ಬಾಲ್ಯದ ಗೆಳೆಯ ಶಫಿಯುಲ್ಲ ಮದುವೆಯಾಗಲು ಮುಂದಾದಾಗ, ಮಗನ ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡಂತಹ ನಫೀಸಾ ಮರುಮದುವೆಯನ್ನು ತಿರಸ್ಕರಿಸುತ್ತಾಳೆ. ಆಕೆಯ ಮಹಾತ್ಯಾಗಕ್ಕೆ ಮುಂದೆ ಯಾವ ಬೆಲೆಯೂ ದೊರೆಯುವುದಿಲ್ಲವೆಂಬುದನ್ನು ಅರಿಯದ ನಫೀಸಾ, ಬಯಸದೇ ಬಂದ ಭಾಗ್ಯವನ್ನು ನಿರಾಕರಿಸುತ್ತಾಳೆ. ಗಂಡನ ದೌರ್ಜನ್ಯಕ್ಕೆ ಕೊನೆಯೇ ಇಲ್ಲವೆಂಬಂತೆ ವಿದ್ಯಾಭ್ಯಾಸದ ನೆಪದಲ್ಲಿ ಮಗನನ್ನೂ ಪಟ್ಟಣಕ್ಕೆ ಕರೆಸಿಕೊಳ್ಳುವ ಬದ್ರುದ್ದೀನ್, ತಾಯಿ ಮಗನ ಸಂಬಂಧಕ್ಕೆ ಮುಳುವಾಗುತ್ತಾನೆ. ಯಾವ ಪಟ್ಟಣದ ಮೋಹ ಆಕೆಯನ್ನು ಗಂಡನಿಂದ ದೂರ ಮಾಡಿತ್ತೋ, ಅದೇ ಆಕರ್ಷಣೆ ಮಗನನ್ನೂ ದೂರ ಮಾಡುತ್ತದೆ. ಹೀಗೆ ಗಂಡ ಬಿಟ್ಟವಳೆಂಬ ಆಪಾದನೆಗೆ ಗುರಿಯಾಗಿ, ತವರಿಗೆ ಹೊರೆಯಾಗಿ ಪರಾವಲಂಬಿತನದಿಂದ ಮನೋರೋಗಕ್ಕೆ ತುತ್ತಾಗಿ ಅನುಭವಿಸುವ ಮೂಕ ವೇದನೆಯನ್ನು ಇಲ್ಲಿ ಕರುಣಾಜನಕವಾಗಿ ಲೇಖಕರು ಚಿತ್ರಿಸಿದ್ದಾರೆ.

ನಂತರದಲ್ಲಿ ಈಕೆಯ ಜೀವನದ ಗತಿ ಬದಲಾಗುತ್ತಾ ಹೋಗುತ್ತದೆ. ಒಂಟಿ ಜೀವಕ್ಕೆ ವಿದಾಯ ಹೇಳಲೆಂಬಂತೆ ಐವತ್ತೈದರ ಪ್ರಾಯದ ಉಸ್ಮಾನ್ ಹಾಜಿ ಎರಡನೇ ಪತಿಯಾಗಿ

ಬರುತ್ತಾನೆ. ಈಗ ಒಂದೇ ಬಾರಿಗೆ ಆಕೆಗೆ ಎಲ್ಲವೂ ದೊರೆಯುತ್ತದೆ. ಗಂಡ, ಮನೆ, ಮಕ್ಕಳು ಕೊನೆಗೆ ಸೊಸೆಯರೂ ದೊರೆತು ಚಿಕ್ಕವಯಸ್ಸಿನಲ್ಲಿ ಅತ್ತೆ ಎಂಬ ಪದವಿಯೂ ಸಿಗುತ್ತದೆ! ಆದರೆ ಎಲ್ಲಕ್ಕಿಂತ ಮುಖ್ಯವಾದ ಬಾಳಸಂಗಾತಿ ಮಾತ್ರ ಆಕೆಗೆ ದೊರೆಯಲೇ ಇಲ್ಲ. ಆದರೆ ಇವುಗಳೆಲ್ಲಾ ಬಹಳ ದಿನಗಳವರೆಗೆ ಉಳಿಯುವುದಿಲ್ಲ. ವಿಧಿ ಇವಳನ್ನು ಪುನಃ ವಂಚಿಸುತ್ತದೆ. ಪಾರ್ಶ್ವವಾಯು ಪೀಡಿತ ಗಂಡ ಹಾಸಿಗೆ ಹಿಡಿದು ಮಲಗಿರುವಾಗ ತಾಯಿಯನ್ನು ನೋಡಲು ಹೋದ ನಫೀಸಾಳಿಗೆ, ಆಕೆಗೆ ತಿಳಿಯದಂತೆಯೇ ಕುತಂತ್ರಿ ಹುಸೈನ್ ತಂದೆಯ ಹೆಬ್ಬೆಟ್ಟಿನ ಗುರುತನ್ನು ಹಾಕಿಸಿ, ಪತ್ರದ ಮುಖೇನ ತಲಾಖ್ ಕಳುಹಿಸುತ್ತಾನೆ. ಗಾಯದ ಮೇಲೆ ಬರೆ ಎಳೆದಂತಾಗುತ್ತದೆ ಈಕೆಯ ಸ್ಥಿತಿ. ತಲಾಖ್‌ನ ಭಯದಡಿಯಲ್ಲಿ ಜಜ್ಜಿಹೋಗಿರುವ ನಫೀಸಾಳಿಗೆ ಸ್ವಂತ ಬದುಕೇ ಇಲ್ಲದಂತಾಗುತ್ತದೆ. ತ್ಯಾಗದಮೂರ್ತಿಯಂತೆ ಸೇವೆ ಸಲ್ಲಿಸಿದ ಈಕೆಗೆ ಮದುವೆಯ ಸುಖ ಏನೆಂದು ತಿಳಿಯುವ ಮೊದಲೇ ಎರಡು ತಲಾಖ್‌ಗಳಾಗುತ್ತವೆ. ಬದುಕಿನಲ್ಲಿ ಗಂಡನಿಂದ ಮಕ್ಕಳನ್ನು ಪಡೆಯುವ ಹಂಬಲದಿಂದ ವಂಚಿಸಲ್ಪಟ್ಟವಳು. ಪುರುಷ ಪ್ರಧಾನ ವ್ಯವಸ್ಥೆಯಡಿಯಲ್ಲಿ ನುಗ್ಗಾದ ನಫೀಸಾಳ ತ್ಯಾಗ ಯಾವ ಲೆಕ್ಕಕ್ಕೂ ಬಾರದೇಹೋಗುತ್ತದೆ. ಕೊನೆಯಲ್ಲಿ ನಫೀಸಾಳು ಬೇರೆಯವರ ಆಶ್ರಯ ತೊರೆದು, ತಾನೇ ದತ್ತು ಮಗುವೊಂದನ್ನು ಪಡೆದು ಉಪಜೀವನಕ್ಕೆ ಎಮ್ಮೆ ಕಟ್ಟಿ ಹೈನುಗಾರಿಕೆ ಕೈಗೊಳ್ಳುವ ಮೂಲಕ ಸ್ವತಂತ್ರಳಾಗುತ್ತಾಳೆ.

ಹೀಗೆ ನಫೀಸಾಳು ಬದುಕಿನ ಪ್ರತಿಯೊಂದು ಹಂತದಲ್ಲಿಯೂ ಬರೀ ನೋವನ್ನೇ ಅನುಭವಿಸುತ್ತಾ ಎಲ್ಲಾ ರೀತಿಯ ಶೋಷಣೆಗಳಿಗೂ ಒಳಗಾಗುತ್ತಾಳೆ. ಅಲ್ಲದೆ ಈ ಕಾದಂಬರಿಯಲ್ಲಿ ಶೋಷಣೆಗೆ ಒಳಗಾಗುವವಳು ನಫೀಸಾಳಷ್ಟೇ ಅಲ್ಲ, ಉಸ್ಮಾನ್‌ಹಾಜಿರವರ ಹೆಣ್ಣುಮಕ್ಕಳು ಮತ್ತು ಹುಸೈನ್‌ನ ಹೆಂಡತಿ ಹಮೀದಾ ಕೂಡಾ ವ್ಯವಸ್ಥೆಯ ಕ್ರೂರ ಹಿಡಿತದಿಂದ ನಲುಗಿದವರೇ. ಹುಸೈನನು ಇಸ್ಲಾಂ ಶೋಷಿತ ವ್ಯವಸ್ಥೆಯ ಪ್ರತಿನಿಧಿ ಎಂಬಂತೆ ಕಾಣಿಸಿಕೊಳ್ಳುತ್ತಾನೆ. ಈತ ತನ್ನ ಹೆಂಡತಿಯನ್ನು ಮಾಳಿಗೆಯ ಪಂಜರದ ಪಕ್ಷಿಯಾಗಿಸಿರುತ್ತಾನೆ. ಆಕೆ ಬೆಳಕು ಹರಿದ ಮೇಲೆ ಬಹಿರ್ದೆಸೆಗೆ ಹೋಗುವಂತಿಲ್ಲ, ಕತ್ತಲಾದ ಮೇಲೆ ಹೊರಗೆ ಹೋಗಬೇಕು, ಅವರನ್ನು ಯಾರೂ ನೋಡಬಾರದು– ಹೀಗೆ ಹಲವಾರು ನಿರ್ಬಂಧಗಳನ್ನೇರಿ ಹಿಂಸಿಸುತ್ತಿರುತ್ತಾನೆ.

ಇಷ್ಟೇ ಅಲ್ಲದೆ ದೈಹಿಕ ಹಿಂಸೆಯೂ ಈತನಿಂದ ತಪ್ಪಿದ್ದಲ್ಲ. ಗಂಡನ ಮಾತನ್ನು ಹಮೀದಾ ಚಾಚೂತಪ್ಪದೇ ಪಾಲಿಸುತ್ತಿದ್ದರೂ, ಆಗಾಗ ಗಂಡನಿಂದ ಹೊಡೆತ ಬೀಳುತ್ತಿತ್ತು. ಕಿಟಕಿಯ ತೆರೆಯನ್ನು ಸರಿಸಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಪರಪುರುಷನನ್ನು ಇಣುಕಿ ನೋಡಿದಳೆಂಬ ಕಾರಣಕ್ಕಾಗಿ, ಎಲೆ–ಅಡಿಕೆ ತಿಂದು ತುಟಿಗಳು ಕೆಂಪಾಗಿವೆ ಎಂಬ ಕಾರಣಕ್ಕಾಗಿ, ಸರಿಯಾದ ಸಮಯಕ್ಕೆ ನಮಾಜ್ ಮಾಡಲಿಲ್ಲ ಎಂಬ ಕಾರಣಕ್ಕಾಗಿ

ಮೇಲಿಂದ ಮೇಲೆ ಈಕೆ ದಂಡನೆಗೆ ಗುರಿಯಾಗುತ್ತಿರುತ್ತಾಳೆ. ಈತನ ಮೃಗತ್ವ ಎಷ್ಟೆಂದರೆ ಈತನ ತಂಗಿ ಕೂದಲು ಕಾಣುವಂತೆ ತಲೆಗೆ ಬಟ್ಟೆ ಕಟ್ಟಿದ್ದಕ್ಕಾಗಿ ದನಕ್ಕೆ ಬಡಿಯುವಂತೆ ಬಡಿಯುತ್ತಾನೆ. ಮಾಳಿಗೆಗೆ ಊಟ ತಿಂಡಿ ಕಳುಹಿಸುವುದು ತಡವಾಯಿತೆಂಬ ಕಾರಣಕ್ಕೆ ಹಿಡಿದು ಹೊಡೆಯುತ್ತಾನೆ. ಹೀಗೆ ಮಾತು-ಮಾತಿಗೂ ಇವರು ಈತನಿಂದ ಶಿಕ್ಷಿಸಲ್ಪಡುತ್ತಿರುತ್ತಾರೆ. ಈತನ ಧ್ವನಿ ಕೇಳುತ್ತಿದ್ದಂತೆಯೇ ಈ ಹೆಣ್ಣು ಮಕ್ಕಳು ಅಡಿಗೆ ಮನೆಯ ಮೂಲೆಯಲ್ಲೋ, ಉಗ್ರಾಣದ ಒಳಗೋ ಅಡಗಿಕೊಳ್ಳುವಂತಹ ಸ್ಥಿತಿಯಲ್ಲಿರುತ್ತಾರೆ.

ಒಮ್ಮೆ ಇವರು ನಫೀಸಾಳೊಡನೆ ತೋಟದಲ್ಲಿ ತಿರುಗಾಡುತ್ತಿದ್ದುದ್ದನ್ನು ಕಂಡ ಈತ ಅವರು ಮನೆಗೆ ಬರುತ್ತಿದ್ದಂತೆಯೇ ತನ್ನ ತಂಗಿಯನ್ನು ಹೊಡೆಯಲಾರಂಭಿಸುತ್ತಾನೆ. ಈತನನ್ನು ಎದುರು ಹಾಕಿಕೊಳ್ಳುವ ಧೈರ್ಯ ಆ ಮನೆಯಲ್ಲಿ ಯಾರಿಗೂ ಇರುವುದಿಲ್ಲ. ಆದರೆ ಪ್ರಥಮ ಬಾರಿಗೆ ಎಂಬಂತೆ ಈ ದೃಶ್ಯವನ್ನು ಕಂಡ ನಫೀಸಾಳು ಆತನನ್ನು ಪ್ರತಿಭಟಿಸುತ್ತಾಳೆ. "ನಮ್ಮ ತಲೆಯಲ್ಲಿ ಬಟ್ಟೆ ಇಲ್ಲದಿದ್ದರೆ, ಪರಪುರುಷರ ಮುಂದೆ ನಿಂತರೆ ನಾವು ನರಕಕ್ಕೆ ಹೋಗುತ್ತೇವೆ ಅಷ್ಟೇ ತಾನೇ? ಆದರೆ ನೀನು ಮತ್ತು ನಿನ್ನಂತಹವರಿಗೆ ಸ್ವರ್ಗಕ್ಕಿಂತ ನರಕವೇ ವಾಸಿ. ನರಕವೇ ನಮಗಿರಲಿ!"[೧೪] ಎಂದು ರೋಷದಿಂದ ನುಡಿದು ಆತನ ತಂಗಿ ಸೆಲ್ಮಾಳನ್ನು ಒಳಗೆ ಕರೆದೊಯ್ಯುತ್ತಾಳೆ.

ಮತ್ತೊಮ್ಮೆ ಈತನ ಸಂಪ್ರದಾಯವಾದಿ ನಿರ್ಬಂಧಗಳ ಅತಿರೇಕದಿಂದ ಒಂದು ಅನಾಹುತ ಘಟಿಸುತ್ತದೆ. ಹುಸೈನನ ಹೆಂಡತಿ ಹಮೀದಾಳಿಗೆ ಪ್ರಸವ ವೇದನೆ ಆರಂಭವಾಗಿ ಹೆರಿಗೆ ಕಷ್ಟವಾದ ಸಂದರ್ಭದಲ್ಲಿ ವೈದ್ಯರ ನೆರವು ಅತ್ಯಗತ್ಯವಾಗುತ್ತದೆ. ಆದರೆ, ಪಟ್ಟಣದ ಆಸ್ಪತ್ರೆಗೆ ಕರೆದೊಯ್ದು, ನೂರಾರು ಜನರು ಓಡಾಡುವ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸುವುದಕ್ಕೆ ತಯಾರಿಲ್ಲದ ಈತ ಅದನ್ನು ವಿರೋಧಿಸುತ್ತಾನೆ. 'ನಿಮಗೆ ತಲೆ ಸರಿ ಇಲ್ಲವೇ? ನಮ್ಮ ಹೆಂಗಸರನ್ನು ಆ ಅನ್ಯ ಪುರುಷರು ನೋಡುವುದೇ? ಹೆರಿಗೆ ಮಾಡಿಸುವುದೇ? ಅದೆಲ್ಲ ಸಾಧ್ಯವಿಲ್ಲ' ಎಂದು ಖಡಾಖಂಡಿತವಾಗಿ ನುಡಿಯುತ್ತಾನೆ. ಆದರೆ ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ನಫೀಸಾ ಏನೂ ಮಾಡಲಾಗದೆ ಅಸಹಾಯಕಳಾಗುತ್ತಾಳೆ. ಆದರೆ ಈ ಸಂದರ್ಭದಲ್ಲಿಯೂ ಸಾವು-ಬದುಕಿನ ನಡುವೆ ಹೋರಾಡುತ್ತಿರುವ ತನ್ನ ಹೆಂಡತಿಯ ಜೀವಕ್ಕಿಂತ ತನ್ನ ಧರ್ಮದ ನಿಯಮಗಳೇ ಹುಸೈನನಿಗೆ ಹೆಚ್ಚಾಗುತ್ತವೆ.

ಆದರೆ ನಫೀಸಾ ಕೈಕೈ ಹಿಸುಕಿಕೊಳ್ಳುತ್ತಾ ತನ್ನ ಈ ವ್ಯವಸ್ಥೆಯ ಮೇಲೆ ಕೆಂಡ ಕಾರುತ್ತಾಳೆ. "ಪ್ರಾಣ ಹೋಗುತ್ತಿರುವಾಗಲು ಪರದೆಯೇ? ಆಕೆಗೇನಾದರೆ ನಿನಗೇನು ನಷ್ಟವಾಗುವುದಿಲ್ಲ. ನಾಳೆಯೇ ಇನ್ನೊಬ್ಬಳು ಬರುತ್ತಾಳೆ. ಆದರೆ ಈ ಮಕ್ಕಳಿಗೆ ಇನ್ನೊಬ್ಬ ತಾಯಿ ಬರಲಾರಳು. ನಿಮ್ಮಂತಹವರಿಗೂ ಹೆಣ್ಣು ಕೊಡುವವರಿದ್ದಾರಲ್ಲ ಈ ಸಮಾಜದಲ್ಲಿ

ಅಂತಹವರನ್ನು ನಡುನೀರಿನಲ್ಲಿ ಮುಳುಗಿಸಬೇಕು!"[೧೫] ಎಂದು ಕೋಪೋದ್ರಿಕ್ತಳಾಗಿ ನುಡಿಯುತ್ತಾಳೆ. ಆದರೆ, ಪರಿಸ್ಥಿತಿ ಕೈಮೀರುತ್ತಿರುತ್ತದೆ. 'ಚಿಕ್ಕಮ್ಮ ನನ್ನನ್ನು ಈ ನೋವಿನಿಂದ ಪಾರು ಮಾಡಿ. ನನ್ನನ್ನು ಬದುಕಿಸಿ, ದಯವಿಟ್ಟು ನನ್ನನ್ನು ಬದುಕಿಸಿ..' ಎಂಬ ಸಾವಿನ ಅಂಚಿನಲ್ಲಿದ್ದ ಹಮೀದಾಳ ಆರ್ತನಾದ ಗಂಡನಾದವನಿಗೆ ಮುಟ್ಟುತ್ತಲೇ ಇರಲಿಲ್ಲ. ಕಡೆಗೂ ಹಮೀದಾ ಮೃತ್ಯುವಿನ ಪಾಲಾಗುತ್ತಾಳೆ. ಆದರೂ ಗಂಡನೆಂಬ ಪ್ರಾಣಿಗೆ ಕಿಂಚಿತ್ತೂ ಪಾಪಪ್ರಜ್ಞೆ ಕಾಡುವುದಿಲ್ಲ. 'ನಿಮ್ಮ ಉಮ್ಮಾಗೆ ಅಲ್ಲಾಹುನು ಏಳನೆಯ ಸ್ವರ್ಗವನ್ನು ದಯಪಾಲಿಸುತ್ತಾನೆ' ಎಂದು ಅಳುತ್ತಿದ್ದ ತನ್ನ ಮಕ್ಕಳನ್ನು ಸಂತೈಸುತ್ತಾನೆ. ಅಷ್ಟೇ ಅಲ್ಲದೆ ಹೆಂಡತಿ ಕಳೆದುಕೊಂಡ ಸ್ವಲ್ಪ ದಿವಸಕ್ಕೆ ಹದಿನೇಳು ವರ್ಷದ ಹುಡುಗಿಯೊಬ್ಬಳನ್ನು ವಿವಾಹವಾಗಿ ಮನೆಗೆ ಕರೆತರುತ್ತಾನೆ.

ಇಡೀ ಮುಸ್ಲಿಂ ಸಂಪ್ರದಾಯದ ರಾಯಭಾರಿಯಂತೆ ಹುಸ್ಯೆನನು ಈ ಕಾದಂಬರಿಯಲ್ಲಿ ಪ್ರತಿಬಿಂಬಿತವಾಗಿದ್ದಾನೆ. ಕೆಲವು ಮೂರ್ಖ ಗಂಡಸರ ಹಠವಾದಿತನಕ್ಕೆ ಎಷ್ಟೋ ಹೆಣ್ಣುಗಳ ಜೀವ ಬಲಿಯಾಗುತ್ತಿರುವುದನ್ನು ಇಲ್ಲಿ ಗಮನಿಸಬಹುದು. ನಫೀಸಾಳಾದರೂ ಅಷ್ಟೇ ಮೊನ್ನೆ ಮೊನ್ನೆಯವರೆಗೆ ದೊಡ್ಡ ಜಮೀನ್ದಾರನ ಪತ್ನಿಯಾಗಿ ಸಕಲ ಸಂಪತ್ತಿಗೂ ಒಡತಿಯಾಗಿದ್ದವಳು ಇಂದು ಬೀದಿಯ ಬಿಕಾರಿಯಾಗುವುದು 'ತಲಾಖ್' ಎಂಬ ಮೂರು ಅಕ್ಷರಗಳ ಕಾರಣದಿಂದ.

ಪರಿಸ್ಥಿತಿಯ, ವ್ಯವಸ್ಥೆಯ ಇಂತಹ ಕ್ರೂರ ಹಿಡಿತದೊಳಗೆ ಸಿಲುಕಿ ವಿಚಿತ್ರ ವೇದನೆ ಪಡುತ್ತಿರುವ ಮುಸ್ಲಿಂ ಮಹಿಳೆಯರ ಕುರಿತು ಸಾರಾ ಅವರು ತಮ್ಮ ಕಾದಂಬರಿಗಳ ಒಳಗೆ ಪಾತ್ರಗಳ ಮೂಲಕ ತಮ್ಮ ಪ್ರತಿರೋಧ, ಅನುಕಂಪ, ಮಾನವೀಯತೆಯ ನೆಲೆಯನ್ನು ಮುಟ್ಟುತ್ತಾರೆ. ಮುಸ್ಲಿಂ ಸಂಪ್ರದಾಯಗಳು ವಜ್ರಗಳಂತೆ ಅಬೇಧ್ಯವಾದವುಗಳಾಗಿ, ಕಠಿಣವಾದ ಸ್ವರೂಪವನ್ನೆ ತನ್ನಲ್ಲಿ ಅಳವಡಿಸಿಕೊಂಡಿವೆ ಆದರೆ, ಹೆಣ್ಣನ್ನು ವಜ್ರಗಳಂತೆ ಕಾಪಾಡಿಕೊಳ್ಳುತ್ತೇವೆ ಎಂಬುದು ನಿಜವಾದರೂ, ಕೆಲವು ಸಾರಿ ಅವು ಗಾಜಿನಮಣಿಗಳಂತೆ ಬೆಲೆ ಕಳೆದುಕೊಂಡು ಬೀದಿಗೆಸೆಯಲ್ಪಡುತ್ತವೆ. ಸಾರಾ ಅವರು ಈ ಅಂಶವನ್ನು ಸ್ಪಷ್ಟಪಡಿಸುತ್ತಾ ವಿವಾಹ ಸಂಸ್ಥೆಗಿರುವ ಅಭದ್ರತೆಯನ್ನು ಬೆಳಕಿಗೆ ತರುತ್ತಾರೆ. ಹೆಣ್ಣು ಹೂವೂ ಆಗುತ್ತಾಳೆ, ವಜ್ರವೂ ಆಗುತ್ತಾಳೆಂಬ ನಿಲುವನ್ನು ಲೇಖಕರು ವ್ಯಕ್ತಪಡಿಸುತ್ತಾರೆ. ಈ ಮೂಲಕ ಮುಸ್ಲಿಂ ಸಮಾಜದ ಮಹಿಳೆಯರ ಶೋಷಣೆಯ ವಿವಿಧ ಮುಖಗಳನ್ನು ಪರಿಚಯಿಸುತ್ತಾ ಹೋಗುತ್ತಾರೆ.

ಮತ್ತೊಂದು ಗಮನಾರ್ಹ ಸಂಗತಿಯೆಂದರೆ, ತಲಾಖ್ ಮತ್ತು ಬಹುಪತ್ನಿತ್ವದ ಸಮಸ್ಯೆಗಳನ್ನು ಮುಸ್ಲಿಂ ಮಹಿಳೆಯರು ಭಾರತದಲ್ಲಿ ಮಾತ್ರವಲ್ಲ ಜಗತ್ತಿನಾದ್ಯಂತ ಎದುರಿಸುತ್ತಿರುವ ದೊಡ್ಡ ಸಮಸ್ಯೆ ಎಂಬುದರಲ್ಲಿ ಎರಡು ಮಾತಿಲ್ಲ. ಎಲ್ಲಾ ಕಡೆಯೂ

ಹೆಣ್ಣನ್ನು ಗಂಡಿನ ಭೋಗದ ವಸ್ತುವಾಗಿಯೇ ಪರಿಗಣಿಸಲಾಗುತ್ತದೆ. ಈ ಧರ್ಮದ ಕೆಲವು ನಿಯಮಗಳು ಸ್ತ್ರೀಯರ ಪ್ರಾಧಾನ್ಯತೆಯನ್ನು ಎತ್ತಿ ಹಿಡಿದರೆ ಇನ್ನು ಹಲವಾರು ನಿಯಮಗಳು ಪುರುಷನ ಅಧೀನತೆಯನ್ನು ಪ್ರತಿಪಾದಿಸುತ್ತವೆ. ಈ ಮೂಲಕ ಸ್ತ್ರೀಯನ್ನು ನಿಷ್ಕ್ರಿಯಗೊಳಿಸಿ, ಅವ್ಯಾಹತವಾಗಿ ಆಕೆಯ ಶೋಷಣೆ ನಡೆಸುತ್ತಿವೆ.

ಈ ರೀತಿಯ ಧರ್ಮದ ನಿಯಮಗಳ ಅಸ್ಪಷ್ಟತೆ ಮತ್ತು ದ್ವಂದ್ವ ನೀತಿಯನ್ನು ಕುರಿತು ಎಂ.ಎನ್. ರಾಯ್‌ರವರು ತಮ್ಮ 'ಮಹಮ್ಮದ್ ಮತ್ತು ಅವರ ಬೋಧನೆಗಳು' ಎಂಬ ಲೇಖನದಲ್ಲಿ ಹೀಗೆ ಅಭಿಪ್ರಾಯ ಪಡುತ್ತಾರೆ. "ಪ್ರಾಯೋಗಿಕವಾಗಿ ಶಿಕ್ಷಣವೇ ಪಡೆಯದ ವ್ಯಕ್ತಿಯು ರೂಪಿಸಿದ ಖುರಾನ್ ಖಂಡಿತವಾಗಿಯೂ ಬುದ್ಧಿಜೀವಿ ಮಟ್ಟದ ಸೃಜನಕ್ರಿಯೆಯಲ್ಲ. ಅದರ ತುಂಬಾ ಅಸ್ಪಷ್ಟ ಆಲೋಚನೆಗಳು ಮತ್ತು ರೋಚಕ ಊಹೆಗಳಿವೆ" ('ಇತಿಹಾಸ ಮತ್ತು ಇಸ್ಲಾಂ' – ಇಸ್ಲಾಂನ ಐತಿಹಾಸಿಕ ಪಾತ್ರ, ಮೂಲ– ಎಂ.ಎನ್. ರಾಯ್, ಅನುವಾದ – ಬಿ.ಎಂ. ಹನೀಫ್) ಎಂದು ಹೇಳುತ್ತಾರೆ. ಇಸ್ಲಾಂ ಧರ್ಮದಲ್ಲಿ ಸ್ತ್ರೀಯರ ಬಗೆಗಿನ ಕಟ್ಟುಪಾಡುಗಳು, ನಿಲುವುಗಳು, ವಿಧಿವಿಧಾನ, ಕಾನೂನು ನಿಯಮಗಳಲ್ಲಿ ಈ ರೀತಿಯ ಇಬ್ಬಗೆಯ ಧೋರಣೆಯನ್ನು ಕಾಣಬಹುದಾಗಿದೆ. ಹಲವಾರು ನೀತಿ ನಿಯಮಗಳಲ್ಲಿ ಸ್ಪಷ್ಟತೆ ಇಲ್ಲದಿರುವ ಕಾರಣ ಅದನ್ನು ಅರ್ಥೈಸುವಲ್ಲಿ ಮತ ಪಂಡಿತರಲ್ಲಿ ಭಿನ್ನಾಭಿಪ್ರಾಯಗಳಿವೆ. ಆರು ಸಾವಿರಕ್ಕೂ ಮೇಲ್ಪಟ್ಟು ಶ್ಲೋಕಗಳಿರುವ ಖುರಾನ್‌ನಲ್ಲಿ ಸುಮಾರು ಮುನ್ನೂರು ಶ್ಲೋಕಗಳಿಗೆ ಮಾತ್ರ ಖಚಿತವಾದ, ಸ್ಪಷ್ಟವಾದ ವ್ಯಾಖ್ಯಾನಗಳನ್ನು ನೀಡಲು ಧರ್ಮಪಂಡಿತರಿಗೆ ಸಾಧ್ಯವಾಗಿದೆ ಎಂದು ಲೇಖಕಿ ಸಾರಾ ಅವರು ತಮ್ಮ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯ ಮುನ್ನುಡಿಯಲ್ಲಿ ಸ್ಪಷ್ಟಪಡಿಸುತ್ತಾರೆ.

ಇವೆಲ್ಲಾ ಶೋಷಣೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಲೇಖಕರು ಹಲವಾರು ಪರಿಹಾರಗಳನ್ನು ಸೂಚಿಸುತ್ತಾರೆ. ಶೋಷಿತರು ಮತ್ತು ಶೋಷಕ ಸಮಾಜವು ತಮ್ಮ ದೃಷ್ಟಿಕೋನ, ಧೋರಣೆಗಳನ್ನು ಬದಲಾಯಿಸಿಕೊಳ್ಳಬೇಕೆನ್ನುತ್ತಾರೆ. ಅಲ್ಲದೆ ಇಸ್ಲಾಂ ಧರ್ಮದ ವ್ಯಕ್ತಿ ನಿಯಮದ ಸ್ವರೂಪದಲ್ಲಿಯೂ ಬದಲಾವಣೆ ಆಗಬೇಕೆಂದು ಸಾರಾ ಅವರು ಅಭಿಪ್ರಾಯ ಪಡುತ್ತಾರೆ. "ಇಸ್ಲಾಂನ ವ್ಯಕ್ತಿ ನಿಯಮವನ್ನು ಮಹಿಳೆಯರ ಶೋಷಣೆಗೆ ಅವಕಾಶವಿಲ್ಲದ ರೀತಿಯಲ್ಲಿ ತಿದ್ದಿಕೊಳ್ಳಬೇಕು. ತಮ್ಮ ಮನೆಯ ಕೊಳೆ ತೊಳೆದ ನಂತರವಷ್ಟೇ ಇನ್ನೊಬ್ಬರ ಮನೆಯ ಕಸದ ಕುರಿತು ಯೋಚಿಸಬೇಕು ಹಾಗೂ ಎಲ್ಲಾ ವ್ಯಕ್ತಿ ನಿಯಮಗಳಿಂದಲೂ ಮಹಿಳೆಯರ ಶೋಷಣೆಗೆ ಅವಕಾಶವಿಲ್ಲದಂತಹ, ಅತ್ಯುತ್ತಮವಾದ ಅಂಶಗಳನ್ನೆತ್ತಿಕೊಂಡು ಏಕರೂಪ ಸಂಹಿತೆಯೊಂದನ್ನು ರೂಪಿಸಬೇಕು. ಅಲ್ಲದೆ ಈ ಸಂಹಿತೆಯನ್ನು ಯಾರ ಮೇಲೂ ಬಲವಂತವಾಗಿ ಹೇರದೆ, ಅವರು ತಾವಾಗಿ ಒಪ್ಪಿಕೊಳ್ಳುವಂತೆ ಅವರ ಮನವೊಲಿಸಲು ಪ್ರಯತ್ನಿಸಬೇಕು"[೧೬] ಎಂದು ತಮ್ಮ ನಿಲುವನ್ನು

ವ್ಯಕ್ತಪಡಿಸುತ್ತಾರೆ. ಆದರೆ, ಈ ರೀತಿಯ ಬದಲಾವಣೆಗಳು ಸಾಧ್ಯವೇ ಇಲ್ಲ ಎಂದು ಹೇಳಬಹುದು. ಕಾರಣ ಮುಸ್ಲಿಂ ವ್ಯಕ್ತಿ ನಿಯಮದಲ್ಲಿರುವ ಷರಿಯತ್‌ನ ವಿರೋಧಿ ನಿಯಮಗಳನ್ನು ತಿದ್ದುಪಡಿ ಮಾಡಲು ಮುಸ್ಲಿಂ ಪುರುಷರು ಸಿದ್ಧರಿಲ್ಲ. ಹಾಗೇನಾದರೂ ಅದನ್ನು ತಿದ್ದಿ ಸರಿಪಡಿಸಿದರೆ ತಮ್ಮ ಹಕ್ಕುಗಳು ಮೊಟಕುಗೊಳ್ಳುತ್ತವೆ ಎಂಬ ಭಯ ಅವರಿಗಿದ್ದೇ ಇದೆ.

ಮುಸ್ಲಿಂ ಮಹಿಳಾ ಸಮಾಜದಲ್ಲಿ ಸ್ತ್ರೀವಾದ, ಸಮಾನತೆ, ಮಹಿಳಾ ಸ್ವಾತಂತ್ರ್ಯ ಮುಂತಾದ ಶಬ್ದಗಳಿಗೆ ಸ್ಥಾನವೇ ಇಲ್ಲ. ಓರ್ವ ಮಹಿಳೆ ವ್ಯವಸ್ಥೆಯ ವಿರುದ್ಧ ದನಿ ಎತ್ತುತ್ತಾಳೆ ಎಂಬ ಸೂಚನೆ ದೊರೆತೊಡನೆ, ಆಕೆಯ ಹುಟ್ಟಡಗಿಸಲು ಬೇಕಾದ ಪಿತೂರಿಗಳು ರೂಪುಗೊಳ್ಳುತ್ತವೆ. ಆಕೆ ಧರ್ಮ ವಿರೋಧಿಯಾಗುತ್ತಾಳೆ. ಧರ್ಮದಿಂದಲೇ ಉಚ್ಛಾಟಿತಳಾಗುತ್ತಾಳೆ. ಆಕೆ ಮುಸ್ಲಿಮಳೇ ಅಲ್ಲವೆಂಬ ಅಪಪ್ರಚಾರ ನಡೆಯುತ್ತದೆ. ಇದೇ ಕಾರಣಕ್ಕಾಗಿಯೇ ಸಾರಾ, ಬಾನು, ಸಜ್ಮಾಭಾಂಗಿ ಮುಂತಾದವರು ಹಲ್ಲೆಗೊಳಗಾಗಿದ್ದಾರೆ. ಈ ಎಲ್ಲಾ ಅಪಾಯಗಳ ಹಿನ್ನೆಲೆ ಶಿಕ್ಷಣವೆಂಬುದನ್ನರಿತ ಮುಸ್ಲಿಂ ಪುರುಷ ಸಮಾಜ ಸ್ತ್ರೀಯರನ್ನು ಶೈಕ್ಷಣಿಕವಾಗಿ ದೂರವಿಟ್ಟಿದ್ದು ಇದೇ ಕಾರಣಕ್ಕಾಗಿ. ಶಿಕ್ಷಿತಳಾದ ಮಹಿಳೆ ತಮ್ಮ ಕಣ್ಣೆದುರೇ ನಡೆಯುವ ಅನ್ಯಾಯಗಳನ್ನು ನೋಡಿಕೊಂಡು ಸುಮ್ಮನಿರಲಾರಳು. ಶಿಕ್ಷಣವು ನ್ಯಾಯ ಅನ್ಯಾಯಗಳ ಕುರಿತು ಪರಾಮರ್ಶಿಸುವ, ಅನ್ಯಾಯವನ್ನು ಪ್ರಶ್ನಿಸುವ, ಪ್ರತಿಭಟಿಸುವ ಹಕ್ಕು, ಧೈರ್ಯಗಳನ್ನು, ವಿಚಾರವಂತಿಕೆಯನ್ನು, ವಿವೇಚನಾ ಸಾಮರ್ಥ್ಯವನ್ನೂ ಕೊಡುತ್ತದೆ. ಆದರೆ ಇವೆಲ್ಲವೂ ಶಿಕ್ಷಣ ದೊರೆತಾಗ ಮಾತ್ರ ಸಾಧ್ಯವಾಗುವಂತಹವು.

ಜಗತ್ತಿನ ಎಲ್ಲಾ ಮುಸ್ಲಿಂ ರಾಷ್ಟ್ರಗಳಲ್ಲಿಯೂ ಇಂದಿಗೂ ಮಹಿಳೆಯರ ಮೇಲೆ ಶೋಷಣೆ ನಡೆಯುತ್ತಲೇ ಇದೆ. ಧರ್ಮವನ್ನು ಪ್ರಶ್ನಿಸ ಹೊರಟ, ಸತ್ಯವನ್ನು ಜಗತ್ತಿಗೆ ತಿಳಿಸ ಹೊರಟ ಬಾಂಗ್ಲಾದೇಶದ ವಿವಾದಿತ ಲೇಖಕಿ ತಸ್ಲೀಮಾ ನಸ್ರೀನ್ ಉದಾಹರಣೆ ಇಂದಿಗೂ ನಮ್ಮ ಕಣ್ಣಮುಂದೆ ಸಾಕ್ಷೀಭೂತವಾಗಿದೆ. ಪ್ರಾಣಭಯದಿಂದ, ರಕ್ಷಣೆಗಾಗಿ ದೇಶದಿಂದ ದೇಶಕ್ಕೆ ಅಲೆಯಬೇಕಾದ, ತಲೆ ಮರೆಸಿಕೊಂಡಿರಬೇಕಾದ ಪರಿಸ್ಥಿತಿ ಇಂದು ಆಕೆಯದಾಗಿದೆ. ಒಂದು ವಿಶೇಷವೆಂದರೆ, ಇಸ್ಲಾಂ ಧರ್ಮದ ಕಟ್ಟುಪಾಡುಗಳ ವಿರುದ್ಧ, ಹೆಣ್ಣಿನ ಶೋಷಣೆಯ ವಿರುದ್ಧ ದನಿ ಎತ್ತಿ ಪ್ರತಿಭಟಿಸ ಹೊರಟವರೆಲ್ಲರೂ ಮಹಿಳೆಯರೇ ಆಗಿದ್ದಾರೆ. ಇದಕ್ಕೆ ಕಾರಣ ಆ ಮಹಿಳೆಯರು ಅದೇ ಧರ್ಮದೊಳಗಿಟ್ಟುಕೊಂಡು ಅನುಭವಿಸಿದ ಯಾತನೆ, ಸಂಕಟಗಳೇ ಅವರಿಗೆ ಬೆಂಬಲ ನೀಡಿವೆ. ಇವೆಲ್ಲದರ ಹಿನ್ನೆಲೆಯನ್ನು ಗಮನಿಸಿದಾಗ ಇಸ್ಲಾಂ ಧರ್ಮವು ಮಹಿಳೆಯರ ವಿಚಾರದಲ್ಲಿ ಎಷ್ಟು ಕಠೋರವಾದ ನಿಲುವು ತಳೆದಿದೆ ಎಂಬುದು ಸ್ಪಷ್ಟವಾಗುತ್ತದೆ.

ಮತ್ತೊಂದೆಡೆ ಸ್ತ್ರೀಯರ ಮೇಲಿನ ತಮ್ಮ ಹಿಡಿತವನ್ನು ಸಡಿಲಿಸಲೊಲ್ಲದ ಪುರುಷ ಸಮಾಜ ನಮ್ಮ ಮಹಿಳೆಯರಿಗೆ ಸಮಸ್ಯೆಗಳಿವೆ, ಅವರು ಶೋಷಣೆಗೊಳಗಾಗಿದ್ದಾರೆ ಎಂಬ ಸತ್ಯವನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ. ಸಾರಾ ಅವರ ಕಾದಂಬರಿಗಳಲ್ಲಿ ನಿರೂಪಿತವಾಗಿರುವಂತಹ ಸಮಸ್ಯೆಗಳು ನಮ್ಮಲ್ಲಿ ಇಲ್ಲವೇ ಇಲ್ಲ ಎಂದು ವಾದಿಸುವವರೂ ಇದ್ದಾರೆ. 'ನಮ್ಮ ಮಹಿಳೆಯರಿಗೆ ಸಮಸ್ಯೆಗಳೇ ಇಲ್ಲ. ಅವರನ್ನು ನಾವು ಹೂವಿನಂತೆ ಕಾಪಾಡಿಕೊಳ್ಳುತ್ತಿದ್ದೇವೆ, ವಜ್ರಗಳಂತೆ ರಕ್ಷಿಸಿಕೊಳ್ಳುತ್ತೇವೆ' ಎಂದು ಹೇಳುತ್ತಾ ಅವರನ್ನು ಏಳನೇ ಶತಮಾನದಲ್ಲಿಯೇ ಇರಿಸಬಯಸುವ ಪುರುಷರಿಗೂ ಏನು ಕೊರತೆಯಿಲ್ಲ.

ಒಟ್ಟಾರೆಯಾಗಿ ಮುಸ್ಲಿಂ ಮಹಿಳಾ ಪರ ಕಾಳಜಿ, ಅನುಕಂಪ, ಸಹಾನುಭೂತಿ ಹೊಂದಿದ ಲೇಖಕಿ ಸಾರಾ ಅವರು ಮುಸ್ಲಿಂ ಹೆಣ್ಣುಮಕ್ಕಳಲ್ಲಿ ಕೋರಿಕೆಯಂತಹ ಎಚ್ಚರಿಕೆಯ ಕಿವಿ ಮಾತನ್ನು ಹೇಳುತ್ತಾರೆ. "ಪ್ರವಾದಿಗಳ ಬೋಧನೆಯಂತೆ ವ್ಯಭಿಚಾರ, ಕುಡಿತ, ಜೂಜು, ಕೊಲೆ ಇವೇ ಮುಂತಾದ ಏಳು ಮಹಾಪಾತಕಗಳಿಂದ ದೂರವಿರಿ. ಇನ್ನುಳಿದಂತೆ ನೀತಿಯುತವಾದ ಹಾದಿಯಲ್ಲಿ ನಿಮ್ಮಿಚ್ಛೆಯಂತೆ ಮುಂದುವರೆಯಿರಿ. ಬಗ್ಗಿದರೆ ಮತ್ತಷ್ಟು ಗುದ್ದು ಬೀಳುತ್ತದೆ. ಸೆಟೆದು ನಿಂತು ಎದುರಿಸುವ ಧೈರ್ಯವನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು."[೧೭] ಎಲ್ಲಿಯವರೆಗೆ ಮಹಿಳೆ ಜಾಗೃತಳಾಗುವುದಿಲ್ಲವೋ ಅಲ್ಲಿಯವರೆಗೆ ಹೆಣ್ಣು ಗರ್ಭಕೋಶದಿಂದ ಗೋರಿಯವರೆಗೂ ಈ ರೀತಿಯ ಶೋಷಣೆ, ತಾರತಮ್ಯಕ್ಕೆ ಒಳಗಾಗುತ್ತಲೇ ಇರುತ್ತಾಳೆ ಎಂಬ ಧ್ವನಿಯನ್ನು ಇವರ ಮಾತಿನಲ್ಲಿ ಗ್ರಹಿಸಬಹುದಾಗಿದೆ.

ಆದರೆ ಪ್ರಸ್ತುತ ಮುಸ್ಲಿಂ ಮಹಿಳಾ ಸಮಾಜವು ತಣ್ಣಗೆ ಬದಲಾವಣೆಯ ಗಾಳಿಗೆ ತನ್ನನ್ನು ಒಡ್ಡಿಕೊಳ್ಳುತ್ತಿದೆ. ಮುಸ್ಲಿಂ ಮಹಿಳೆ ಖುರಾನ್ ತನಗೆ ಕೊಡಮಾಡಿರುವ ಹಕ್ಕುಬಾಧ್ಯತೆಗಳನ್ನು ಕೇಳುತ್ತಿದ್ದಾಳೆ. ಸಮುದಾಯದ ಒಳಗೆ ನಡೆಯುತ್ತಿರುವ ಶೋಷಣೆಯ ವಿರುದ್ಧ ಬಂಡಾಯ ತೋರುತ್ತಿದ್ದಾಳೆ. ಬಹುಪತ್ನಿತ್ವ, ತಲಾಖ್‌ಗಳನ್ನು ಪ್ರಶ್ನಿಸುತ್ತಿದ್ದಾಳೆ. ವಿಚ್ಛೇದಿತ ಪತಿಯಿಂದ ಜೀವನಾಂಶ ಕೇಳುತ್ತಿದ್ದಾಳೆ. ಮನಬಂದಂತೆ ಕಾನೂನು ತಿರುಚುವ ಮುಲ್ಲಾಗಳಿಗೆ ಕಡಿವಾಣ ಹಾಕುತ್ತಿದ್ದಾಳೆ. ಮನೆಯಿಂದ ಹೊರಗೆ ಬಂದು ಕರ್ತವ್ಯ ನಿಭಾಯಿಸುತ್ತಿದ್ದಾಳೆ. ವ್ಯವಸ್ಥೆಯ ವಿರುದ್ಧ ಹೋರಾಟ ನಡೆಸಲು ಮುಸ್ಲಿಂ ಸ್ತ್ರೀ ಮನಸ್ಸು ಮಾಡಿ ಕಾರ್ಯತತ್ಪರವಾಗಿರುವುದು ಒಂದು ಮಹತ್ವದ ಸಂಗತಿಯಾಗಿದೆ.

೧. ಸಾರಾ ಅಬೂಬಕ್ಕರ್ 'ಚಂದ್ರಗಿರಿಯ ತೀರದಲ್ಲಿ' ಪುಟ – ೮೭
೨. ಅದೇ – ಪುಟ–೮೮
೩. ಅದೇ – ಪುಟ – ೧೧೩
೪. ಅದೇ – ಪುಟ – ೯೩
೫. ಅದೇ – ಪುಟ – ೮೯
೬. ಸಾರಾ ಅಬೂಬಕ್ಕರ್ (೧೯೮೫) 'ಸಹನಾ' ಕಾದಂಬರಿ ಪುಟ – ೫೪
೭. ಅದೇ – ಪುಟ – ೯೯
೮. ಅದೇ – ಪುಟ – ೧೨೨
೯. ಅದೇ – ಪುಟ – ೧೨೭
೧೦. ಅದೇ – ಪುಟ – ೧೬೫
೧೧. ಅದೇ – ಪುಟ – ೧೭೫
೧೨. ಅದೇ – ಪುಟ – ೧೭೬
೧೩. ಅದೇ – ಮುನ್ನುಡಿ ಪುಟ – ೦೩
೧೪. ಅದೇ – ಪುಟ .–೧೩೦
೧೫. ಅದೇ – 'ವಜ್ರಗಳು' ಪುಟ – ೧೪೨
೧೬. ಅದೇ – 'ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ' (ಮುಸ್ಲಿಂ ಮಹಿಳೆಯರು ಮತ್ತು ಏಕರೂಪ ನಾಗರೀಕ ಸಂಹಿತೆ) ಪುಟ – ೧೪೪
೧೭. ಅದೇ– 'ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ' (ಶಿಕ್ಷೆ ನೀಡುವ ಹಕ್ಕು ದೇವರಿಗೆ ಮಾತ್ರ ಇದೆ) ಪುಟ – ೧೦೭

ಅಧ್ಯಾಯ – ೬

ಇಸ್ಲಾಂ ಧರ್ಮದಲ್ಲಿ ಮಹಿಳೆಯರ ಕುರಿತ ಕಟ್ಟುಪಾಡುಗಳು ಹಾಗೂ ಅವುಗಳಿಗೆ ಲೇಖಕಿಯ ಪ್ರತಿಕ್ರಿಯೆ

ಮುಸ್ಲಿಂ ಸಮಾಜದ ದಟ್ಟ ಅನುಭವಗಳು ಕನ್ನಡ ಸಾಹಿತ್ಯದಲ್ಲಿ ದಾಖಲಾದುದು ಬಂಡಾಯ ಕಾಲಘಟ್ಟದಲ್ಲಿ ಬಂದ ಮುಸ್ಲಿಂ ಲೇಖಕರಿಂದ. ಈ ಹೊಸ ಪೀಳಿಗೆಯು ಇಸ್ಲಾಂ ಜಗತ್ತಿನ ಅಂತರಂಗ-ಬಹಿರಂಗಗಳನ್ನು ಅನಾವರಣಗೊಳಿಸಿತು. ಈ ಲೇಖಕರಿಗೆ ಕಟು ವಾಸ್ತವಗಳನ್ನು ತೆರೆದಿಡುವುದು ಮುಖ್ಯವಾಗಿದ್ದರಿಂದ ಅವರು ವೈಭವೀಕರಣವನ್ನು ದೂರವಿಟ್ಟು ಕೃತಿರಚನೆಗಿಳಿದರು. ತಮ್ಮ ಧರ್ಮದಲ್ಲಿ ಮಹಿಳೆಯರ ಮೇಲೆ ಅನೇಕ ಕಾರಣಗಳಿಂದ ನಡೆಯುತ್ತಿದ್ದ ಹಿಂಸೆ, ದೌರ್ಜನ್ಯಗಳನ್ನು ಎತ್ತಿ ಹಿಡಿದು, ಅವುಗಳನ್ನು ಖಂಡಿಸಿ, ಪ್ರತಿಭಟಿಸುವುದು ಇವರಿಗೆ ಅಗತ್ಯವಾಗಿತ್ತು. ಆ ಮೂಲಕ ತಮ್ಮ ಸಮಾಜವನ್ನು ತಿದ್ದುವ ಮಹಿಳೆಯರ ಪರವಾಗಿ ಧ್ವನಿ ಎತ್ತುವ ಕೆಲಸಕ್ಕೆ ಮುಂದಾದರು. ಪುರುಷನಿಗೆ ಇಲ್ಲದ ಕಟ್ಟು ಕಟ್ಟಳೆಗಳು ಸ್ತ್ರೀಯರ ಹಾದಿಯಲ್ಲಿ ಅಡಿಗಡಿಗೆ ಎಡವಿ ಬೀಳುವಂತೆ ಮಾಡಿದ್ದು, ಈ ಲೇಖಕರ ಮನ ಕಲಕಿತ್ತು. ಹುಳುಕುಗಳನ್ನು ಮುಚ್ಚಿಟ್ಟಷ್ಟು ವ್ಯವಸ್ಥೆಯು ಮತ್ತಷ್ಟು ಕೊಳೆಯುತ್ತದೆ ಎಂಬ ಸತ್ಯ ಅರಿತ ಜಾಗೃತ ಮನಸ್ಸು ಅಕ್ಷರ ಕ್ರಾಂತಿಯ ಹಾದಿಹಿಡಿಯಿತು.

ಈ ದೃಷ್ಟಿಯಿಂದ ಸಾರಾ ಅವರು ಮಹತ್ವದ ಲೇಖಕಿಯಾಗಿ ಗುರುತಿಸಲ್ಪಡುತ್ತಾರೆ. ಇವರು ಇಸ್ಲಾಂ ಧರ್ಮದಲ್ಲಿರುವ ಮಹಿಳೆಯರ ಕುರಿತಾದ ಪ್ರಮುಖ ಕಟ್ಟುಪಾಡುಗಳನ್ನು ತಮ್ಮ ಕತೆ, ಕಾದಂಬರಿಗಳ ಮುಖ್ಯ ವಸ್ತುವಾಗಿಸಿಕೊಂಡರು. ಇಂತಹ ಮುಸ್ಲಿಂ ಸಮಾಜದ ಕಟ್ಟುಪಾಡುಗಳೆಂದರೆ ತಲಾಖ್, ಬಹುಪತ್ನಿತ್ವ, ಬುರ್ಖಾ ಪದ್ಧತಿ, ಮೆಹರ್ ಇವೇ ಮೊದಲಾದ ಮಹಿಳೆಯರ ಪಾಲಿನ ಸಮಸ್ಯೆಗಳನ್ನು ಅನಾವರಣಗೊಳಿಸುವುದರೊಂದಿಗೆ ಕಲುಷಿತ ಸಮಾಜದ ಸುಧಾರಣೆಗೆ ಸಾರಾರವರು ಶ್ರಮಿಸುತ್ತಾರೆ.

ತಲಾಖ್ :

'ತಲಾಖ್' ಎಂದರೆ ಇಸ್ಲಾಂ ಧರ್ಮದಲ್ಲಿ ಗಂಡ ಹೆಂಡತಿ ಕೂಡಿಬಾಳಲು ಸಾಧ್ಯವಿಲ್ಲವೆಂದಾಗ ಧಾರ್ಮಿಕವಾಗಿ ಹೊರಬರಬಹುದಾದ ವಿಚ್ಛೇದನ ಪದ್ಧತಿಯಾಗಿದ್ದು, ಇದು ಗಂಡ-ಹೆಂಡತಿಯರ ನಡುವಿನ ಸಂಬಂಧವನ್ನು ರದ್ದುಗೊಳಿಸಲು ಇರುವ ಒಂದು ವಿವಾಹ ವಿಚ್ಛೇದನ ಕ್ರಮವಾಗಿದೆ. ಈ ಪದ್ಧತಿಯು ಮುಸ್ಲಿಂ ಸಮಾಜದಲ್ಲಿ ಏಕಪಕ್ಷೀಯವಾಗಿರುವುದನ್ನು ಗಮನಿಸಬಹುದು. ಈ ಸಮಾಜವು ತಲಾಖ್ ಪದ್ಧತಿಯ

ಮೂಲಕ ಪುರುಷನಿಗೆ ತನಗೆ ಬೇಡವಾದ ಪತ್ನಿಯನ್ನು ವಿಚ್ಛೇದಿಸುವ ಅವಕಾಶ ನೀಡಿದೆ. ಈ ರೀತಿಯ ವಿಚ್ಛೇದನೆಗೆ ಧಾರ್ಮಿಕವಾಗಿ ಅನುಮತಿ ದೊರೆತಿರುವುದರಿಂದ ಮುಸಲ್ಮಾನ ಪುರುಷ ಪ್ರಧಾನ ಸಮಾಜವು ಈ ಅವಕಾಶವನ್ನು ತಮ್ಮ ಮನ ಬಂದಂತೆ ಬಳಸಿಕೊಳ್ಳುತ್ತಿರುವ ಸನ್ನಿವೇಶಗಳು ಸ್ತ್ರೀಯರ ಮೇಲಿನ ದೌರ್ಜನ್ಯಕ್ಕೆ ಸಾಕ್ಷಿಯಾಗಿದೆ.

ಇಸ್ಲಾಂ ಧರ್ಮದಲ್ಲಿ ವಿವಾಹವೆನ್ನುವುದು ಪವಿತ್ರವಾದ ಬಂಧನವಾಗಿ ಪರಿಗಣಿತವಾಗಿಲ್ಲ. ಅದು ಒಬ್ಬ ಸ್ತ್ರೀ ಮತ್ತು ಪುರುಷನ ನಡುವಿನ ಒಪ್ಪಂದದಂತಿದೆ. ಇಷ್ಟವಿದ್ದಷ್ಟು ಕಾಲ ಜೊತೆಯಾಗಿದ್ದು, ಬೇಡವಾದಾಗ ಬೇರೆಯಾಗುವ ಒಂದು ಶಿಥಿಲಾವಸ್ಥೆ ಧರ್ಮದಲ್ಲಿದೆ. ಎಷ್ಟೋ ವರ್ಷಗಳು ಅನ್ಯೋನ್ಯವಾಗಿ ದಾಂಪತ್ಯ ಜೀವನ ನಡೆಸಿದ್ದರೂ, ಮೂರು ಬಾರಿ ತಲಾಖ್ ಹೇಳುವುದರ ಮೂಲಕ ಆ ಹೆಂಡತಿಯನ್ನು ವಿಚ್ಛೇದಿಸುವ ಸುಲಭವಾದ ಅವಕಾಶ ಈ ಧರ್ಮದಲ್ಲಿದೆ. ಹೀಗೆ ಮೂರು ತಲಾಖ್ ಹೇಳಿದ ಬಳಿಕ ಗಂಡ-ಹೆಂಡತಿಯ ಸಂಬಂಧ ಮುರಿದು ಬೀಳುತ್ತದೆ. ಇದು ಪ್ರಸ್ತುತ ಇಸ್ಲಾಂ ಸಮಾಜದಲ್ಲಿ ಆಚರಣೆಯಲ್ಲಿರುವ ತಲಾಖ್‌ನ ರೀತಿ. ಆದರೆ ಷರಿಯತ್ ನಿಯಮದ ಪ್ರಕಾರ ಪತಿಯಾದವನು ಮೂರು ತಲಾಖ್‌ಗಳನ್ನು ಬೇರೆ ಬೇರೆಯಾಗಿ ಒಂದೊಂದು ತಿಂಗಳ ಅಂತರದಲ್ಲಿ ಹೇಳಬೇಕು. ಈ ಕುರಿತ ವಿವರಣೆಯು ಖುರಾನ್‌ನ ಎರಡನೆಯ ಸೂರಾದ (ಅಧ್ಯಾಯ) ೨೩೦ ನೇ ಶ್ಲೋಕದಲ್ಲಿ ದೊರೆಯುತ್ತದೆ.*೧

ಆದರೆ, ಮೂರನೇ ತಲಾಖ್ ಹೇಳುವವರೆಗೂ ಹೆಂಡತಿಯು ಗಂಡನ ಮನೆಯಲ್ಲಿಯೇ ಇರಬೇಕೆಂದು ಖುರಾನ್ ಸ್ಪಷ್ಟಪಡಿಸುತ್ತದೆ. ಈ ನಿಯಮದ ಹಿನ್ನೆಲೆಯಲ್ಲಿ ಒಂದು ಸದುದ್ದೇಶ ಅಡಗಿದೆ. ಮೂರು ತಿಂಗಳವರೆಗೆ ಗಂಡ-ಹೆಂಡತಿ ಒಂದೇ ಮನೆಯಲ್ಲಿದ್ದರೆ ಅವರ ನಡುವೆ ಆ ಅವಧಿಯಲ್ಲಿ ಪುನರ್ ಮೈತ್ರಿ ಸಾಧ್ಯವಾಗಬಹುದೆಂಬ ವಿಶ್ವಾಸದಿಂದ ಖುರಾನ್ ಈ ರೀತಿ ತಾಕೀತು ಮಾಡಿರಬಹುದು. ಈ ಮೂರು ತಿಂಗಳವರೆಗೆ ಜೊತೆಯಲ್ಲಿದ್ದರೂ ಪುನರ್ ಮೈತ್ರಿ ಸಾಧ್ಯವಾಗದಿದ್ದರೆ ಅಂತಹ ಸಂದರ್ಭದಲ್ಲಿ ಆಕೆ ಬೇರೊಬ್ಬನನ್ನು ವಿವಾಹವಾಗಬಹುದು ಎಂಬುದು ಖುರಾನ್‌ನ ಉದ್ದೇಶವಾಗಿದೆ. ಆದರೆ, ಧರ್ಮಗುರುಗಳ ಪ್ರಕಾರ ಪತಿಯಾದವನು ಮೂರು ಬಾರಿ ತಲಾಖ್ ಎಂದು ಒಂದೇ ಅವಧಿಯಲ್ಲಿ ಉಚ್ಛರಿಸಿದರೂ ವಿಚ್ಛೇದನ ಪೂರ್ತಿಯಾಗುತ್ತದೆ.

"Marrages are made in haven" ಎಂಬ ಷೇಕ್ಸ್‌ಪಿಯರ್‌ನ ಒಂದು ಮಾತಿದೆ. ಆದರೆ 'ತಲಾಖ್' ಎಂಬ ಮೂರಕ್ಷರಗಳನ್ನು ಮೂರು ಬಾರಿ ಉಚ್ಛರಿಸುವುದರಿಂದ ಸ್ವರ್ಗದಲ್ಲಿ ನಿಶ್ಚಯವಾದ ಗಂಡ ಹೆಂಡತಿಯ ಸಂಬಂಧ ಕಡಿದು ಬೀಳುವಷ್ಟು ದುರ್ಬಲವಾಗಿರುವುದು ಇಸ್ಲಾಂ ಧರ್ಮದಲ್ಲಿ ಮಾತ್ರ! ಒಂದು ವೇಳೆ ಮೂರನೇ ತಲಾಖ್

ಆದ ಮೇಲೆ ಆ ಸಂಬಂಧವನ್ನು ಪುನಃ ಕೂಡಿಸಬೇಕಾದರೆ ಆಕೆ ಬೇರೊಬ್ಬನನ್ನು ವಿವಾಹವಾಗಿ ವಿಚ್ಛೇದನ ಪಡೆದು ಬಂದವಳಾಗಿರಬೇಕು. ಅಂತಹ ಸಂದರ್ಭದಲ್ಲಿ ಮಾತ್ರ ಪುನರ್ ವಿವಾಹವಾಗಬಹುದೆಂದು ಖುರಾನ್ ತಾಕೀತು ಮಾಡಿತು. ಅಂದರೆ, ಗಂಡನಾದವನು ತಲಾಖ್ ನೀಡುವಾಗ ಚೆನ್ನಾಗಿ ಯೋಚಿಸಿ, ತಾನು ಎಂದೆಂದಿಗೂ ಈ ಹೆಂಡತಿಯೊಡನೆ ಬಾಳಲಾರೆ ಎಂಬ ದೃಢನಿರ್ಧಾರದೊಡನೆ ಈ ಮೂರನೇ ತಲಾಖ್ ನೀಡಬೇಕು ಎಂಬ ಅರ್ಥ ಖುರಾನ್ ಶ್ಲೋಕದ್ದು. ಇಂತಹ ಒಂದು ಕಠಿಣ ನಿಯಮವಿದ್ದರೆ ಒಂದು ದಾಂಪತ್ಯ ಅಷ್ಟು ಸುಲಭದಲ್ಲಿ ಮುರಿದು ಬೀಳಲಾರದು ಎಂಬ ಸದುದ್ದೇಶದಿಂದ ಪ್ರವಾದಿಗಳು ಹೀಗೆ ಬೋಧಿಸಿರಬಹುದು. ಆದರೆ, ಅವಕಾಶವಾದಿಯಾದ ಪುರುಷ ವ್ಯವಸ್ಥೆಯು ಇಲ್ಲಿಯೂ ಹೆಣ್ಣನ್ನೇ ಬಲಿಪಶುವಾಗಿಸಿತು. ಆಕೆಯನ್ನು ಆಟದ ಬೊಂಬೆಯಂತೆ ಪರಿಗಣಿಸಹೊರಟಿತು.

ಯಾವುದೋ ಕಾರಣಕ್ಕೆ ವಿಚ್ಛೇದಿತರಾದ ಗಂಡ ಹೆಂಡತಿಯರು ಎಲ್ಲಾ ಭಿನ್ನಾಭಿಪ್ರಾಯಗಳನ್ನು ಮರೆತು ಮತ್ತೆ ಒಂದಾಗಬಯಸಿದರೆ, ಆಗ ಆ ಹೆಂಡತಿಯು ಬೇರೊಬ್ಬನನ್ನು ವಿವಾಹವಾಗಿ ಬಂದವಳಾಗಿರಬೇಕು ಎಂಬ ನಿರ್ಬಂಧವನ್ನು ಆಕೆಯ ಮೇಲೆ ಹೇರಿತು. ಈ ಪದ್ಧತಿಯು ಅರಬ್ ದೇಶದಲ್ಲಿ ಪೈಗಂಬರರ ಹುಟ್ಟಿಗೂ ಮೊದಲು ರೂಢಿಯಲ್ಲಿತ್ತೆಂದು ಹೇಳಲಾಗುತ್ತಿದೆ.[3] ಆದರೆ ಮೂರು ಬಾರಿ ತಲಾಖ್‌ಗಳನ್ನು ಬೇರೆಬೇರೆಯಾಗಿ ಮೂರು ತಿಂಗಳಲ್ಲಿ ಹೇಳಬೇಕೆಂಬ ಖುರಾನಿನ ವಾಕ್ಯವನ್ನು ಗಾಳಿಗೆ ತೂರಿ ಒಂದೇ ಬಾರಿ ಮೂರು ತಲಾಖ್ ಹೇಳುವ ಅವಿವೇಕದ ನಿಯಮವನ್ನು ಜಾರಿಗೆ ತರಲಾಯಿತು. ಇದೇ ಒಂದು ಅಂಶವನ್ನು ಕೇಂದ್ರವಾಗಿರಿಸಿಕೊಂಡು ಲೇಖಕಿ ಸಾರಾರವರು 'ಚಂದ್ರಗಿರಿಯ ತೀರದಲ್ಲಿ' ಎಂಬ ಕಾದಂಬರಿಯನ್ನು ರಚಿಸಿದ್ದಾರೆ. ಈ ಕಾದಂಬರಿಯಲ್ಲಿ ಈ ಪದ್ಧತಿಯ ಕುರಿತು ಸಂಪೂರ್ಣ ಚಿತ್ರಣ ದೊರೆಯುತ್ತದೆ.

ಈ ಕಾದಂಬರಿಯ ನಾಯಕಿ ನಾದಿರಾಳ ತಂದೆಯ ಕುತಂತ್ರದಿಂದಾಗಿ ರಶೀದ್ ಮತ್ತು ನಾದಿರಾ ವಿಚ್ಛೇದಿತರಾಗುತ್ತಾರೆ. ನಂತರದಲ್ಲಿ ನಿಜಾಂಶ ತಿಳಿದು ತಮ್ಮ ತಪ್ಪಿನ ಅರಿವಾಗಿ ಮತ್ತೆ ಒಂದಾಗ ಬಯಸುತ್ತಾರೆ. ಆಗ ಧಾರ್ಮಿಕ ತೊಡಕೊಂದು ಎದುರಾಗುತ್ತದೆ. ಈ ಪರಿಸ್ಥಿತಿಯಲ್ಲಿ ಅವರು ಒಂದಾಗಬೇಕಾದರೆ ನಾದಿರಾ ಒಂದು ದಿನದ ಮಟ್ಟಿಗಾದರೂ ಬೇರೊಬ್ಬನನ್ನು ಮದುವೆಯಾಗಿ, ಆತನೊಡನೆ ಒಂದು ರಾತ್ರಿಯನ್ನು ಕಳೆಯಬೇಕಾಗುತ್ತದೆ. ಆದರೆ ಗಂಡನಾದ ರಶೀದ್‌ನನ್ನು ಬಿಟ್ಟು ಬೇರೊಬ್ಬನನ್ನು ಕಣ್ಣೆತ್ತಿಯೂ ನೋಡಿರದ ನಾದಿರಾ, ಈ ಒಂದು ಗಳಿಗೆಯಲ್ಲಿ ಭೀಕರ ಸಿಡಿಲೆರಗಿದಂತಾಗಿ ಆಘಾತಕ್ಕೊಳಗಾಗುತ್ತಾಳೆ. 'ಯಾರೋ ಒಬ್ಬನ ಜೊತೆ ಒಂದು ರಾತ್ರಿ ಕಳೆಯಲು, ಅವನು ವಿಧಿ ಪೂರ್ವಕವಾಗಿ ತನ್ನನ್ನು ವಿವಾಹ ಮಾಡಿಕೊಂಡವನೇ ಆದರೂ ತನ್ನಿಂದ ಸಾಧ್ಯವಿಲ್ಲ' ಎಂದು ದೃಢನಿರ್ಧಾರ

ಕೈಗೊಳ್ಳುತ್ತಾಳೆ. ಆದರೆ ಈ ಪದ್ಧತಿಯ ಅನುಸರಣೆಯನ್ನು ಹೊರತು ಪಡಿಸಿ, ರಶೀದ್‌ನನ್ನು ಪಡೆದುಕೊಳ್ಳಲು ಬೇರಾವ ದಾರಿಗಳೂ ಇರುವುದಿಲ್ಲ. ಇವರಿಬ್ಬರೂ ಈ ಒಂದು ಕ್ರೂರ ಪದ್ಧತಿಯನ್ನು ಖಂಡಿಸುತ್ತಾರೆ. ಆದರೆ, ಇವರ ಮಾತುಗಳಿಗಿಂತ ಧರ್ಮಾನುಸರಣೆಯೇ ಮುಖ್ಯವಾಗುತ್ತದೆ. ಈ ಸಂದರ್ಭದಲ್ಲಿ ರಶೀದ್‌ನ ತಾಯಿ ಹೇಳುವ ಮಾತು 'ನಿನಗೆ ನಾದಿರಾಳೇ ಬೇಕೆಂದರೆ ಈ ನಿಯಮವನ್ನು ಅವಳು ಅನುಸರಿಸಲಿ, ಇಂತಹ ಸಂಸ್ಕೃತಿ ನಡೆದೇ ಇಲ್ಲವೆಂದೇನೂ ಇಲ್ಲವಲ್ಲ? ಯಾರಿಗೂ ತಿಳಿಯದಂತೆ ಒಂದು ರಾತ್ರಿಗೆ ಒಂದು ಮದುವೆ ನಡೆಯಲಿ, ನಾನು ಚಿಕ್ಕವಳಿರುವಾಗ ನಮ್ಮೂರಲ್ಲಿ ಅಂತಹುದೊಂದು ಮದುವೆ ನಡೆದಿತ್ತು"[3] ಎಂದು ಹೇಳಿ ತಾನು ಕಂಡ ನಿದರ್ಶನಗಳೊಡನೆ ಈ ನಿಮಯನುಸರಣೆಯನ್ನು ಬಲವಾಗಿ ಬೆಂಬಲಿಸುತ್ತಾರೆ. ಇಲ್ಲಿ ನಾದಿರಾಳು ಪರಿಸ್ಥಿತಿಯ ಕೈಗೊಂಬೆಯಾಗಿದ್ದಾಳೆ.

ಆದರೆ, ಈ ಅಮಾನವೀಯ ನಿಯಮಕ್ಕೆ ಒಪ್ಪಿಕೊಳ್ಳಲು ಸಿದ್ಧಳಿಲ್ಲದ ನಾದಿರಾ ತನ್ನನ್ನು ಬಲಿಪಶುವಾಗಿಸಿದ ಮಸೀದಿಯ ಕೊಳದಲ್ಲಿಯೇ ಬಿದ್ದು ಅಂತ್ಯ ಕಾಣುತ್ತಾಳೆ. ಈ ಕಾದಂಬರಿಯು ಮುಸ್ಲಿಂ ಜನಾಂಗದ ಮೌಢ್ಯಕ್ಕೆ ಕನ್ನಡಿ ಹಿಡಿದಂತಿದೆ. ಮಣಿಪುರದ ಮೌಲ್ವಿಗಳು ಹೇಳುವ ಹಾಗೆ 'ಕುರಾನ್ ಹೇಳಿರುವುದು ಒಂದಾದರೆ, ಇವರು ಮಾಡುತ್ತಿರುವುದು ಇನ್ನೊಂದು'. ಇವರ ಈ ಧೋರಣೆಯೇ ನಾದಿರಾಳನ್ನು ಮಸೀದಿಯ ಬಾವಿ ನುಂಗುವಂತೆ ಮಾಡುತ್ತದೆ. ಈ ಕಾದಂಬರಿಯ ನಾದಿರಾಳು ಅದೆಷ್ಟೋ ಅಮಾಯಕ ಹೆಣ್ಣುಗಳ ಪ್ರತೀಕವಾಗಿದ್ದಾಳೆ.

ತಲಾಖ್ ಹೇಳಿ ಅನ್ಯಾಯ ಮಾಡಿದ ಪುರುಷನಿಗೆ ಇಂತಹ ಯಾವುದೇ ನಿರ್ಬಂಧವಿಲ್ಲದೇ ಹೋದರೂ, ನಿರಪರಾಧಿ ಸ್ತ್ರೀಯರ ಮೇಲೆ ಇಂತಹ ನಿರ್ಬಂಧಗಳ ಹೊರೆಯನ್ನು ಹೇರಲಾಗಿದೆಯೆಂಬುದು ಗಮನಾರ್ಹ ಅಂಶ. ಇದೇ ಒಂದು ಕಾರಣಕ್ಕಾಗಿ ಒಮ್ಮೆ ಮುರಿದ ಮದುವೆಗಳು ಪುನಃ ಕೂಡುವುದು ತೀರಾ ಅಪರೂಪವಾಗುತ್ತಿವೆ.

ಈ ಕ್ರೂರ ಪದ್ಧತಿಗೆ ಲೇಖಕಿ ಪರಿಹಾರವೆಂಬಂತೆ ಒಂದು ಅಂಶವನ್ನು ಸೂಚಿಸುತ್ತಾರೆ. ಖುರಾನಿನ ನಿಯಮದಂತೆ ಮೂರು ತಿಂಗಳ ಅವಧಿಯಲ್ಲಿ ಪ್ರತ್ಯೇಕ ತಲಾಖ್ ನೀಡುವುದು ಹಾಗೂ ಆ ಅವಧಿಯಲ್ಲಿ ಗಂಡ ಹೆಂಡತಿ ಒಂದೇ ಮನೆಯಲ್ಲಿರಬೇಕೆಂಬ ನಿಯಮವನ್ನು ಕಡ್ಡಾಯಗೊಳಿಸಬೇಕು. ಅಲ್ಲದೆ ಮೂರು ತಲಾಖ್‌ಗಳನ್ನು ಒಂದೇ ಬಾರಿಗೆ ಹೇಳುವ ಈ ಕ್ರಮವೇ ನಿಯಮಬಾಹಿರವೆಂದು, ಧರ್ಮಬಾಹಿರವೆಂದೂ ಒಂದು ವಾದವನ್ನು ಮುಂದಿಟ್ಟುಕೊಂಡು ಆ ಗಂಡ ಹೆಂಡತಿಯನ್ನು ರಾಜಿ ಮಾಡಿಸುವುದು ಈ ಸಮಸ್ಯೆಗೆ ಒಂದು ಉತ್ತಮ ಪರಿಹಾರವಾಗಿದೆ ಎಂದು ಸಾರಾ ಅವರು ಬಹಿರಂಗವಾಗಿ ಆಗ್ರಹಪಡಿಸುತ್ತಾರೆ. ಆದರೆ, 'ಧ್ವನಿಯೇ ಇಲ್ಲದ ಗಂಡಸರ ಕೈಗೊಂಬೆಗಳಾದ ನಮ್ಮ

ಮಹಿಳೆಯರು ಈವರೆಗೆ ಇಂತಹ ವಾದವನ್ನು ಮುಂದೊಡ್ಡಿಲ್ಲ. ಈ ಇಪ್ಪತ್ತನೇ ಶತಮಾನದಲ್ಲಿಯೂ ನಾವು ಮೂರ್ಖರಂತೆ ವರ್ತಿಸುವುದನ್ನು ಬಿಟ್ಟು, ಈ ದಿಸೆಯಲ್ಲಿ ಯೋಚಿಸಿ ಇಂತಹ ಒಂದು ಪ್ರಯತ್ನವನ್ನು ಮಾಡಿದರೆ, ಎಷ್ಟೋ ಮುರಿದ ಮದುವೆಗಳು ಯಾವ ತಡೆಯೂ ಇಲ್ಲದೆ ಪುನಃ ಕೂಡಿಕೊಳ್ಳಲು ಸಾಧ್ಯವಾಗಬಹುದು. ಇಂತಹ ಸುಧಾರಣೆಗಳೆಲ್ಲ ಆಗಬೇಕಾದರೆ ಮುಸ್ಲಿಂ ಸಮಾಜದ ಸ್ತ್ರೀ ಪುರುಷರೆಲ್ಲರೂ ವಿದ್ಯಾವಂತರಾಗಬೇಕು ಮತ್ತು ಧರ್ಮಗ್ರಂಥಗಳ ಕುರಿತು ಸರಿಯಾದ ಅಧ್ಯಯನ ಮತ್ತು ಸಂಶೋಧನೆಗಳು ನಡೆಯಬೇಕು ಹಾಗೂ ಇಂದಿನ ಸಮಾಜಕ್ಕೆ ಒಪ್ಪುವ ರೀತಿಯಲ್ಲಿ ಕ್ರೂರ ನಿಯಮಗಳನ್ನು ಪರಿಷ್ಕರಿಸುವ ಒಂದು ಯೋಜನೆ ಅತ್ಯಗತ್ಯವಾಗಿ ಆಗಲೇಬೇಕಾಗಿದೆ ಎಂದು ಲೇಖಕಿ ಸಾರಾ ಅವರು ತಮ್ಮ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯ ಮುನ್ನುಡಿಯಲ್ಲಿ ಪ್ರತಿಭಟನಾತ್ಮಕವಾದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾರೆ.

ಮತ್ತೊಂದು ಪ್ರಮುಖ ಅಂಶವೆಂದರೆ, ಪುರುಷನಾದವನು ತನ್ನಿಷ್ಟದಂತೆ ಮೂರು ಬಾರಿ ತಲಾಖ್ ಉಚ್ಚರಿಸಿ ಪತ್ನಿಯನ್ನು ಹೊರಗಟ್ಟಬಹುದಾದರೂ, ಮಹಿಳೆಗೆ ಈ ಯಾವುದೇ ರೀತಿಯ ಅವಕಾಶಗಳಿಲ್ಲ. ಆದರೆ, ಗಂಡನು ಕುಷ್ಠರೋಗ ಪೀಡಿತನಾಗಿದ್ದರೆ, ಹುಚ್ಚನಾಗಿದ್ದರೆ, ನಪುಂಸಕನಾಗಿದ್ದರೆ ಅಥವಾ ಕೆಲವು ಕಾಲದವರೆಗೆ ಆತನಿಂದ ಹೆಂಡತಿಗೆ ಜೀವನಾಂಶ ದೊರೆಯದಿದ್ದರೆ, ಅಂತಹ ಸಂದರ್ಭದಲ್ಲಿ ಆಕೆ ಧರ್ಮಗುರುಗಳ ಬಳಿಗೆ ದೂರನ್ನೊಯ್ದು ಪತಿಯಿಂದ ವಿಚ್ಛೇದನೆ ಪಡೆಯಬಹುದು ಹಾಗೂ ಧರ್ಮಗುರುಗಳ ಮುಖಾಂತರವೇ ಈ ವಿಚ್ಛೇದನೆ ಪಡೆಯಬೇಕಾಗುತ್ತದೆ.[೪] ಈ ಹಂತದಲ್ಲಿ ಗಮನಿಸಬೇಕಾದ ಅಂಶವೆಂದರೆ, ಸ್ತ್ರೀಯರು ಪೀಡಿತ ಪತಿಯಿಂದ ವಿಚ್ಛೇದನ ಪಡೆಯಲು ಧರ್ಮಗುರುಗಳಿಗೆ ದೂರುಕೊಟ್ಟು ತಲಾಖ್ ಪಡೆಯಬೇಕಾಗುತ್ತದೆ. ಇಲ್ಲಿ ಗಂಡು ಹೆಣ್ಣಿನ ನಡುವೆ ಇರುವ ತಾರತಮ್ಯಗಳನ್ನು ಗಮನಿಸಬಹುದು.

ಕೆಲವೊಂದು ಸಂದರ್ಭಗಳಲ್ಲಿ ತಲಾಖ್‌ಬೇಕೆಂದು ಹಲವು ವರ್ಷಗಳವರೆಗೆ ನ್ಯಾಯಾಲಯದಲ್ಲಿ ಹೋರಾಡಿ, ಕೊನೆಗೂ ತಲಾಖ್ ಸಿಗದೆ ಆ ಗಂಡನೊಡನೆಯೇ ಬದುಕಬೇಕಾಗಿ ಬಂದ ಹಲವು ಉದಾಹರಣೆಗಳೂ ಇವೆ. ಇನ್ನೂ ಒಂದು ವಿಷಯವೇನೆಂದರೆ ವಿಚ್ಛೇದಿತ ಮಹಿಳೆಗೆ 'ಮತಾಃ' ಅಂದರೆ ಆಕೆಯ ಮುಂದಿನ ಬದುಕಿಗೆ ಹಾದಿ ಮಾಡಿಕೊಡುವಂತಹ ಇಡುಗಂಟೊಂದನ್ನು ಆಕೆಗೆ ನೀಡಬೇಕೆಂದು ಖುರಾನ್ ಸ್ಪಷ್ಟವಾಗಿ ಉಲ್ಲೇಖಿಸುತ್ತದೆ. ಆದರೆ ಈ ನಿಯಮವೂ ಕೂಡ ಇಂದು ಆಚರಣೆಯಲ್ಲಿಲ್ಲ. ಪುರುಷ ಸಮಾಜ ತನಗೆ ಅನುಕೂಲವಾಗುವಂತಹ ನಿಯಮಗಳನ್ನು ಮಾತ್ರ ಅನುಸರಿಸುತ್ತದೆಯೇ ಹೊರತು, ತನಗೆ ತೊಂದರೆಯಾಗುವ ಯಾವ ನೀತಿ–ನಿಯಮಗಳನ್ನೂ ಅನುಸರಿಸುವುದಿಲ್ಲ.

ಜಗತ್ತು ಇಪ್ಪತ್ತೊಂದನೇ ಶತಮಾನದಲ್ಲಿ ಓಟವನ್ನಾರಂಭಿಸಿರುವಾಗ ಮುಸ್ಲಿಂ ಮಹಿಳೆಯರನ್ನು ಏಳನೇ ಶತಮಾನಕ್ಕೆ ಹಿಂದೂಡುವಂತಹ ಒಂದು ಪ್ರವೃತ್ತಿ ಬೆಳೆಯುತ್ತಿರುವುದು ವಿಷಾದನೀಯ. ಇಂತಹ ಪದ್ಧತಿಗಳ ವಿಚಾರ ಬಂದಾಗ "ನಮ್ಮ ಸಮಾಜದಲ್ಲಿ ಇಂತಹ ಪದ್ಧತಿ ಇಲ್ಲವೇ ಇಲ್ಲ" ಎಂದು ವಾದಿಸುವ ಪುರುಷರಿದ್ದಾರೆ. ಆದರೆ, ಇಂದು ಪ್ರಪಂಚದ ತುಂಬಾ ಅಸಂಖ್ಯಾತ ಮುಸ್ಲಿಂ ಸ್ತ್ರೀಯರು ಈ ಸುಲಭದ ವಿವಾಹ ವಿಚ್ಛೇದನದಿಂದಾಗಿ ನರಳುತ್ತಿರುವ ವರದಿಗಳನ್ನು ಕಾಣಬಹುದು.

ಮಾವನಿಂದ ಅತ್ಯಾಚಾರಕ್ಕೊಳಗಾದ ಇಮ್ರಾನ ಎಂಬ ಮಹಿಳೆಗೆ ಮಾವನನ್ನೇ ಮದುವೆಯಾಗಿ ಐದು ಮಕ್ಕಳ ತಂದೆಯಾದ ತನ್ನ ಗಂಡನನ್ನೇ ಮಗನೆಂದು ತಿಳಿದುಕೊಂಡು ಬದುಕಬೇಕೆಂದು ಮತಪಂಡಿತರು ಫತ್ವಾ ಹೊರಡಿಸುತ್ತಾರೆ. ಗಂಡನೋರ್ವನು ಕುಡಿದ ಅಮಲಿನಲ್ಲಿ ರಾತ್ರಿ ಹೇಳಿದ ತಲಾಖ್‌ನ್ನು ಆಧಾರವಾಗಿಟ್ಟುಕೊಂಡು ಈ ಮತ ಪಂಡಿತರು ಮರುದಿನದಿಂದ ಅವರು ಪತಿಪತ್ನಿಯರಾಗಿ ಮುಂದುವರಿಯಲು ತಡೆಯೊಡ್ಡುತ್ತಾರೆ. ಮತ್ತೊಂದು ಇಂತಹ ಘಟನೆಯಲ್ಲಿ ಆ ದಂಪತಿಗಳು ಮುಸ್ಲಿಂ ಸಮಾಜದಿಂದಲೇ ಹೊರಬಂದು ಬದುಕಲು ತೀರ್ಮಾನಿಸಿದ ಉದಾಹರಣೆಗಳಿವೆ. ಇವರೆಲ್ಲರೂ ಕೂಡಾ ಪುರುಷ ನಿರ್ಮಿತ ಸಮಾಜದ ನಿಯಮಗಳಡಿಯಲ್ಲಿ ಸಿಕ್ಕು ನರಳುತ್ತಿರುವವರೇ ಆಗಿದ್ದಾರೆ. ಈ ನಿದರ್ಶನಗಳಿಂದ ತಲಾಖ್ ಪದ್ಧತಿಯ ಕ್ರೂರ ಮುಖದ ಪರಿಚಯ ಓದುಗರಿಗಾಗುವುದಷ್ಟೇ ಅಲ್ಲದೇ ಅವರನ್ನು ಬೆಚ್ಚಿ ಬೀಳುವಂತೆ ಮಾಡಿದೆ.

ಮೆಹರ್ :

ಈ ಸಂದರ್ಭದಲ್ಲಿ ಗಮನ ಸೆಳೆಯುವ ಮತ್ತೊಂದು ವಿಚಾರವೆಂದರೆ 'ಮೆಹರ್'. ಇಸ್ಲಾಂ ಧಾರ್ಮಿಕ ನಿಯಮದ ಪ್ರಕಾರ 'ಮೆಹರ್' ಎಂಬುದು ಪುರುಷನು ವಿವಾಹದ ಮೊದಲ ದಿನ ವಧುವಿಗೆ ನೀಡಬೇಕಾದ ಉಡುಗೊರೆ. ಅದು ವಸ್ತ್ರಗಳು, ಚಿನ್ನಾಭರಣ, ಹಣದ ರೂಪದಲ್ಲಿ ಇರಬಹುದು. ಈ ವಿವಾಹ ಒಪ್ಪಂದಕ್ಕೆ ಮುನ್ನವೇ ಹೆಂಡತಿಯಾಗಲಿರುವವಳು ತನಗೆ ಇಷ್ಟವಿರುವ ಷರತ್ತುಗಳನ್ನೊಡ್ಡಬಹುದು. ಉದಾಹರಣೆ : ತನಗೆ ಎಷ್ಟು ಮೆಹರ್ ಬೇಕೆಂದು ತೀರ್ಮಾನಿಸಬಹುದು. ವಿವಾಹದ ನಂತರ ಜೊತೆಯಲ್ಲಿ ಬಾಳಲಾಗದಿದ್ದರೆ ವಿಚ್ಛೇದನೆ ನೀಡುವ ಹಕ್ಕು ತನಗಿರಬೇಕೆಂದು ಷರತ್ತು ಮುಂದಿಡಬಹುದು. ಹಾಗೆಯೇ ಆತನ ದ್ವಿತೀಯ ವಿವಾಹಕ್ಕೂ ತನ್ನ ಅನುಮತಿಬೇಕೆಂದು ಷರತ್ತನ್ನು ಆಕೆ ವಿಧಿಸಬಹುದು. ಇದು ಇಸ್ಲಾಂ ಧರ್ಮದಲ್ಲಿರುವ ನಿಯಮ. ಆದರೆ ಈ ರೀತಿಯ ಷರತ್ತುಗಳನ್ನೊಡ್ಡಿ ವಿವಾಹವಾಗಬಯಸುವ ಹೆಣ್ಣನ್ನು ಮದುವೆಯಾಗಲು ಯಾವ ಗಂಡೂ ಮುಂದೆ ಬರುವುದಿಲ್ಲ. ಬದಲಾಗಿ ಆಕೆಯ ಸಮಾಜ 'ಗಂಡುಬೀರಿ' ಎಂಬ ಬಿರುದನ್ನು

ಕೊಡುತ್ತದೆ. ಇದರ ನಂತರ ಆಕೆ ಬಾಳುಪೂರ್ತಿ ವಿವಾಹವಿಲ್ಲದೆ ಬದುಕು ಕಳೆಯಬೇಕಾಗುತ್ತದೆ. ಮತ್ತೊಂದು ವಿಚಾರವೆಂದರೆ, ಹೆಣ್ಣುಮಕ್ಕಳಿಗೆ ಬಾಲ್ಯದಲ್ಲಿಯೇ ವಿವಾಹ ಮಾಡಿ ಮುಗಿಸುವುದರಿಂದ ಆಕೆಗೆ ಷರತ್ತಿನ ವಿಚಾರವಾಗಿಯೇ ಆಗಲೀ, ಮೆಹರ್‌ನ ವಿಚಾರವಾಗಿಯೇ ಆಗಲೀ ಏನೂ ತಿಳಿದಿರುವುದಿಲ್ಲ. ಹೀಗಾದಾಗ ಷರತ್ತುಗಳನ್ನು ಮುಂದೊಡ್ಡುವ ಪ್ರಶ್ನೆಯೇ ಬರುವುದಿಲ್ಲ. ಇಲ್ಲಿಯೂ ಪುರುಷನದೇ ಪ್ರಭಾವಳಿಯನ್ನು ಕಾಣಬಹುದು. ಈ ಎಲ್ಲಾ ಸಮಸ್ಯಾತ್ಮಕ ಅಂಶಗಳನ್ನೂ ಸಾರಾ ಅವರು ತಮ್ಮ ಕಾದಂಬರಿಗಳಲ್ಲಿ ಅತ್ಯಂತ ಸ್ಪಷ್ಟವಾಗಿ ಬಿಡಿಸಿಡುತ್ತಾರೆ.

ತಲಾಖ್ ವಿಷಯಕ್ಕೆ ಸಂಬಂಧಿಸಿದಂತೆ, 'ವಜ್ರಗಳು' ಕಾದಂಬರಿಯ ನಾಯಕಿ ನಫೀಸಾ ಸರಿಯಾಗಿ ಸೀರೆಯುಡಲೂ, ರವಿಕೆ ತೊಡಲೂಬಾರದ ಹಳ್ಳಿಯ ಕಪ್ಪು ಹುಡುಗಿ ಎಂಬ ಕಾರಣಕ್ಕೆ ಒಂದು ಗಂಡುಮಗುವಿದ್ದರೂ, ಮೊದಲ ಗಂಡ ಬದ್ರುದ್ದೀನ್ ತಲಾಖ್ ನೀಡುತ್ತಾನೆ. ಈ ಎಲ್ಲಾ ಸಂಕಟ, ನೋವುಗಳಿಂದ ಹೊರಬರುತ್ತಿದ್ದಂತೆಯೇ ಐವತ್ತೈದು ವರ್ಷದ ಉಸ್ಮಾನ್ ಹಾಜಿಯವರನ್ನು ಪುನರ್ ವಿವಾಹವಾಗುವ ನಸೀಮಾಳು ಮತ್ತೆ ಮೋಸ ಹೋಗುತ್ತಾಳೆ. ಗಂಡ ಉಸ್ಮಾನ್ ಹಾಜಿ ಅರೆಪ್ರಜ್ಞಾವಸ್ಥೆಯಲ್ಲಿ ಮಲಗಿದ್ದಾಗ, ತನ್ನ ತಾಯಿಯ ಅನಾರೋಗ್ಯದ ವಿಚಾರ ತಿಳಿದು ತವರಿಗೆ ಹೊರಡುತ್ತಾಳೆ. ಹಾಗೆ ಹೋದವಳಿಗೆ ಅವಳ ಹಿಂದೆಯೇ ಹೋಗಿ ತಲುಪುವುದು. ಆಕೆಯ ತಲಾಖ್ ನೀಡಿದ ಪತ್ರ. ಅನಾರೋಗ್ಯದಿಂದ ಹಾಸಿಗೆ ಹಿಡಿದು ಮಲಗಿದ್ದ ಉಸ್ಮಾನರ ಹೆಬ್ಬೆಟ್ಟಿನ ಸಹಿಯನ್ನು ಬಲವಂತವಾಗಿ ಹಾಕಿಸಿ ಅವರ ಮಗ ಹುಸೈನನು ವಂಚನೆಯಿಂದ ಬರೆದು ಕಳುಹಿಸಿದ ತಲಾಖ್ ಪತ್ರ ಅದಾಗಿರುತ್ತದೆ. ಇದೆಲ್ಲವನ್ನೂ ಅರಿತಿದ್ದರೂ ಆಕೆ ಮತ್ತು ಆಕೆಯ ಸಮಾಜ ಏನೂ ಮಾಡಲಾಗದೆ ಅಸಹಾಯಕರಾಗುತ್ತಾರೆ. ತಲಾಖ್ ಎಂಬುದು ಗಂಡನ ಹೆಸರಿನೊಡನೆ ಅದು ಹೇಗೆ ಬಂದರೂ ಸಿಂಧುವಾಗುವಂತಹ ಒಂದು ನಿಯಮ ವಿರುವುದರಿಂದಲೇ, ಈ ರೀತಿಯ ಅನ್ಯಾಯ, ಶೋಷಣೆಗಳು ಹೆಣ್ಣಿನ ಮೇಲೆ ನಿರಂತರವಾಗಿ ನಡೆಯುತ್ತಿವೆ.

ಒಟ್ಟಾರೆ ತಲಾಖ್‌ನ್ನು ಒಂದು ಅಸ್ತ್ರವನ್ನಾಗಿ ಮಾಡಿಕೊಂಡ ಮುಸ್ಲಿಂ ಪುರುಷ ಸಮಾಜ ಮಹಿಳೆಯರನ್ನು ಶೋಷಿಸ ಹೊರಟಿರುವುದು ಅಮಾನವೀಯ ಕೃತ್ಯವಾಗಿದೆ.

ಬಹುಪತ್ನಿತ್ವ :

ಇಸ್ಲಾಂ ಧರ್ಮದಲ್ಲಿ ಪುರುಷನು ನಾಲ್ಕು ಜನ ಹೆಂಡತಿಯರನ್ನು ಹೊಂದುವುದಕ್ಕೆ ಕಾನೂನಿನ ಸಮ್ಮತಿ ಇದೆ. ಈ ಕುರಿತು ಖುರಾನಿನಲ್ಲಿ ಸ್ಪಷ್ಟವಾದ ವಾಕ್ಯವಿದೆ. 'ನಿಮಗೆ ಉತ್ತಮವೆಂದು ತೋರುವ ಎರಡೋ, ಮೂರೋ, ನಾಲ್ಕೋ ಹೆಣ್ಣುಗಳನ್ನು ವಿವಾಹವಾಗಿರಿ,

ಅದಕ್ಕಿಂತ ಹೆಚ್ಚಾಗಬಾರದು. ಆದರೆ, ಅವರ ಮಧ್ಯದಲ್ಲಿ ನ್ಯಾಯ ಪರಿಪಾಲನೆ ಸಾಧ್ಯವಿಲ್ಲವಾದರೆ ಓರ್ವಳನ್ನು ಮಾತ್ರ ವಿವಾಹವಾಗಿರಿ. ಇಲ್ಲವಾದರೆ ಗುಲಾಮ ಸ್ತ್ರೀಯರಿಗೆ ಸೀಮಿತಗೊಳಿಸಿರಿ ಅಥವಾ ಸೆರೆಸಿಕ್ಕ ಸ್ತ್ರೀಯರನ್ನು ಸ್ವೀಕರಿಸಿರಿ. ಏಕೆಂದರೆ ಅವರಿಗೆ ಪತ್ನಿಯರಿಗಿರುವ ಯಾವ ಹಕ್ಕುಗಳೂ ಇರುವುದಿಲ್ಲ. (ಸೂರಾ ಉನ್ನೀಸಾದ ಮೂರನೇ ಶ್ಲೋಕ)"[3] ಈ ಮೇಲಿನ ವಾಕ್ಯಗಳನ್ನು ಗಮನಿಸಿದರೆ ಪುರುಷನಿಗೆ ಹಲವು ಜನ ಹೆಂಡತಿಯರನ್ನು ಕಟ್ಟಿಕೊಳ್ಳಲು ಧಾರ್ಮಿಕವಾಗಿ ದೊರೆತ ಅನುಮತಿಯ ವಿವರ ತಿಳಿಯುತ್ತದೆ.

ಹಾಗೆಂದ ಮಾತ್ರಕ್ಕೆ ನಾಲ್ಕಕ್ಕಿಂತ ಹೆಚ್ಚು ಬಾರಿ ವಿವಾಹವಾಗಬಾರದೆಂದೇನೂ ಇಲ್ಲ. ಆತನು ಐದನೆಯವಳನ್ನೂ ವಿವಾಹವಾಗಬಹುದು. ಆಗ ಉಳಿದ ನಾಲ್ವರಲ್ಲಿ ಒಬ್ಬಳನ್ನು ಮೂರು ಬಾರಿ ತಲಾಖ್ ಹೇಳಿ ಹೊರಗಟ್ಟಿದರಾಯಿತು. ನಂತರ ಆಕೆಗೆ ಮೂರು ತಿಂಗಳುಗಳ ಕಾಲ ಜೀವನಾಂಶ ಕೊಟ್ಟರೆ ಅಲ್ಲಿಗೆ ಆತನ ಹೊಣೆ ಮುಗಿಯುತ್ತದೆ. ಒಂದು ವೇಳೆ ಆತನು ನಾಲ್ವರಲ್ಲಿ ಯಾರಿಗೂ ತಲಾಖ್ ಕೊಡದೆ ಐದನೆಯವಳನ್ನು ವಿವಾಹವಾದರೆ, ಆಗ ಮೊದಲ ಪತ್ನಿ ತಾನೇ ತಾನಾಗಿ ವಿಚ್ಛೇದನಗೊಳ್ಳುತ್ತಾಳೆ. ಅಲ್ಲದೆ ತಲಾಖ್ ಇಲ್ಲದೆ ತಾನಾಗಿಯೇ ಹೊರಬರಬೇಕಾಗುತ್ತದೆ. ಒಂದು ವೇಳೆ ಮುಂದೆಯೂ ಆಕೆ ಆ ಗಂಡನೊಡನೆ ಬದುಕುತ್ತಾಳೆಂದರೆ, ಅವಳನ್ನು 'ಹರಾಂ' (ನಿಷೇಧಿಸಲ್ಪಡುವುದು) ಎಂದು ಪರಿಗಣಿಸಲ್ಪಡುತ್ತದೆ. ಹೀಗೆ ವಿಚ್ಛೇದನೆಗೊಂಡು ಹೊರಬಂದ ನಂತರ ಆಕೆ ಎಲ್ಲಿಗೆ ಹೋಗಬೇಕು? ಮುಂದಿನ ಜೀವನೋಪಾಯಕ್ಕಾಗಿ ಏನು ಮಾಡಬೇಕು? ಎಂಬ ಪ್ರಶ್ನೆಗಳಿಗೆ ಮುಸ್ಲಿಂ ವ್ಯಕ್ತಿ ನಿಯಮದಲ್ಲಿ ಉತ್ತರವಿಲ್ಲ. ಹಾಗೆಯೇ ನಾಲ್ಕು ಜನ ಪತ್ನಿಯರೊಡನೆ ಒಬ್ಬ ಗುಲಾಮ ಸ್ತ್ರೀಯನ್ನೂ ಇಟ್ಟುಕೊಳ್ಳಬಹುದೆಂದು ಕೆಲವು ಮತ ಪಂಡಿತರು ಇಂದಿಗೂ ವಾದಿಸುತ್ತಿರುವುದನ್ನು ಲೇಖಕರು ಉಲ್ಲೇಖಿಸುತ್ತಾರೆ.

ಸ್ವತಃ ಮಹಮದ್ ಪೈಗಂಬರರಿಗೆ ಈಜಿಪ್ಟಿನ ದೊರೆ ಸುಂದರಿಯಾದ ಗುಲಾಮ ಸ್ತ್ರೀಯೋರ್ವಳನ್ನು ಕಾಣಿಕೆಯಾಗಿ ಕಳುಹಿಸಿದ ವಿವರ ಖುರಾನಿನಲ್ಲಿ ಬರುತ್ತದೆ. ಅಲ್ಲದೆ ಪ್ರವಾದಿ ಮಹಮದರು ತಮ್ಮ ಇಪ್ಪತ್ತೈದನೇ ವಯಸ್ಸಿನಲ್ಲಿ, ಹಿಂದೆ ಎರಡು ಬಾರಿ ವಿವಾಹವಾಗಿ ಒಂದು ಮಗುವಿನ ತಾಯಿಯೂ ಆದ, ತಮ್ಮ ವಯಸ್ಸಿಗಿಂತ ಹದಿನೈದು ವರ್ಷಕ್ಕೆ ಹಿರಿಯವಳಾದ ಖತೀಜಾ ಬೀಬಿಯನ್ನು ವಿವಾಹವಾಗಿ, ತಮ್ಮ ಅನುಯಾಯಿಗಳಿಗೆ ಉತ್ತಮ ಮೇಲ್ಪಂಕ್ತಿಯನ್ನು ಹಾಕಿಕೊಟ್ಟರೆಂದು ಸಾರಾ ಅವರು 'ಧರ್ಮ ಮತ್ತು ಮಹಿಳೆ' ಎಂಬ ತಮ್ಮ ಲೇಖನದಲ್ಲಿ ಉಲ್ಲೇಖಿಸುತ್ತಾರೆ. ಇಷ್ಟೇ ಅಲ್ಲದೆ ಖತೀಜಾ ಬೀಬಿರವರ ಜೀವಿತಕಾಲದಲ್ಲಿ ಪೈಗಂಬರರು ಬೇರೆ ಯಾವ ಸ್ತ್ರೀಯರನ್ನೂ ವಿವಾಹವಾಗಲಿಲ್ಲ. ಅನಂತರ ವಿವಾಹವಾದ ಯಾವ ಸ್ತ್ರೀಯರಿಗೂ ವಿಚ್ಛೇದನ ನೀಡಲಿಲ್ಲ. ಇದು ಪ್ರವಾದಿಗಳೇ ಹಾಕಿಕೊಟ್ಟ ಮೇಲ್ಪಂಕ್ತಿಯಾಗಿದೆ. "ಸ್ತ್ರೀಯರ ಉದ್ಧಾರಕ್ಕಾಗಿ ಪೈಗಂಬರರಂತೆ ಶ್ರಮಿಸಿದ ಮಹಾನುಭಾವರು

ಮತ್ತೊಬ್ಬರಿರಲಾರರು"[೬] ಎಂಬುದು ಲೇಖಕರ ಪ್ರಶಂಸೆಯಾಗಿದೆ. ಇದನ್ನೇ ಆದರ್ಶವಾಗಿಟ್ಟುಕೊಂಡ ಇಂದಿನ ಪುರುಷ ಸಮಾಜ ಅಲ್ಪಸ್ವಲ್ಪ ಮಾರ್ಪಾಟುಗಳೊಂದಿಗೆ ಅದನ್ನೇ ಅನುಸರಿಸುತ್ತಾ ಬಂದಿದೆ.

ಬಹುಪತ್ನಿತ್ವ ಆಚರಣೆಗೆ ಬರಲು ಮತ್ತೊಂದು ಕಾರಣ ಕೊಡಬಹುದು. ಒಂದು ಕಾಲಘಟ್ಟದಲ್ಲಿ ಮೆಹರ್ (ವಧುದಕ್ಷಿಣೆ) ಕೊಡಲು ಸಾಧ್ಯವಾಗದ ಪುರುಷರು ವಿವಾಹವನ್ನು ಮುಂದೂಡತೊಡಗಿದರು ಮತ್ತು ಮೆಹರ್‌ನ ಮೊತ್ತ ಕಡಿಮೆ ಇರುವ ರಾಷ್ಟ್ರಗಳ ಸ್ತ್ರೀಯರನ್ನು ವಿವಾಹವಾಗತೊಡಗಿದರು. ಇದರ ಪರಿಣಾಮವಾಗಿ ಹೆಣ್ಣುಮಕ್ಕಳು ಮೂವತ್ತು, ನಲವತ್ತು ವರ್ಷಗಳವರೆಗೆ ವಿವಾಹವಿಲ್ಲದೆ ನಾಲ್ಕು ಗೋಡೆಗಳ ನಡುವೆ ಯಾವ ಮನೋರಂಜನೆಯೂ ಇಲ್ಲದೆ ಬಂಧನದ ಬಾಳನ್ನು ಅನುಭವಿಸಬೇಕಾಯಿತು. ಆದರೆ, ಆ ಬಳಿಕವೂ ಸರಿಯಾದ ವರ ದೊರೆಯದೆ ಪ್ರಾಯ ಮೀರುತ್ತಿರುವ ಭಯದಿಂದ, ಈ ಮೊದಲೇ ಹೆಂಡತಿ ಇರುವವನನ್ನು ವಿವಾಹವಾಗಬೇಕಾದ ಸಂದಿಗ್ಧತೆ ತಲೆದೋರಿತು ಅಥವಾ ಜೀವನ ಪರ್ಯಂತ ಅವಿವಾಹಿತಳಾಗಿಯೇ ಉಳಿಯಬೇಕಾದ ಪರಿಸ್ಥಿತಿ ಎದುರಾಯಿತು. ಇದಕ್ಕೆ ಪರಿಹಾರವೆಂಬಂತೆ ಬಹುಪತ್ನಿತ್ವ ಅಸ್ತಿತ್ವಕ್ಕೆ ಬಂದಿತು. ಈ ಒಂದು ಸನ್ನಿವೇಶವನ್ನು ಅರಬ್ ರಾಷ್ಟ್ರಗಳಲ್ಲಿ ಹೆಚ್ಚಾಗಿ ಕಾಣಬಹುದಾಗಿದೆ. ಈ ಕಾರಣಕ್ಕಾಗಿ ಅರಬ್‌ದೇಶಗಳಲ್ಲಿ ಪುರುಷರಿಗೆ ಒಂದಕ್ಕಿಂತ ಹೆಚ್ಚು ಪತ್ನಿಯರು, ಉಪಪತ್ನಿಯರಿರುವುದು ತೀರಾ ಸಾಮಾನ್ಯ ಸಂಗತಿಯಾಗಿದೆ.

ಇಷ್ಟೆಲ್ಲಾ ಹಿನ್ನೆಲೆಯನ್ನು ಹೊಂದಿರುವ ಬಹುಪತ್ನಿತ್ವವು ಇಂದು ಯಾವ ಅಳುಕೂ ಇಲ್ಲದೆ ಸರಾಗವಾಗಿ ನಡೆಯುತ್ತಿದೆ. ಈ ಒಂದು ಪದ್ಧತಿಯಿಂದ ನೊಂದ ಮಹಿಳೆಯರು ಧರ್ಮಗುರುಗಳ ಬಳಿಗೆ ಹೋಗಿ ದೂರು ನೀಡಿದರೆ 'ನಾಲ್ಕು ಜನ ಹೆಂಡತಿಯರನ್ನು ಇಟ್ಟುಕೊಳ್ಳಬಹುದೆಂಬುದು ನಮ್ಮ ಧಾರ್ಮಿಕ ನಿಯಮ, ಇದನ್ನು ಪ್ರಶ್ನಿಸುವಂತಿಲ್ಲ. ಮಕ್ಕಳಿಗೆ ಮಾಸಾಶನ ಕೊಡಬೇಕು, ಅದನ್ನು ಕೊಡದಿದ್ದರೆ ನ್ಯಾಯಾಲಯಕ್ಕೆ ಹೋಗಿ' ಎಂದು ಹೇಳುತ್ತಾರೆಯೇ ಹೊರತು ಬೇರೆ ಯಾವ ರೀತಿಯ ಪರಿಹಾರವನ್ನೂ ಸೂಚಿಸುವುದಿಲ್ಲ. ನ್ಯಾಯಾಲಯಕ್ಕೆ ಹೋಗಲು ಬೇಕಾದ ಆರ್ಥಿಕ ಅನುಕೂಲವೂ ಅವರಿಗಿರುವುದಿಲ್ಲ.

ಒಬ್ಬಳು ಹೆಂಡತಿ, ಮಕ್ಕಳನ್ನು ಸಾಕಲಾರದವನು ಎರಡೋ, ಮೂರೋ ಹೆಂಡತಿಯರನ್ನೂ ಕಟ್ಟಿಕೊಂಡು ಸಂಕಟ ಪಡುವುದು, ಈ ಸಮಾಜದಲ್ಲಿ ಸಾಮಾನ್ಯ ಸಂಗತಿಯಾಗಿದೆ. ಈ ರೀತಿಯ ಹಾವಳಿಯು ಸಮಾಜದ ಮೇಲ್ವರ್ಗದಲ್ಲಿ ಅಷ್ಟೊಂದಿಲ್ಲದೇ ಹೋದರೂ, ಮುಸ್ಲಿಂ ಸಮಾಜದ ಕೆಳವರ್ಗದ ಪುರುಷರಿಗೆ ಇದೊಂದು ಹವ್ಯಾಸವೇ

ಆಗಿಹೋಗಿದೆ. ಇವರಿಗೆ ಮದುವೆಯೆಂದರೆ ಬಟ್ಟೆ ಬದಲಿಸಿದಷ್ಟು ಸುಲಭವಾಗಿದೆ. ಎರಡು, ಮೂರು ವಿವಾಹವಾಗುವುದು ಧರ್ಮ ಸಮ್ಮತವಾಗಿದ್ದರೂ, ಈ ವಿಷಯದಲ್ಲಿ ಕೆಲವರು ಎಷ್ಟು ಅಮಾನವೀಯವಾಗಿ ವರ್ತಿಸುತ್ತಾರೆಂಬುದು ಬಹುಪತ್ನಿತ್ವದ ಕ್ರೂರತೆಗಳಲ್ಲೊಂದಾಗಿದೆ.

ಇದೇ ಒಂದು ವಿಚಾರವನ್ನು ವಸ್ತುವಾಗಿಸಿಕೊಂಡು ಸಾರಾ ಅವರು 'ಸಹನಾ' ಎಂಬ ಕಾದಂಬರಿಯನ್ನು ರಚಿಸಿದ್ದಾರೆ. ಈ ಕಾದಂಬರಿಯ ವಸ್ತು ಕಾಲ್ಪನಿಕವಾದುದೇನೂ ಅಲ್ಲ. ಸುಮಾರು ಮೂವತ್ತು ವರ್ಷಗಳ ಹಿಂದೆ ಲೇಖಕರು ತಮ್ಮ ಊರಿನಲ್ಲಿ ನಡೆದ ಘಟನೆಯೊಂದನ್ನು ಆಧಾರವಾಗಿಟ್ಟುಕೊಂಡು ಈ ಕಾದಂಬರಿಯನ್ನು ರಚಿಸಿದ್ದಾರೆ. ಈ ಈ ವಿಷಯವನ್ನು ಅವರು ತಮ್ಮ 'ಸಹನಾ' ಕಾದಂಬರಿಯ ಮುನ್ನುಡಿಯಲ್ಲಿ ಉಲ್ಲೇಖಿಸುತ್ತಾರೆ. ಇದರ ನಾಯಕಿ ಬದುಕುವ ಛಲತೊಟ್ಟು ಬದುಕಿದ್ದಾಳೆ. ಆದರೆ ನಿಜಜೀವನದ ಘಟನೆಯಲ್ಲಿ ಆಕೆಯ ಗಂಡನ ಎರಡನೇ ಹೆಂಡತಿ ಮನೆಗೆ ಬಂದ ನಂತರ ಆಕೆಯನ್ನು ನೋಡಿಕೊಳ್ಳುವವರಿಲ್ಲದೆ ಆಕೆಯು ಇಹಲೋಕ ತ್ಯಜಿಸಿರುತ್ತಾಳೆ. ಇಷ್ಟೆಲ್ಲಾ ಅನಾಹುತಗಳು ನಡೆಯಲು ಕಾರಣವಾಗಿರುವುದು, ಧರ್ಮದ ಅನುಮತಿ ಪಡೆದ ಬಹುಪತ್ನಿತ್ವದ ಕಾನೂನು. ಒಬ್ಬ ಗಂಡಸಿಗೆ ಒಬ್ಬಳೇ ಹೆಂಡತಿ ಎಂಬ ಕಾನೂನಿದ್ದರೆ ಬಹುಶಃ ಈ ಅನಾಹುತಗಳು ಸಂಭವಿಸಲು ಅವಕಾಶವಿರುತ್ತಿರಲ್ಲಿಲ್ಲವೇನೋ? ಷರಿಯತ್‌ನ ಪ್ರಕಾರ 'ಇನ್ನೊಂದು ವಿವಾಹ ಮಾಡಿಕೊಂಡರೂ ಇಬ್ಬರನ್ನೂ ಸಮಾನವಾಗಿ ನೋಡಿಕೊಳ್ಳುವುದು ಪುರುಷನ ಭಾದ್ಯತೆಯಾಗಿದೆ'[೭] ಎಂಬ ನಿಯಮವಿದ್ದರೂ ಎಲ್ಲಿಯೂ ಈ ನಿಯಮಕ್ಕೆ ಮನ್ನಣೆ ದೊರೆತಂತಿಲ್ಲ.

'ಸಹನಾ' ದ ನಾಯಕಿ ನಸೀಮಾಳು ಗಂಡ-ಮನೆ-ಮಕ್ಕಳು ಇವರ ನಿರ್ವಹಣೆಯಲ್ಲಿ ಅವಿರತ ದುಡಿಮೆ ಮಾಡುತ್ತಾ, ಆರ್ಥಿಕ ಪರಾವಲಂಬನೆಯಲ್ಲಿ ಸಿಲುಕಿಕೊಂಡಿರುವ ಅಸಂಖ್ಯಾತ ಸ್ತ್ರೀಯರ ಪ್ರತಿನಿಧಿಯೆಂಬಂತೆ ಕಂಡುಬರುತ್ತಾಳೆ. ಆಕೆಯು ಕೆಳವರ್ಗದ ಕೂಲಿಕಾರರ ಕುಟುಂಬದಿಂದ ಬಂದವಳು. ಈಕೆಯು ದಾಂಪತ್ಯದ ಬಗ್ಗೆ ಸ್ಪಷ್ಟ ಕಲ್ಪನೆಯೂ ಇಲ್ಲದ ಮುಗ್ಧ ಹುಡುಗಿ. ಹದಿನಾಲ್ಕು ವರ್ಷಕ್ಕೇ ಎರಡು ಮಕ್ಕಳ ತಾಯಿಯಾಗಿ ದೈಹಿಕವಾಗಿ, ಮಾನಸಿಕವಾಗಿ ಸಾಕಷ್ಟು ನೊಂದು, ಬೆಂದು ಜೀವನ ವಿಮುಖಿ ನಿಲುವು ಆಕೆಯಲ್ಲಿ ಬೆಳೆಯತೊಡಗುತ್ತದೆ. ಒಂದೆಡೆ ಗಂಡನನ್ನು ಸಂತೃಪ್ತಿ ಪಡಿಸದ ನೋವು, ಮತ್ತೊಂದೆಡೆ ಅತ್ತೆಗೆ ಆದಾಯ ದೊರಕಿಸಿಕೊಡಲಾಗದ ಅಸಹಾಯಕತೆಯಿಂದ ಮತ್ತಷ್ಟು ಕುಗ್ಗಿ ಹೋಗುತ್ತಾಳೆ.

ಚಿಕ್ಕವಯಸ್ಸಿನಲ್ಲಿಯೇ ಮೇಲಿಂದ ಮೇಲೆ ಗರ್ಭಧರಿಸಿದ ಪರಿಣಾಮವಾಗಿ ದೈಹಿಕ ನಿಶ್ಶಕ್ತಿಯಿಂದ ಸರಿಯಾದ ಆರೈಕೆ ಮತ್ತು ಶುಶ್ರೂಷೆಯಿಲ್ಲದೆ ಕ್ಷಯರೋಗಕ್ಕೆ ತುತ್ತಾಗುತ್ತಾಳೆ.

ಹೀಗೆ ಸಾವು-ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದ ಸಂದರ್ಭದಲ್ಲಿ, ಹೆಂಡತಿ ರೋಗಗ್ರಸ್ಥೆ ಎಂಬ ನೆಪವೊಡ್ಡಿ ನಾಲ್ಕು ಜನ ಪತ್ನಿಯರನ್ನು ಹೊಂದಬಹುದೆಂಬ ಧರ್ಮತತ್ವವನ್ನು ಮುಂದಿಟ್ಟುಕೊಂಡು ನಸೀಮಾಳ ಗಂಡ ಎರಡನೇ ಮದುವೆಗೆ ಸಿದ್ಧವಾಗಿಯೇ ಬಿಡುತ್ತಾನೆ. ಎಷ್ಟೇ ಕಾಡಿ ಬೇಡಿಕೊಂಡರೂ ಆತ ತನ್ನ ಮದುವೆಯ ಪ್ರಯತ್ನವನ್ನು ಕೈಬಿಡುವುದಿರಲಿ, ಮುಂದೂಡುವುದೂ ಇಲ್ಲ. ಈ ಸನ್ನಿವೇಶದ ಆಕೆಯ ಮಾತುಗಳು ಕರುಳು ಇರಿಯುವಂಥವು "ನಾನು ಯಾವ ತಪ್ಪು ಮಾಡಿದ್ದೇನೆ? ದಯವಿಟ್ಟು ನಾನು ಸಾಯುವವರೆಗಾದರೂ ತಡೆಯಿರಿ. ನನ್ನನ್ನು ಸುಖವಾಗಿ ಸಾಯಲಾದರೂ ಬಿಡಿ. ನಾನು ಜೀವಂತವಿರುವಾಗ ನಿಮ್ಮನ್ನು ಇನ್ನೊಬ್ಬಳಿಗೆ ಒಪ್ಪಿಸಲಾರೆ. ನನ್ನನ್ನು ಒಳ್ಳೆಯ ವೈದ್ಯರಿಗೆ ತೋರಿಸಿದ್ದರೆ ನಾನು ಬದುಕುತ್ತಿದ್ದೆ. ಆದರೆ ಈಗ ನೀವು ಅದನ್ನೇನೂ ಮಾಡಬೇಕಾಗಿಲ್ಲ. ಇನ್ನು ಈ ಬದುಕಿನಲ್ಲಿ ನನಗೆ ಯಾವ ಆಸಕ್ತಿಯೂ ಇಲ್ಲ. ಆದರೆ ನಾನು ಹೊರಟು ಹೋಗುವವರೆಗೆ ತಡೆಯಿರಿ"[೮] ಎಂಬ ನಸೀಮಾಳ ಮಾತುಗಳು ಎಂಥಾ ಕಲ್ಲು ಹೃದಯದವರನ್ನೂ ಕರಗಿಸುವಂತಿದೆ. ಆದರೆ ಮತ್ತೊಂದು ಮದುವೆಯ ಅಮಲಿನಲ್ಲಿದ್ದ ಪಾಷಾನಿಗೆ ಅವಳ ಈ ಮಾತುಗಳು ಯಾವ ಪರಿಣಾಮವನ್ನು ಬೀರುವುದಿಲ್ಲ.

ಉಂಡೆಲೆ ಬಿಸಾಕುವಂತೆ ಹೆಂಡತಿಯಿಂದ ಎಷ್ಟು ಸಾಧ್ಯವೋ ಅಷ್ಟನ್ನು ಪಡೆದುಕೊಂಡು, 'ರೋಗದ ಮೊಟ್ಟೆ' ಎಂಬ ಪಟ್ಟಿಕಟ್ಟಿ ಮರುವಿವಾಹವಾಗುವ ನಿರ್ಧಯಿ, ಕಠೋರ ಹೃದಯಿ ಗಂಡಸರಿಗೆ ನೊಂದ ಹೆಣ್ಣುಗಳ ಆರ್ತನಾದ ಕೇಳಿಸುವುದೇ ಇಲ್ಲ. ತಾಯಿಯ ಆರೈಕೆಯಲ್ಲಿ ಚೇತರಿಸಿಕೊಂಡು ಕೊಂಚ ನೋಡುವಂತಾದಾಗ ಆಕೆಗೆ ಇಪ್ಪತ್ತು ವರ್ಷ. ಇದು ಇಸ್ಲಾಂ ಸಮಾಜದ ಅನಿಷ್ಟ ಪದ್ಧತಿಯ ಕಪಿಮುಷ್ಟಿಯೊಳಗೆ ಸಿಲುಕಿ ಒದ್ದಾಡುತ್ತಿರುವ ಅಸಂಖ್ಯಾತ ಹೆಣ್ಣುಗಳ ಕರುಣಾಜನಕ ಸ್ಥಿತಿಯಾಗಿದೆ. ಪಾಷಾ ನಸೀಮಳನ್ನು ಕಾಮದ ಬೊಂಬೆಯಾಗಿ, ಮನರಂಜನೆಯನ್ನು ಒದಗಿಸುವ ಒಂದು ಸಾಧನವಾಗಿ ನೋಡಿದನೇ ಹೊರತು, ಆಕೆಯೂ ಮನುಷ್ಯಳು, ಆಕೆಗೂ ಒಂದು ಮನಸ್ಸಿದೆ, ಆಸೆ-ಆಕಾಂಕ್ಷೆಗಳಿವೆ ಎಂದು ಯೋಚಿಸುವುದೇ ಇಲ್ಲ. ಆಕೆಯ ಯಾವ ಭಾವನೆಗಳಿಗೂ ಸ್ಪಂದಿಸದೆ, ಆಕೆಯನ್ನು ಕೇವಲ ಮಕ್ಕಳನ್ನು ಹೆರುವುದಕ್ಕೆ, ಬೀಡಿ ಕಟ್ಟುವುದಕ್ಕೆ, ಮನೆಯಲ್ಲಿ ಗಾಣದೆತ್ತಿನಂತೆ ದುಡಿಯುವುದಕ್ಕೆ ಇರುವ ಒಬ್ಬ ಗುಲಾಮಳು ಎಂಬಂತೆ ನಡೆಸಿಕೊಳ್ಳುವ ಪುರುಷ ಸಮಾಜದ ಕರಾಳತೆಯನ್ನು ಸಾರಾ ಅವರು ಈ ಕಾದಂಬರಿಯಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಪುರುಷ ತನ್ನ ಸ್ವಾರ್ಥಕ್ಕಾಗಿ ಧರ್ಮದ ಬೆಂಬಲ ಪಡೆದು ಸ್ತ್ರೀಯರ ಬಾಳಿಗೆ ಕಿಚ್ಚು ಹಚ್ಚುವ ಅಮಾನವೀಯತೆಯ ಕಡೆಗೆ ಹಾಗೂ ಬಹುಪತ್ನಿತ್ವವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿರುವ ಪುರುಷರ ವಿರುದ್ಧ ಸಿಡಿದೇಳುವ ಅಗತ್ಯವನ್ನು ಲೇಖಕರು ನಸೀಮಾಳ ಮೂಲಕ ಒತ್ತಿ ಹೇಳುತ್ತಾರೆ.

“ಹೆಣ್ಣು ಒಮ್ಮೆ ವಿವಾಹ ಬಂಧನದಲ್ಲಿ ಸಿಲುಕಿಕೊಂಡರೆ ಆಕೆ ಅದರಿಂದ ಪಾರಾಗುವುದಕ್ಕೆ ಸಾಧ್ಯವೇ ಇಲ್ಲ. ಆದರೆ ಗಂಡಿಗೆ ಯಾವ ತಡೆಯೂ ಇಲ್ಲ. ಯಾವುದೋ ಒಂದು ಚಿಕ್ಕ ತಪ್ಪಿಗಾಗಿ ಅಥವಾ ಯಾವ ತಪ್ಪನ್ನು ಮಾಡದೇ ಇದ್ದರೂ, ಒಡೆದ ಮಡಕೆಯನ್ನು ತಿಪ್ಪೆಗೆ ಎಸೆಯುವಂತೆ ಹೆಂಡತಿಯನ್ನು ತಲಾಖ್ ಎಂದು ಹೇಳಿ ಹೊರಹಾಕಿದರೆ, ಆಕೆಯ ಎಲ್ಲ ಬಾಂಧವ್ಯಗಳೂ ಕೊನೆಯಾಗುತ್ತವೆ. ಆದರೆ ಹೆಂಡತಿಯಾದವಳು ಮಾತ್ರ ಗಂಡನು ಎಂಥ ತಪ್ಪು ಮಾಡಿದ್ದರೂ, ಆಕೆಗೆ ಮೂರು ವರ್ಷಗಳವರೆಗೆ ಅನ್ನ ಹಾಕದೇ ಹೋದರೂ ಆತನ ಬಂಧನದಿಂದ ಕಳಚಿಕೊಳ್ಳುವುದು ಅಷ್ಟು ಸುಲಭವಲ್ಲ. ಪುನಃ ಆತನು ಕರೆದಾಗ, ಆತ ತೋರುತ್ತಿರುವ ದಯೆಗಾಗಿ, ಈಗಲಾದರೂ ಆತನಿಗೆ ತನ್ನ ನೆನಪಾದುದಕ್ಕಾಗಿ, ಆತನ ಒಳ್ಳೆಯತನಕ್ಕಾಗಿ ಆತನಿಗೆ ಅನಂತ ಕೃತಜ್ಞತೆಗಳನ್ನರ್ಪಿಸಿ, ಮೂಕ ಪ್ರಾಣಿಯಂತೆ ಆತನನ್ನು ಹಿಂಬಾಲಿಸುವುದು ಆಕೆಯ ಪರಮ ಕರ್ತವ್ಯ! ಆತ ಈವರೆಗೆ ಮಾಡಿದ ಎಲ್ಲಾ ತಪ್ಪುಗಳನ್ನು ಕ್ಷಮಿಸುತ್ತಾಳೆ. ಆಕೆ ಕ್ಷಮಯಾಧರಿತ್ರಿಯಲ್ಲವೇ?”[೯] ಎಂದು ವ್ಯಂಗ್ಯವಾಗಿ ವಿಶ್ಲೇಷಿಸುತ್ತಾ ಪುರುಷ ಸಮಾಜದ ದೌರ್ಜನ್ಯಗಳ ಕುರಿತು ತಮ್ಮ ಅಸಮಧಾನವನ್ನು ಲೇಖಕರು ವ್ಯಕ್ತಪಡಿಸಿದ್ದಾರೆ.

ಹಾಗೆಯೇ ಲೇಖಕರು ಈ ಪದ್ಧತಿಯ ಬಗ್ಗೆ ಸ್ತ್ರೀಯರಿಗಿರುವ ನಿಲುವು ಬದಲಾಗಬೇಕೆಂದು ಆಶಿಸುತ್ತಾರೆ. ಈಗಲಾದರೂ ಎಚ್ಚೆತ್ತುಕೊಂಡು ಹೇಳಬೇಕಾದುದನ್ನು ಹೇಳಿ. ಎಂದೋ ಆರಂಭವಾಗಿರುವ ಸ್ತ್ರೀಯರ ಬಾಯಿ ಮುಚ್ಚಿಸುವ ಪಿತೂರಿ ಇಂದಿಗೂ ನಡೆಯುತ್ತಲೇ ಇದೆ, ಎಂದು ತನ್ನ ಸಮಾಜದ ಸಹೋದರಿಯರಿಗೆ ಎಚ್ಚರಿಕೆ ಕೊಡುತ್ತಾರೆ.

ಒಬ್ಬಳು ಜೀವಂತವಿರುವಾಗ ಆಕೆಯ ಕಣ್ಣೆದುರಿಗೇ ಇನ್ನೊಬ್ಬಳನ್ನು ವಿವಾಹವಾಗುವ ಈ ಸಮಾಜದ ವ್ಯವಸ್ಥೆಯು ಬದಲಾಗಬೇಕು. ಒಂದೋ ಆಕೆಗೆ ತಲಾಖ್ ಕೊಡಬೇಕು, ಇಲ್ಲವೇ ಆಕೆ ಸಾಯುವವರೆಗಾದರೂ ಸಹನೆಯಿಂದಿರಬೇಕು. ಈ ರೀತಿಯ ಯಾತನೆಗೊಳಗಾದವರು, ಈ ಅಗ್ನಿಕುಂಡದಲ್ಲಿ ಬೆಂದ, ಬೇಯುತ್ತಿರುವ ಹೆಣ್ಣು ಮಕ್ಕಳೆಲ್ಲರೂ ಈ ಕುರಿತು ಚಿಂತಿಸಬೇಕು. ಹೆಣ್ಣನ್ನು ಪ್ರಾಣಿಗಳಿಗಿಂತ ಕಡೆಯಾಗಿ ಕಾಣುವ ಈ ಸಮಾಜದ ವ್ಯವಸ್ಥೆ ಬದಲಾಗಬೇಕು. ಹೆಣ್ಣೂ ಕೂಡ ಮನುಷ್ಯಳು ಆಕೆಗೂ ಒಂದು ಹೃದಯವಿದೆ ಎಂಬುದನ್ನು ಎಲ್ಲಾ ಪುರುಷರು ಮನಗಾಣಬೇಕು ಎಂದು ಲೇಖಕರು ಆಶಿಸುತ್ತಾರೆ. ಹಾಗೆಯೇ ನಸೀಮಳ ಪಾತ್ರದ ಮೂಲಕ ಕಾದಂಬರಿಯ ಕೊನೆಯಲ್ಲಿ ಈ ಪದ್ಧತಿಗೆ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾರೆ.

“ನೀವು ರೋಗಿಯಾಗಿ ಮಲಗಿದ್ದಾಗ, ನಾನು ಬೇರೊಬ್ಬನೊಡನೆ ಹೊರಟು ಹೋಗಿದ್ದರೆ ನಿಮಗೆ ಹೇಗನ್ನಿಸುತ್ತಿತ್ತು”[೧೦] ಎಂದು ನಸೀಮಳ ಮೂಲಕ ಪ್ರಶ್ನಿಸುವುದರೊಂದಿಗೆ ಪುರುಷ

ಸಮಾಜಕ್ಕೆ ಎಚ್ಚರಿಕೆಯ ಬಿಸಿ ಮುಟ್ಟಿಸುತ್ತಾರೆ. ಇಡೀ ಕಾದಂಬರಿಯಲ್ಲಿ ಬಂಡಾಯದ ಅಂಶ ಅಡಗಿರುವುದು ಈ ಕಾದಂಬರಿಯ ಮಹತ್ವವನ್ನು ಮತ್ತಷ್ಟು ಹೆಚ್ಚಿಸಿದೆ.

ಇವರ ಮತ್ತೊಂದು ಕಾದಂಬರಿ 'ಪ್ರವಾಹ ಸುಳಿ'ಯಲ್ಲಿ ಬರುವ ಮಮ್ಮೂಟಿಯು ಮೊದಲು ರುಖಿಯಾಳನ್ನು ವಿವಾಹವಾಗಿರುತ್ತಾನೆ. ಶ್ರೀಮಂತಿಕೆ ಬಂದ ನಂತರ ಫರೀದಾಳನ್ನು ಎರಡನೆಯ ಮದುವೆಯಾಗಿ ಮನೆಗೆ ಕರೆತರುತ್ತಾನೆ. ಆದರೆ ಮಮ್ಮೂಟಿಯು ಅವರ ನಡುವೆ ಬೇಧವೆಣಿಸದೆ ಇಬ್ಬರಿಗೂ ನ್ಯಾಯ ಒದಗಿಸುತ್ತಾನೆ. ಬಹುಶಃ ಇದಕ್ಕೆ ಆತನ ಶ್ರೀಮಂತಿಕೆ ಕಾರಣವಾಗಿರಬಹುದು. ಆದರೆ ಬಡತನದ ಕುಟುಂಬಗಳಲ್ಲಿ ಈ ರೀತಿಯ ನ್ಯಾಯಪರಿಪಾಲನೆ ಸಾಧ್ಯವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಸಮಸ್ಯೆಗಳ ಸರಮಾಲೆ ಸೃಷ್ಟಿಯಾಗುತ್ತದೆ.

ಘೋಷಾ ಪದ್ಧತಿ :

ಇಸ್ಲಾಂ ಧರ್ಮದಲ್ಲಿ ಮಹಿಳೆಯರ ವಸ್ತ್ರಧಾರಣೆಯ ವಿಚಾರವಾಗಿಯೂ ಹಲವಾರು ಕಟ್ಟುಪಾಡುಗಳು, ನಿರ್ಬಂಧಗಳಿರುವುದನ್ನು ಗಮನಿಸಬಹುದು. ಹತ್ತು ವರ್ಷ ದಾಟಿದ ಎಲ್ಲಾ ಮುಸ್ಲಿಂ ಹೆಣ್ಣುಮಕ್ಕಳೂ ಧರಿಸಲೇಬೇಕಾದ ರಕ್ಷಾಕವಚವಿದು. ಈ ಸಮಾಜದ ಹೆಣ್ಣುಮಕ್ಕಳು ಒಂದು ವಯೋಮಿತಿ ದಾಟುತ್ತಿದ್ದಂತೆಯೇ ಅವರು ಮನೆಯಿಂದ ಹೊರಗೆ ಕಾಲಿಡಬೇಕಾದರೆ ಈ ಒಂದು ವಸ್ತ್ರ ಅವರ ಮೈಮೇಲಿರಲೇಬೇಕು. ಒಂದು ಕಾಲದಲ್ಲಿ ಪರಪುರುಷರ ವಕ್ರದೃಷ್ಟಿಯಿಂದ ರಕ್ಷಿಸಿಕೊಳ್ಳಲು ಕಂಡುಕೊಂಡ ಪರಿಹಾರವಾಗಿ ಘೋಷಾ ಪದ್ಧತಿ ಆಚರಣೆಗೆ ಬಂದಿತು. ಆದರೆ ಈಗ ಘೋಷಾ ಬಳಕೆ ಅನಿವಾರ್ಯವೆಂಬಂತೆ ಪರಿಣಮಿಸಿದೆ.

ಘೋಷಾ ಪದ್ಧತಿ ಆಚರಣೆಗೆ ಬಂದ ಹಿನ್ನೆಲೆಯನ್ನು ಗಮನಿಸುವುದಾದರೆ ಮೊಟ್ಟ ಮೊದಲನೆಯದಾಗಿ ಪ್ರವಾದಿ ಮಹಮದರು ಜನ್ಮ ತಳೆದ ಸಂದರ್ಭದಲ್ಲಿ ಅರಬ್ ಜನಾಂಗದ ಸಾಮಾಜಿಕ ಸ್ಥಿತಿಗತಿಗಳೆಡೆಗೆ ಗಮನ ಹರಿಸಬೇಕಾಗುತ್ತದೆ. ಪೈಗಂಬರರ ಜನನದ ಕಾಲಘಟ್ಟದಲ್ಲಿ ಅರಬ್ ಜನತೆಯು ಕ್ರೂರಿಗಳೂ, ಅನಾಗರೀಕರೂ, ಅನೈತಿಕತೆಯ ಮೊತ್ತವಾದ ಕಾಡು ಮನುಷ್ಯರಂತಿದ್ದರು. ಆ ಒಂದು ಸಮಾಜದಲ್ಲಿ ಸ್ತ್ರೀಯರನ್ನು ಪ್ರಾಣಿಗಳಿಗಿಂತಲೂ ತುಚ್ಛವಾಗಿ ಪರಿಗಣಿಸಿದ್ದರು. ಮಹಿಳೆಯರು ನಿರ್ಭಯವಾಗಿ ಬೀದಿಯಲ್ಲಿ ಓಡಾಡುವುದು ಸಾಧ್ಯವೇ ಇಲ್ಲದಂತಹ ಒಂದು ಪರಿಸ್ಥಿತಿ ಅಲ್ಲಿತ್ತು. ಬೀದಿಯಲ್ಲಿ ಮೇವನ್ನರಸುತ್ತಿರುವ ಮರಿಗಳನ್ನು ಹದ್ದು ಹಾರಿಸಿಕೊಂಡು ಹೋಗುವಂತೆ, ಸುಂದರಿಯಾದ ಒಂದು ಹೆಣ್ಣು ಬೀದಿಯಲ್ಲಿ ಕಣ್ಣಿಗೆ ಬಿದ್ದರೆ ಆಕೆಯನ್ನು ಎತ್ತಿಕೊಂಡು ಹೋಗಿ, ಆಕೆಯ ಮೇಲೆ ಆಕ್ರಮಣ ಮಾಡಿ, ತಮ್ಮ ಮನಬಂದಂತೆ ಆಕೆಯನ್ನು ಉಪಯೋಗಿಸಿಕೊಳ್ಳುತ್ತಿದ್ದರು.

ಜೊತೆಗೆ ಮನೆಯಲ್ಲಿ ತಮ್ಮ ಅನುಕೂಲಕ್ಕಾಗಿಯೇ ಬೇಕಾದಷ್ಟು ಪತ್ನಿಯರನ್ನು, ಉಪಪತ್ನಿಯರನ್ನು ಇಟ್ಟುಕೊಳ್ಳುತ್ತಿದ್ದರು. ಹೆಣ್ಣು ಎಂಬುದು ಭೋಗದ ವಸ್ತು ಎಂಬುದು ಈ ಜನತೆಗೆ ತಿಳಿದಿದ್ದ ಏಕೈಕ ವಿಷಯ.

ಇಷ್ಟೇ ಅಲ್ಲದೆ ಹೆಣ್ಣುಮಕ್ಕಳು ಹುಟ್ಟುತ್ತಿದ್ದಂತೆಯೇ ಜೀವಂತವಾಗಿ ಸಮಾಧಿ ಮಾಡುವ ಕ್ರೂರ ಪರಿಪಾಠವೂ ಇಲ್ಲಿತ್ತು. ಗುಲಾಮ ಸ್ತ್ರೀಯರ ವ್ಯಾಪಾರವಂತೂ ನಿರಾತಂಕವಾಗಿ ನಡೆದೇ ಇತ್ತು. ಸಂತೆಯಲ್ಲಿ ಕುರಿ, ದನಗಳನ್ನು ಕೊಳ್ಳುವಂತೆ, ಮಾರುವಂತೆ ಗುಲಾಮ ಸ್ತ್ರೀಯರನ್ನು ಕೊಂಡುಕೊಳ್ಳುತ್ತಿದ್ದ ಅರಬ್ ಪುರುಷರು ಅವರನ್ನು ತಮ್ಮ ಭೋಗಕ್ಕಾಗಿಯೂ ಬಳಸಿಕೊಳ್ಳುತ್ತಿದ್ದರು.

ಇಂತಹ ಒಂದು ಮೃಗ ಸ್ವರೂಪಿ ಜನಾಂಗವನ್ನು ಕೇವಲ ಮೂವತ್ತು, ನಲವತ್ತು ವರ್ಷಗಳ ಅವಧಿಯಲ್ಲಿ ಮನುಷ್ಯರನ್ನಾಗಿ ಮಾಡಿದ ಕೀರ್ತಿ ಮಹಮದರಿಗೆ ಸಲ್ಲುತ್ತದೆ. ಅವರ ಮೃಗತ್ವವನ್ನು ನಿವಾರಿಸಿ, ಮಾನವೀಯ ಅಂಶಗಳನ್ನು ಬೋಧಿಸುವುದರ ಜೊತೆಗೆ ಅವರಲ್ಲಿ ನೈತಿಕತೆಯನ್ನು ಜಾಗೃತಗೊಳಿಸಿದರು. ಆಗಿನ ಸಮಾಜದ ದುರವಸ್ಥೆಗಳನ್ನು ಮನದಟ್ಟು ಮಾಡಿಕೊಂಡರೆ ಮಾತ್ರ ನಾವು ಇಸ್ಲಾಂ ಧರ್ಮದ ಕಟ್ಟುಪಾಡುಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಈ ರೀತಿಯಾಗಿ ಸ್ತ್ರೀಯರಿಗೆ ಯಾವ ರೀತಿಯ ರಕ್ಷಣೆಯೂ ಇಲ್ಲದೆ ಅವರ ಮೇಲೆ ಆಕ್ರಮಣವಾಗುತ್ತಿದ್ದುದನ್ನು ಮನಗಂಡಂತಹ ಪ್ರವಾದಿ ಮಹಮದರು ಈ ಸಮಸ್ಯೆಗೆ ಪರಿಹಾರ ಹುಡುಕಲು ಆರಂಭಿಸಿದರು. ಇಷ್ಟೆಲ್ಲಾ ಅನಾಹುತಗಳಿಂದ ಸ್ತ್ರೀಯರನ್ನು ತಪ್ಪಿಸಲು ಅವರಿಗೆ ಮನೆಯಲ್ಲೇ ಉಳಿಯಲು ಬೋಧಿಸಿದರು. ಸ್ತ್ರೀಯರ ಮೇಲಾಗುತ್ತಿದ್ದ ಹಿಂಸೆಯನ್ನು ತಪ್ಪಿಸಲು ಮತ್ತು ಅವರು ಸುರಕ್ಷಿತವಾಗಿ ಉಳಿಯಲು, ಅವರು ಕಂಡುಕೊಂಡ ಪರಿಹಾರವೆಂದರೆ, ಅನ್ಯ ಪುರುಷರೆದುರು ಕಾಣಿಸಿಕೊಳ್ಳುವಾಗ ತಮ್ಮ ದೇಹ ಸೌಂದರ್ಯವನ್ನು ಆದಷ್ಟು ಮರೆಮಾಡಿಕೊಳ್ಳಬೇಕೆಂದು ಪ್ರವಾದಿಗಳು ಬೋಧಿಸಿದರೇ ಹೊರತು, ಈಗಿನಂತೆ ಕಪ್ಪು ಮುಸುಕಿನ ಬಂಧನದಲ್ಲಿರಬೇಕೆಂದು ಬೋಧಿಸಿರಲಿಲ್ಲ. ಆದರೆ ಈ ರೀತಿ ಮರೆಮಾಡಿ ಕೊಳ್ಳುವ ಕ್ರಮವು ಗೌರವಸ್ಥ ಮನೆತನದ ಸ್ತ್ರೀಯರಿಗಿರುವ ನಿಯಮಗಳೇ ಹೊರತು, ಗುಲಾಮ ಸ್ತ್ರೀಯರಿಗೆ ಯಾವ ನಿರ್ಬಂಧವೂ ಇರಲಿಲ್ಲ. "ನೀವು ಕುಲೀನ ಮನೆತನದ ಸ್ತ್ರೀಯರೆಂದು ಗುರುತಿಸಲ್ಪಡಲು ಮತ್ತು ಪುರುಷರಿಂದ ಸತಾಯಿಸಲ್ಪಡದಿರಲು ತಲೆಯ ಮೇಲಿನ ಬಟ್ಟೆಯನ್ನು ದೇಹದ ಮೇಲೆಳೆದುಕೊಳ್ಳಿರಿ" (ಸೂರಾ ೩೩.೫೯ ನೇ ವಾಕ್ಯ) [೧೧] ಎಂಬುದು ಖುರಾನಿನ ವಾಕ್ಯವಾಗಿದೆ. ಮತ್ತೊಂದು ಅಂಶವೆಂದರೆ, ಗುಲಾಮ ಪುರುಷನ ಮುಂದೆ ನಡೆದಾಡುವ ಕುಲೀನ ಸ್ತ್ರೀಯರಿಗೆ ಈ ನಿರ್ಬಂಧವಿರುವುದಿಲ್ಲ.

ಹೀಗೆ ೧೪೦೦ ವರ್ಷಗಳ ಹಿಂದಿನ ಸಮಾಜದಲ್ಲಿದ್ದ ಅನಾಗರೀಕ ಪುರುಷರಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಮತ್ತು ತಮ್ಮ ಪ್ರತಿಷ್ಠೆ ಮೆರೆಯಲು ತಮ್ಮ ಮೇಲೆ ತಾವೇ ಹೇರಿಕೊಂಡ ಒಂದು ಪದ್ಧತಿಯು ಇಂದು ಮುಸ್ಲಿಂ ಮಹಿಳೆಯರಿಗೆ ಒಂದು ಬಂಧನವಾಗಿ ಪರಿಣಮಿಸಿದೆ. ಈ ಒಂದು ಪದ್ಧತಿಯ ಪರಿಣಾಮವಾಗಿ ಪ್ರವಾದಿಗಳ ಕಾಲದಲ್ಲಿ ಇತರರಂತೆ ಎಲ್ಲಾ ವಿಧಿವಿಧಾನ, ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದ ಸ್ತ್ರೀಯರು ಕ್ರಮೇಣ ನಾಲ್ಕು ಗೋಡೆಗಳೊಳಗೆ ಬಂಧಿಯಾದರು. ಚೀನಾ ದೇಶದವರೆಗೂ ಪ್ರವಾಸ ಮಾಡಿ ಸ್ತ್ರೀ-ಪುರುಷರೆಲ್ಲರಿಗೂ ವಿದ್ಯೆ ಅವಶ್ಯಕವೆಂದು ಬೋಧಿಸಿದ ಪ್ರವಾದಿ ಮಹಮದರ ಮಾತನ್ನು ಧಿಕ್ಕರಿಸಿ, ಸ್ತ್ರೀಯರಿಗೆ ವಿದ್ಯೆಯನ್ನು ನಿರಾಕರಿಸಲಾಯಿತು. ಧಾರ್ಮಿಕ ವಿದ್ಯಾಭ್ಯಾಸವೂ ಕೂಡಾ ದೈವಾರಾಧನೆಗೆ ಎಷ್ಟು ಬೇಕೋ ಅಷ್ಟು ಮಾತ್ರ ಲಭ್ಯವಾಯಿತು. ಇನ್ನುಳಿದ ಎಲ್ಲಾ ನಿಯಮಗಳನ್ನು, ಧರ್ಮವು ಆಕೆಗೆ ಕೊಡಮಾಡಿದ್ದ ಹಕ್ಕುಗಳನ್ನೂ ಕೂಡಾ ಆಕೆಯಿಂದ ಮರೆಮಾಡಲಾಯಿತು. ಈ ಒಂದು ಕಾರಣಕ್ಕಾಗಿ ಮುಸ್ಲಿಂ ಮಹಿಳೆ ಕೇವಲ ಬುರ್ಖಾದೊಳಗೇ ಮಾತ್ರವಲ್ಲ, ಮನೆಯ ನಾಲ್ಕು ಗೋಡೆಗಳ ನಡುವೆಯೂ ಬಂಧಿತಳಾದಳು.

ತಾವು ಗೌರವಸ್ಥ ಮನೆತನದ ಸ್ತ್ರೀಯರೆಂದು ಗುರುತಿಸಿಕೊಳ್ಳಲು ಈ ಘೋಷಾ ಪದ್ಧತಿಯನ್ನು ಮುಸ್ಲಿಂ ಮಹಿಳೆಯರು ತಮ್ಮ ಮೇಲೆ ತಾವೇ ಹೇರಿಕೊಂಡಿದ್ದಾರೆ ಎಂದು ರಾಜ್ಯಸಭಾ ಸದಸ್ಯೆ ನಜ್ಮಾ ಹೆಫ್ತುಲ್ಲಾ ಸಂಡೇ ಪತ್ರಿಕೆಯಲ್ಲಿ ವಿವರಿಸಿದ್ದಾರೆ ಎಂದು ಲೇಖಕರು ತಮ್ಮ 'ಧರ್ಮ ಮತ್ತು ಮಹಿಳೆ' ಎಂಬ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

ಈ ಒಂದು ಪದ್ಧತಿಯು ಪಡೆದಿರುವ ಅತಿರೇಖವನ್ನು ಸಾರಾ ಅವರು ತಮ್ಮ 'ವಜ್ರಗಳು' ಕಾದಂಬರಿಯಲ್ಲಿ ಚಿತ್ರಿಸುತ್ತಾರೆ. ಉಸ್ಮಾನ್ ಹಾಜಿರವರ ಮಗ ಹುಸೈನನು ಪಕ್ಕಾ ಮುಸಲ್ಮಾನನಂತಿದ್ದು, ತನ್ನ ಹೆಂಡತಿ ಮತ್ತು ತಂಗಿಯರನ್ನು ತನ್ನ ಬಿಗಿ ಮುಷ್ಟಿಯೊಳಗೆ ಬಂಧಿಸಿಟ್ಟಿರುತ್ತಾನೆ. ಮೌಲವಿಗಳ ಪ್ರಭಾವಕ್ಕೊಳಗಾಗಿದ್ದ ಈತ ಮದುವೆಯಾದ ನಂತರ ತನ್ನ ಪತ್ನಿಯ ಮೇಲೆ ಹಕ್ಕು ಚಲಾಯಿಸತೊಡಗುತ್ತಾನೆ.

ಮೊತ್ತ ಮೊದಲನೆಯದಾಗಿ ಆತ ಪತ್ನಿಗೆ ತಾಕೀತು ಮಾಡುವುದು, "ಹಗಲು ಹೊತ್ತಿನಲ್ಲಿ ಮಾಳಿಗೆಯಿಂದ ಕೆಳಕ್ಕಿಳಿಯಬಾರದು. ಮನೆಯ ಅಂಗಳದಲ್ಲಿ ಪರಪುರುಷರಾದ ಕೆಲಸದವರು ಓಡಾಡುತ್ತಿರುವ ಕಾರಣ ನನ್ನ ಹೆಂಡತಿ ಅವರ ಕಣ್ಣಿಗೆ ಬೀಳಬಾರದು"[೧೨] ಎಂಬುದು. ಹೀಗೆ ಹೆಂಡತಿ ಹಮೀದಾಳನ್ನು ಮನೆಯ ಮಾಳಿಗೆಯಲ್ಲಿ ಬಂಧಿಸಿದ ಈತ, ಊಟ-ತಿಂಡಿಗಳನ್ನು ಅಲ್ಲಿಗೇ ಸರಬರಾಜಾಗುವಂತೆ ನೋಡಿಕೊಳ್ಳುತ್ತಾನೆ. ಬಹಿರ್ದೆಸೆಗೆ ಹೋಗಬೇಕಾದರೆ ಅದು ರಾತ್ರಿಯ ವೇಳೆ ಮಾತ್ರ. ಮನೆಯಲ್ಲಿ ಅದಕ್ಕೆ ವ್ಯವಸ್ಥೆಯಿಲ್ಲದ ಕಾರಣ ಆಕೆ ಕತ್ತಲಾಗುವವರೆಗೂ ಕಾಯಬೇಕಾಗಿತ್ತು. ಅಲ್ಲದೆ ಹಮೀದಳ ತವರುಮನೆಯಲ್ಲಿ

ಸ್ತ್ರೀಯರನ್ನು ಘೋಷಾದಲ್ಲಿಡಬೇಕೆಂಬ ಕಟ್ಟುನಿಟ್ಟಾದ ನಿಯಮವೇನೂ ಇರಲಿಲ್ಲ. ತೋಟದಲ್ಲಿ ಕೆಲಸ ಮಾಡುವವರ ಮುಂದೆ, ಮನೆಗೆ ಬಂದ ಪರಪುರುಷರ ಮುಂದೆ ಮನೆಯ ಹೆಂಗಸರು ಘೋಷಾ ಇಲ್ಲದೆ ಸುಳಿದಾಡುತ್ತಾರೆ ಎಂಬ ಆರೋಪ ಹೊರಿಸಿ, ತನ್ನ ಪತ್ನಿಯನ್ನು ತವರು ಮನೆಯಿಂದಲೂ ದೂರವಿಡುತ್ತಾನೆ. ಏಳು ವರ್ಷದ ತನ್ನ ಮಗಳಿಗೆ ಈಗಿನಿಂದಲೇ ಘೋಷಾವನ್ನು ರೂಢಿಮಾಡಿಸುತ್ತಿರುತ್ತಾನೆ. ಕೂದಲು ಕಾಣದಂತೆ ತಲೆಗೆ ಬಟ್ಟೆ ಕಟ್ಟುವುದನ್ನು ಕಡ್ಡಾಯ ಮಾಡಿರುತ್ತಾನೆ.

ಒಮ್ಮೆ ತನ್ನ ತಂಗಿಯು ನಫೀಸಾಳೊಡನೆ ತೋಟದಲ್ಲಿ ಸುತ್ತಾಡುತ್ತಿರುವುದನ್ನು ಮಹಡಿಯ ಮೇಲಿಂದ ಕಂಡ ಹುಸೈನನು ಕಿಡಿಕಿಡಿಯಾಗುತ್ತಾನೆ. ಅವರು ಮನೆಗೆ ಬರುತ್ತಿದ್ದಂತೆಯೇ ರೌದ್ರಾವತಾರ ತಾಳಿದ ಈತ ತಂಗಿಯ ಕೈಹಿಡಿದೆಳೆದು ಬೆನ್ನಿನ ಮೇಲೆ ರಪರಪನೆ ಬಾರಿಸುತ್ತಾನೆ. "ನಿನಗೆ ಹೇಳುವವರು, ಕೇಳುವವರು ಯಾರೂ ಇಲ್ಲವೆಂದುಕೊಂಡೆಯಾ? ತಲೆಯ ಮೇಲೆ ಸರಿಯಾಗಿ ಬಟ್ಟೆಯೂ ಇಲ್ಲದೆ ಹೊರಗೆಲ್ಲಾ ಅಲೆಯುತ್ತೀಯಲ್ಲ? ನಾನು ಊರಿನಲ್ಲಿ ತಲೆಎತ್ತಿ ತಿರುಗಬೇಕೋ, ಬೇಡವೋ"[೧೩] ಎಂದು ಘರ್ಜಿಸುತ್ತಾ ದನಕ್ಕೆ ಬಡಿದ ಹಾಗೆ ಬಡಿಯುತ್ತಾನೆ. ಮೈನೆರೆದ ಹೆಣ್ಣುಮಕ್ಕಳು ಈ ರೀತಿ ಸುತ್ತಾಡುವುದನ್ನು ಪರಪುರುಷರು ನೋಡಬಾರದು ಎಂಬುದು ಕಟ್ಟಾ ಮುಸಲ್ಮಾನನಾದ ಆತನ ಆಲೋಚನೆ. ಈ ಕಾರಣಕ್ಕಾಗಿ ಹೆಂಡತಿ ಮತ್ತು ತನ್ನ ತಂಗಿಯರನ್ನು ಮನಬಂದಂತೆ ಶಿಕ್ಷಿಸುತ್ತಿರುತ್ತಾನೆ. ಹುಸೈನನ ತೀರಾ ಉಸಿರುಗಟ್ಟಿಸುವ ಸಂಪ್ರದಾಯಸ್ಥ ಧೋರಣೆಯಿಂದ ಆತನ ಪತ್ನಿ ಪಂಜರದ ಪಕ್ಷಿಯಾಗುತ್ತಾಳೆ. ಹೀಗೆ ಸ್ತ್ರೀರಕ್ಷಣೆಯ ನೆಪದಲ್ಲಿ ತನ್ನ ಹೆಂಡತಿ ಮತ್ತು ತಂಗಿಯರ ಸ್ವಾತಂತ್ರ್ಯಹರಣ ಮಾಡಿರುತ್ತಾನೆ. ಇಂತಹ ಕಟ್ಟುನಿಟ್ಟಾದ ಧಾರ್ಮಿಕ ನಿಯಮಗಳ ಆಚರಣೆಯಿಂದ ಸ್ತ್ರೀ ಜನಾಂಗವು ಎಷ್ಟು ರೀತಿಯಲ್ಲಿ ದೈಹಿಕ, ಮಾನಸಿಕ ಹಿಂಸೆಗೆ ಗುರುಯಾಗುತ್ತಿದ್ದಾರೆಂಬುದಕ್ಕೆ ಇದೊಂದು ನಿದರ್ಶನವೇ ಸಾಕ್ಷಿಯಾಗಿದೆ. ಈ ಸಮಾಜದಲ್ಲಿ ಹೆಣ್ಣಿನ ನೋವು, ನಿರಾಶೆಗಳಿಗೆ ಬೆಲೆಯೇ ಇಲ್ಲವಾಗಿದೆ. ಈ ಕಾದಂಬರಿಯಲ್ಲಿ ಯಾವ ಸ್ತ್ರೀ ಪಾತ್ರಗಳೂ ಕೂಡಾ ಪ್ರತಿಭಟನೆಯನ್ನಾಗಲೀ, ಪ್ರಶ್ನಿಸುವ ಧೈರ್ಯವನ್ನಾಗಲೀ ತೋರುವುದಿಲ್ಲ. ಸಂಪ್ರದಾಯದ ಬಿಗಿ ಬಂಧನದೊಳಗೆ ಉಸಿರುಕಟ್ಟಿ ಮಾತು ಹೊರಡದಂತಾಗಿದ್ದಾರೆ. ಇಲ್ಲಿನ ಸ್ತ್ರೀಯರ ಪರಿಸ್ಥಿತಿಗಳು ಈ ದೃಷ್ಟಿಯಿಂದಾಗಿ ಚಿಂತಾಜನಕವಾಗಿರುವುದನ್ನು ಕಾಣಬಹುದು.

ಇಷ್ಟೇ ಅಲ್ಲದೆ ಪ್ರಸ್ತುತ ದಿನಗಳಲ್ಲಿಯೂ ಈ ಕಟ್ಟಳೆಯು ತನ್ನ ಪ್ರಭಾವ ಬೀರುತ್ತಿರುವುದನ್ನು ಮತ್ತು ಅದರಿಂದ ನೋವನ್ನು ಅನುಭವಿಸುತ್ತಿರುವ ಸ್ತ್ರೀಯರನ್ನೂ ಕಾಣಬಹುದು. ಓರ್ವ ಮುಸ್ಲಿಂ ಹುಡುಗಿಯಾದ ಖ್ಯಾತ ಟೆನ್ನಿಸ್ ತಾರೆ ಸಾನಿಯಾ ಮಿರ್ಜಾಳ ಪ್ರಕರಣವನ್ನು ತೆಗೆದುಕೊಳ್ಳುವುದಾದರೆ, ಆಕೆಯು ಯಾವ ರೀತಿ ವಸ್ತ್ರ

ಧರಿಸಬೇಕೆಂದು ಇನ್ಯಾರೋ ಎಲ್ಲಿಯೋ ಕುಳಿತು ಆಜ್ಞೆ ಹೊರಡಿಸುತ್ತಾರೆ. ಬುರ್ಖಾ ತೊಟ್ಟೇ ಟೆನ್ನಿಸ್ ಆಡಬೇಕೆಂಬ ರೀತಿಯಲ್ಲಿದೆ ಇವರ ಆಜ್ಞೆ! ಇದು ಎಷ್ಟು ಹಾಸ್ಯಾಸ್ಪದವೆಂಬುದರ ಅರಿವು ಇವರಿಗಿದ್ದಂತಿಲ್ಲ. ಆದರೆ, ದಿಟ್ಟೆಯಾದ ಆಕೆ ಅದಕ್ಕೆ ಸಡ್ಡು ಹೊಡೆದು ತನ್ನ ಆಟ ಮುಂದುವರಿಸಿದ್ದಾಳೆ. ಆದರೆ ಆಕೆಯ ತಂದೆ-ತಾಯಿಗಳಿಗೆ ಊರವರು ಕಿರುಕುಳ ಕೊಡಲಾರಂಭಿಸಿರುವುದು ವಿಪರ್ಯಾಸದ ಸಂಗತಿ. ಇವರು ಸಮಾಜವನ್ನೆದುರಿಸಲು ಕಷ್ಟ ಪಡುತ್ತಿರುವುದೂ ಅಷ್ಟೇ ಸತ್ಯ ಸಂಗತಿ.

ಮತ್ತೊಂದು ಕಡೆ ಮೂಲಭೂತವಾದದಿಂದಾಗಿ ಇಂದು ಕೇರಳದ ಮಲಪ್ಪುರಂ ಜಿಲ್ಲೆಯಲ್ಲಿ ನಾಲ್ಕು ವರ್ಷದ ಹೆಣ್ಣು ಮಕ್ಕಳೂ ಕೂಡಾ ಬುರ್ಖಾ ಹಾಕಿಕೊಳ್ಳಬೇಕಾಗಿದೆ. ಬುರ್ಖಾ ಧರಿಸಿದ ಹೆಣ್ಣುಮಕ್ಕಳನ್ನು ಶಾಲೆಯಿಂದ ಹೊರಗೆ ಕಳುಹಿಸಲಾಗುತ್ತಿದೆ. ಮದ್ರಸಾಗಳಲ್ಲಿ ಪ್ರಾರಂಭದಿಂದಲೇ ಈ ಹೆಣ್ಣುಮಕ್ಕಳ ತಲೆಯೊಳಗೆ "ನೀನು ಹೆಣ್ಣು, ಗಂಡ ಹೇಳಿದಂತೆ ಕೇಳಿಕೊಂಡಿರಬೇಕಾದವಳು. ನೀವು ಹುಟ್ಟಿರುವುದೇ ಗಂಡಿಗಾಗಿ, ಗಂಡನನ್ನು ಸಂತೋಷಪಡಿಸುವುದಕ್ಕಾಗಿ. ತಲೆಯಿಂದ ಕಾಲಿನವರೆಗೂ ಮರೆಮಾಡಿಕೊಂಡು ಗಂಡನ ನೆರಳಾಗಿ ಬದುಕಬೇಕು. ಇಹಲೋಕದಲ್ಲಿ ಏನನ್ನೂ ಆಶಿಸಬಾರದು"[೧೮] ಎಂಬ ಮಾತುಗಳನ್ನು ತುರುಕಲಾಗುತ್ತಿದೆ. ಮದುವೆಯೇ ಹೆಣ್ಣುಮಕ್ಕಳ ಬದುಕಿನ ಏಕೈಕ ಗುರಿ ಎಂಬಂತೆ ಬಿಂಬಿಸಲಾಗುತ್ತಿದೆ.

ಒಮ್ಮೆ ಕಾಸರಗೋಡಿನ ಒಂದು ಸಮ್ಮೇಳನದ ಸಂವಾದ ಕಾರ್ಯಕ್ರಮದಲ್ಲಿ ಸಾರಾ ಅವರನ್ನು "ನೀವೇಕೆ ಬುರ್ಖಾ ಧರಿಸುವುದಿಲ್ಲ? ಇದಕ್ಕಾಗಿ ನೀವು ಸಮಾಜದಲ್ಲಿ ತೊಂದರೆಗೊಳಗಾಗಿಲ್ಲವೇ?" ಎಂದು ಪ್ರಶ್ನಿಸುತ್ತಾರೆ. ಎಲ್ಲಾ ಮುಸ್ಲಿಂ ಮಹಿಳೆಯರಂತೆ ಲೇಖಕರು ಬುರ್ಖಾ ಧರಿಸಿಕೊಂಡಿರದೆ ಸಾಧಾರಣ ಉಡುಪಿನಲ್ಲಿದ್ದುದು ಅವರಿಗೆ ಅಚ್ಚರಿಯಾಗಿರಬೇಕು. ಆಗ ಈ ಪ್ರಶ್ನೆಗೆ ಸಾರಾ ಅವರು "ನಾನು ಯಾವ ರೀತಿ ವಸ್ತ್ರಧಾರಣೆ ಮಾಡಬೇಕೆಂಬುದು ನನಗೆ ಬಿಟ್ಟ ವಿಚಾರವೇ ಹೊರತು ನನ್ನ ಸಮಾಜದ ವಿಚಾರವಲ್ಲ. ನನ್ನ ವಸ್ತ್ರಾಧಾರಣೆಗೂ, ಸಮಾಜಕ್ಕೂ ಯಾವುದೇ ಸಂಬಂಧವಿಲ್ಲ'[೧೯] ಎಂದು ಪ್ರತಿಕ್ರಿಯಿಸುತ್ತಾರೆ. ಭಾರತದ ಸಂವಿಧಾನವು ತನ್ನ ಪ್ರಜೆಗಳಿಗೆ ವ್ಯಕ್ತಿ ಸ್ವಾತಂತ್ರ್ಯ ನೀಡಿದ್ದರೂ ಧರ್ಮದ ಹೆಸರಿನಲ್ಲಿ ಮಹಿಳೆಯರ ಹಕ್ಕು ಸ್ವಾತಂತ್ರ್ಯಗಳು ಹರಣವಾಗುತ್ತಿರುವುದನ್ನು ಇವೆಲ್ಲಾ ನಿದರ್ಶನಗಳಿಂದ ಸ್ಪಷ್ಟಪಡಿಸಿಕೊಳ್ಳಬಹುದು.

ಹಾಗೆಯೇ ಮಹಿಳೆಯರ ಮಸೀದಿ ಪ್ರವೇಶದ ಕುರಿತಾದ ಮತ್ತೊಂದು ವಿಚಾರವನ್ನು ಇಲ್ಲಿ ಪ್ರಸ್ತಾಪಿಸಬಹುದು. ಮಹಿಳೆಯರು ಮಸೀದಿಗೆ ಹೋಗಿ ಸಾಮೂಹಿಕ ಪ್ರಾರ್ಥನೆಗಳಲ್ಲಿ ಪಾಲ್ಗೊಳ್ಳಲು ಮುಸ್ಲಿಂ ಸಮಾಜ ಅವಕಾಶ ನೀಡಿಲ್ಲ. ಸ್ತ್ರೀಯರು ತಂತಮ್ಮ ಮನೆಗಳಲ್ಲಿಯೇ

ದಿನದಲ್ಲಿ ಮೂರು ಬಾರಿ ನಮಾಜ್ ಮಾಡಬೇಕೆಂದು ನಿಯಮವಿದೆ. ಈ ನಿಯಮದ ಕುರಿತು ಲೇಖಕಿ ಹೀಗೆ ಪ್ರತಿಕ್ರಿಯಿಸುತ್ತಾರೆ.– "ಮಸೀದಿಯೆಂಬುದು ಸಮಾಜ ಭವನದಂತಿರುವ ಒಂದು ಸ್ಥಳವೇ ಹೊರತು ಅಲ್ಲಿ ವಿಗ್ರಹಗಳೇನೂ ಇಲ್ಲ. ವಾರಕ್ಕೊಮ್ಮೆ ಎಲ್ಲರೂ ಒಂದೆಡೆ ಸೇರಿ ನಮಾಜು ಮಾಡುವುದು ಭಾತೃತ್ವ ಭಾವನೆ ಗಟ್ಟಿಗೊಳ್ಳಲು ಮತ್ತು ಸಮಾನತೆ ಕಾಯ್ದುಕೊಳ್ಳಲು ಇರುವ ಒಂದು ಧಾರ್ಮಿಕ ಸಂಪ್ರದಾಯ. ನಮಾಜ್ ಮಸೀದಿಯಲ್ಲಿಯೇ ಮಾಡಬೇಕೆಂಬ ಕಡ್ಡಾಯವೇನೂ ಇಲ್ಲ. ದಿನದಲ್ಲಿ ರಾತ್ರಿ, ಮಧ್ಯಾಹ್ನ, ಬೆಳಗಿನ ಹೊತ್ತಿನಲ್ಲಿ ನಮಾಜ್ ಮಾಡುವುದು ಕಡ್ಡಾಯವೇ ಹೊರತು ಎಲ್ಲಿ ಮಾಡಬೇಕೆಂಬುದು ಮುಖ್ಯವಲ್ಲ. ಹಾಗಾಗಿ ಇದೊಂದು ಸಮಸ್ಯೆಯೇ ಅಲ್ಲ"[೧೬] ಎಂದು ಹೇಳುತ್ತಾರೆ. ಆದರೆ, ಮಹಿಳೆಯರ ಮಸೀದಿ ಪ್ರವೇಶದ ಕುರಿತಾಗಿ ಹೋರಾಟಗಳು ಕೇರಳದಾದ್ಯಂತ ನಡೆಯುತ್ತಿದ್ದು, ಆ ಹಕ್ಕನ್ನು ಕೇರಳದ ಮಹಿಳೆಯರು ಧಕ್ಕಿಸಿಕೊಂಡಿದ್ದಾರೆ. ಅವರು ಶುಕ್ರವಾರ ಮತ್ತು ಹುಬ್ಬದ ದಿನಗಳಂದು ಮಸೀದಿಗೆ ತೆರಳಿ ಪ್ರಾರ್ಥನೆ ಸಲ್ಲಿಸುತ್ತಿರುವುದನ್ನು ಗಮನಿಸಬಹುದು.

ಆದರೆ, ಸ್ತ್ರೀ ಪುರುಷರ ಸಮಾನತೆಯ ದೃಷ್ಟಿಯಿಂದ ನೋಡುವುದಾದರೆ ಮಸೀದಿಗೆ ಪುರುಷರಷ್ಟೇ ಮುಕ್ತ ಪ್ರವೇಶವಿರಬೇಕಾಗುತ್ತದೆ. ಅದೊಂದು ನಿರ್ಬಂಧಿತ ಕಟ್ಟಳೆಯಾಗಿಲ್ಲದಿದ್ದರೆ ಈ ಕುರಿತ ಸ್ವಾತಂತ್ರ್ಯವನ್ನು ಹೋರಾಡಿ ಪಡೆದುಕೊಳ್ಳಬೇಕಾದ ಸನ್ನಿವೇಶವಿರುತ್ತಿರಲಿಲ್ಲ. ಒಟ್ಟಾರೆಯಾಗಿ ಮುಸ್ಲಿಂ ಸಮಾಜವು ಆರ್ಥಿಕ, ಸಾಮಾಜಿಕ ಹಿಂದುಳಿಯುವಿಕೆಯಿಂದಾಗಿ ಅಜ್ಞಾನ, ಮೂಢನಂಬಿಕೆ, ಬಡತನಕ್ಕೆ ಬಲಿಯಾಗಿ ನರಳುತ್ತಿರುವ ರೋಗಗ್ರಸ್ಥ ಸ್ಥಿತಿಯಲ್ಲಿದೆ. ಜೊತೆಗೆ ಇವರಿಗೆ ಶಿಕ್ಷಣವಿಲ್ಲದೆ ಜ್ಞಾನದ ಬಾಗಿಲು ಮುಚ್ಚಿಕೊಂಡಿವೆ. ಇವು ಮುಸ್ಲಿಂ ಸಮಾಜಕ್ಕಂಟಿದ ಶಾಪಗಳಂತಿವೆ. ಇವೆಲ್ಲದರ ಜೊತೆಗೆ ತಮ್ಮ ಮೂಗಿನ ನೇರಕ್ಕೆ ಧರ್ಮಗ್ರಂಥಗಳನ್ನು ವ್ಯಾಖ್ಯಾನಿಸುವ ಧಾರ್ಮಿಕ ಮುಖಂಡರು ಸ್ತ್ರೀಯರನ್ನು ಧರ್ಮದ ಹೆಸರಿನಲ್ಲಿ ಬಲಿಪಶುವಾಗಿಸುತ್ತಿದ್ದಾರೆ. ಇಷ್ಟೇ ಅಲ್ಲದೆ ಉಸಿರುಗಟ್ಟಿಸುವ ವಾತಾವರಣದಲ್ಲಿಟ್ಟಿರುವ ಕೌಟುಂಬಿಕ ಚೌಕಟ್ಟುಗಳು ಒಂದೆಡೆಯಾದರೆ, ಮತ್ತೊಂದೆಡೆ ಬಹುಪತ್ನಿತ್ವ, ತಲಾಖ್‌ನ ಏಕಪಕ್ಷೀಯ ತೀರ್ಮಾನಗಳಿಂದಾಗಿ ಮುಸ್ಲಿಂ ಮಹಿಳಾಲೋಕ ತಲ್ಲಣಗೊಂಡಿದೆ.

ಈ ಎಲ್ಲಾ ಕಟ್ಟುಪಾಡುಗಳ ಪರಿಣಾಮವನ್ನು ಸಾರಾ ಅವರು ತಮ್ಮ ಕಾದಂಬರಿಗಳಲ್ಲಿ ಎತ್ತಿಹಿಡಿಯುತ್ತಾ, ಇಂತಹ ನಿಯಮಗಳನ್ನು ವಿರೋಧಿಸಬೇಕೆಂದು ಮುಸ್ಲಿಂ ಸಮಾಜದ ಸ್ತ್ರೀಯರಿಗೆ ಕರೆಕೊಡುತ್ತಾರೆ. ಸಮಾಜದಲ್ಲಿ ಹೊಸಬೆಳಕೊಂದು ಮೂಡಬೇಕು, ಹೊಸ ಸಮಾಜದ ಉದಯವಾಗಬೇಕು. ಅನಿಷ್ಠ ಪದ್ಧತಿಗಳ ವಿರುದ್ಧ ಹೆಣ್ಣುಮಕ್ಕಳೆಲ್ಲರೂ ಸಹನೆಯಿಂದಿರದೆ, ಒಟ್ಟಾಗಿ ಸೇರಿ ವಿರೋಧಿಸಲು ಮುಂದಾಗಬೇಕೆಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ.

೧. ಸಾರಾ ಅಬೂಬಕ್ಕರ್ 'ಚಂದ್ರಗಿರಿಯ ತೀರದಲ್ಲಿ' ಮುನ್ನುಡಿಯಲ್ಲಿ
೨. ಅದೇ – ಮುನ್ನುಡಿಯಲ್ಲಿ
೩. ಅದೇ – ಪುಟ – ೮೯
೪. ಅದೇ – 'ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ' (ಧರ್ಮ ಮತ್ತು ಮಹಿಳೆ) ಪುಟ – ೨೨೩
೫. ಅದೇ – ಪುಟ – ೨೨೦
೬. ಅದೇ – 'ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ' ಪುಟ– ೨೨೪
೭ ಕೆ.ಷರೀಫಾ – ಬಂಡಾಯ ಮುಸ್ಲಿಂ ಸಂಯೋಜನೆ – 'ಹೆಣ್ಣಿನ ತಲ್ಲಣಗಳು' ಪುಟ – ೪೧
೮. ಸಾರಾ ಅಬೂಬಕ್ಕರ್ (೧೯೮೫) 'ಸಹನಾ' ಕಾದಂಬರಿ ಪುಟ – ೧೨೭
೯. ಅದೇ – ಪುಟ – ೧೭೬
೧೦. ಅದೇ – ಪುಟ – ೧೭೬
೧೧. ಅದೇ – 'ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ' (ಧರ್ಮ ಮತ್ತು ಮಹಿಳೆ) ಪುಟ – ೨೧೯
೧೨. ಅದೇ – 'ವಜ್ರಗಳು' ಪುಟ – ೧೨೧
೧೩. ಅದೇ – ವಜ್ರಗಳು ಪು–೧೩೦.
೧೪ ಅದೇ – 'ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ' ಪು– ೧೧೫–೧೧೬
೧೫. ಅದೇ – 'ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ' (ಶಿಕ್ಷೆ ನೀಡುವ ಹಕ್ಕು ದೇವರಿಗೆ ಮಾತ್ರ ಇದೆ) ಪುಟ – ೧೦೭
೧೬. ಅದೇ – ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ (ಮುಸ್ಲಿಂ ಸಮಾಜದ ಮಹಿಳೆಯರ ಕೆಲವು ಸಮಸ್ಯೆಗಳು) ಪುಟ – ೧೧೦

ಅಧ್ಯಾಯ–೭

ಉಪಸಂಹಾರ

ಜಾಗತಿಕ ಮಟ್ಟದಲ್ಲಿ ಅವಲೋಕಿಸಿದಾಗ ಮುಸ್ಲಿಂ ಸಾಮಾಜಿಕ ವ್ಯವಸ್ಥೆಯು ಅತ್ಯಂತ ಸೂಕ್ಷ್ಮ ಹಾಗೂ ಕಠಿಣವಾದ ಆಚರಣೆಗಳಿಂದ ಕೂಡಿ, ಸಾಮಾನ್ಯ ಮನುಷ್ಯರ ಚಿಂತನೆಗೆ ನಿಲುಕದ ಕಗ್ಗಂಟಾಗಿದೆ. ಖುರಾನಿನ ಒಂದೊಂದು ನೀತಿನಿಯಮ, ಸಂಪ್ರದಾಯ, ಕಟ್ಟುಪಾಡುಗಳ ಹಿನ್ನೆಲೆಯಲ್ಲಿಯೂ ಸದುದ್ದೇಶದಿಂದ ಕೂಡಿದ ಚಿಂತನೆಗಳೇ ಇವೆ. ಆದರೆ ಅವುಗಳನ್ನು ತಪ್ಪಾಗಿ ಅರ್ಥೈಸುತ್ತಿರುವ ಮತಪಂಡಿತರ ಅವಕಾಶವಾದಿತನದಿಂದಾಗಿ, ಸಾರ್ವತ್ರಿಕ ಸಮಾನತೆಯ ದೃಷ್ಟಿಯಿಂದ ಕೆಲವೊಂದು ನಿಬಂಧನೆಗಳು ವ್ಯಕ್ತಿ ಸ್ವಾತಂತ್ರ್ಯಕ್ಕೆ ತೀವ್ರತರವಾದ ಪ್ರತಿರೋಧವನ್ನುಂಟು ಮಾಡುತ್ತವೆ.

ಇಂತಹ ಅದೆಷ್ಟೋ ಅವೈಚಾರಿಕ ನಿಲುವುಗಳಿಂದಾಗಿ ಹೆಮ್ಮರವಾಗಿ ಬೆಳೆದಿರುವ ಮುಸ್ಲಿಂ ಸಂಪ್ರದಾಯಗಳನ್ನು ಪ್ರಶ್ನಿಸುವುದಾಗಲೀ, ವಿಧಿವಿಧಾನಗಳನ್ನು ಮೀರುವುದಾಗಲೀ, ಅವೈಜ್ಞಾನಿಕ ಆಚರಣೆಗಳನ್ನು ಪ್ರತಿಭಟಿಸುವುದಾಗಲೀ, ವಿಶಾಲ ದೃಷ್ಟಿಕೋನದಿಂದ ಸಮಾನತೆಯ ತತ್ವ ಸಂದೇಶಗಳನ್ನು ಸಾರುವುದಾಗಲೀ ಇವೆಲ್ಲವೂ ಇಸ್ಲಾಂ ಧರ್ಮಕ್ಕೆ ವಿರೋಧ ಅಥವಾ ಪಾಪ ಕೃತ್ಯಗಳೆಂಬುದು ಅಪ್ರಬುದ್ಧ, ಅರೆಬುದ್ಧಿಶಾಲಿ ಸಂಪ್ರದಾಯವಾದಿಗಳ ಲೆಕ್ಕಾಚಾರ.

ಇಂತಹ ಮೌಢ್ಯ–ಜಾಡ್ಯಗಳ ನಡುವೆ ಸಾಮಾಜಿಕ ಪರಿವರ್ತನೆಗೆ ಮುಂದಾಗುವ ಸಾರಾ ಅವರ ಕಾದಂಬರಿಗಳಲ್ಲಿ ಸಾಮಾಜಿಕ ಸ್ಥಿತ್ಯಂತರಗಳು ಸುಧಾರಣೆಯ ಮೈಲಿಗಲ್ಲಾಗಿವೆ. ಕಾದಂಬರಿಯ ಪ್ರಕಾರದಲ್ಲಿ ಕನ್ನಡದಲ್ಲಿ ಮೊಟ್ಟಮೊದಲ ಬಾರಿಗೆ ಮುಸ್ಲಿಂ ಸಮಾಜದ ಸಂಸ್ಕೃತಿಯನ್ನು ದಾಖಲಿಸಿದ ಹೆಗ್ಗಳಿಗೆ ಸಾರಾ ಅವರದು. ಇವರ ಒಂದೊಂದು ಕಾದಂಬರಿಗಳು ಮುಸಲ್ಮಾನ ಸಮಾಜದ ಒಂದೊಂದು ಮಗ್ಗುಲುಗಳನ್ನು ಪರಿಚಯಿಸುತ್ತವೆ.

ಇವರ ಕಾದಂಬರಿಗಳನ್ನೆಲ್ಲ ಒಳಹೊಕ್ಕು ವಿಹರಿಸುತ್ತಾ ಹೋದಂತೆ, ಹೊಸದೊಂದು ಅಪರೂಪದ ಪ್ರಪಂಚ ಪ್ರವೇಶ ಮಾಡಿದ ಅನುಭವವೇದ್ಯವಾಗುತ್ತದೆ. ಇವರ ಬರಹಗಳಿಂದಾಗಿ ನಮ್ಮ ಸುತ್ತಮುತ್ತಲೇ ಇದ್ದು, ನಮಗೆ ದೂರವಾಗಿಯೇ ಇದ್ದ, ವಿನಾಕಾರಣ ದ್ವೇಷಕ್ಕೆ, ಹಿಂಸೆಗೆ ಗುರಿಯಾಗುತ್ತಿರುವ ಅಸಹಾಯಕ ಜನಸಮುದಾಯವೊಂದರ ಬದುಕು ಪ್ರತ್ಯಕ್ಷವಾಗ ತೊಡಗಿದೆ. ಈ ನಿಟ್ಟಿನಲ್ಲಿ ಮುಸ್ಲಿಂ ಸಂವೇದನೆಗಳು ಸಮರ್ಥ ಅಭಿವ್ಯಕ್ತಿಯಾಗಿ ಮೂಡಿಬಂದದ್ದು ಸಾರಾ ಅವರಲ್ಲಿ.

ಸಾರಾ ಅವರು ತಮ್ಮ ಎಲ್ಲಾ ಕಥೆ ಕಾದಂಬರಿಗಳಲ್ಲಿ ಮುಸ್ಲಿಂ ಸಮಾಜದಲ್ಲಿರುವ ಸ್ತ್ರೀ-ಪುರುಷರ ನಡುವಿನ ಕಾನೂನಿನ ತಾರತಮ್ಯ ಮತ್ತು ಸಾಮಾಜಿಕ ನಡವಳಿಕೆಗಳಲ್ಲಿನ ತಾರತಮ್ಯಗಳ ಬಗೆಗಿನ ಚಿತ್ರಣವನ್ನು ಅತ್ಯಂತ ನೈಜವಾಗಿ ತಂದಿದ್ದಾರೆ.

ಯಾವುದೇ ಒಂದು ಕೃತಿಯು ಸಮಕಾಲೀನ ಸಮಾಜದ ವಿವಿಧ ಮುಖಗಳನ್ನು ಪರಿಚಯಿಸುತ್ತಾ ಹೋಗುತ್ತದೆ. ಅಂದಿನ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಸ್ಥಿತ್ಯಂತರಗಳ ಮೇಲೆ ಬೆಳಕು ಚೆಲ್ಲುತ್ತದೆ. ಅದೇ ಆ ಕೃತಿಯ ಒಟ್ಟಾರೆ ಆಶಯ, ಉದ್ದೇಶವೂ ಆಗಿರುತ್ತದೆ. ಹೀಗೆ ಒಂದು ಕಾಲಘಟ್ಟದಲ್ಲಿ ರಚನೆಯಾಗುವ ಕೃತಿಗಳು ಭವಿಷ್ಯದಲ್ಲಿ ಅಮೂಲ್ಯ ದಾಖಲೆಗಳಾಗಿ ನಿಲ್ಲುತ್ತವೆ. ಈ ಒಂದು ದೃಷ್ಟಿಕೋನದಲ್ಲಿ ಸಾರಾ ಅವರ ಕೃತಿಗಳೂ ಕೂಡ ದಾಖಲಾರ್ಹ ವಸ್ತು ಕೇಂದ್ರಿತ ಬರಹಗಳಾಗಿವೆ.

ಸಾರಾ ಅವರು ಉದ್ದೇಶಪೂರ್ವಕವಾಗಿ ಯಾವುದೇ ಸ್ತ್ರೀವಾದಿ ನೆಲೆಯಿಂದ ಹೊರಡುವುದಿಲ್ಲ. ಅವರ ದರ್ಶನವೂ ಕೂಡ ಸಂಪೂರ್ಣ ಅನುಭವ ಕೇಂದ್ರಿತವಾದದ್ದು, ಬಹುಶಃ ಹೀಗಾದಾಗಲೇ ಸ್ತ್ರೀ ಸಾಹಿತ್ಯ ದಲಿತ ಸಾಹಿತ್ಯದಂತೆ ತನ್ನ ನಿಜವಾದ ಪ್ರಭಾವ ಬೀರಬಲ್ಲದು. ಸಾರಾ ಅವರು ಮುಖ್ಯವಾಗಿ ಎತ್ತುವ ಪ್ರಶ್ನೆ 'ತಲಾಖ್' ವಿಧಿವಿಧಾನಗಳಿಗೆ ಕುರಾನಿನಲ್ಲಿರುವ ಸರಿಯಾದ ವ್ಯಾಖ್ಯಾನ ಏನು? ಯಾರು, ಯಾವಾಗ ಅದನ್ನು ಉಪಯೋಗಿಸಬಹುದು? ಮಹಿಳೆಯರ ಮೇಲೆ ಕ್ರೂರ ಅಸ್ತ್ರವಾಗಿ ಬಳಸಲ್ಪಟ್ಟಿರುವ ಈ ಪದ್ಧತಿಯ ಮರು ಪರಿಶೀಲನೆ ಸಾಧ್ಯವಿಲ್ಲವೆ? ಮಹಿಳೆಯರು ತಮ್ಮ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಮೌನವಾಗಿ ಸಹಿಸಿಕೊಂಡಿರುವುದು ಸರಿಯೇ? ಎಂಬ ಜಿಜ್ಞಾಸೆಗೆ ಇಲ್ಲಿನ ಕಾದಂಬರಿಗಳು ತೊಡಗುತ್ತವೆ. ಹಾಗೆಯೇ ಈ ಕಾನೂನುಗಳು ಪುರುಷರ ಅನುಕೂಲಕ್ಕೆ ದುರುಪಯೋಗವಾಗುತ್ತಿರುವ ಸಂದರ್ಭದಲ್ಲಿಯೂ ಕೂಡ ಧರ್ಮ ಸಂರಕ್ಷಕರು ಮಾತನಾಡದೆ ಮೌನ ತಾಳಿರುವುದಕ್ಕೆ ಕಾರಣಗಳೇನು? ಎಂಬ ಚರ್ಚೆಗೂ ಗ್ರಾಸವಾಗಿದೆ. ಸಾರಾ ಅವರು ತಾವು ಕಂಡ, ಕಣ್ಣೆದುರೇ ನಡೆದ ಘಟನೆಗಳನ್ನು ಆಧರಿಸಿ ಕಥೆ-ಕಾದಂಬರಿಗಳಿಗೆ ರೂಪು ಕೊಟ್ಟಿರುವುದೇ ಅಲ್ಲದೆ, ವಾಸ್ತವತೆಯನ್ನು ತೆರೆದ ಕಣ್ಣಿನಿಂದ ಕಾಣುವ, ಕಾಣಿಸುವ, ವಿಚಾರ ವಿಮರ್ಶೆಗೆ ಹಚ್ಚಿ ನೋಡುವ ಇವರ ದೃಷ್ಟಿಕೋನದಿಂದಾಗಿ ಇವರ ಕೃತಿಗಳಿಗೆ ಅನುಭವದ ಅಧಿಕೃತತೆ ಬಂದಿದೆ. ಹಾಗೆಯೇ ಧರ್ಮವನ್ನು ಉರುಳಾಗಿ ಮಾಡಿರುವ ಪುರುಷ ಆಶಯಗಳನ್ನು ಪರಿಚಯಿಸುತ್ತಾ, ಪ್ರಶ್ನಿಸುತ್ತಾ ಧಾರ್ಮಿಕ ವಿಧಿ-ವಿಧಾನಗಳನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತಿರುವ ಸ್ವಾರ್ಥತೆಯ ವಿರುದ್ಧ ಸಾತ್ವಿಕಕ್ರೋಧ ವ್ಯಕ್ತಪಡಿಸುತ್ತಾರೆ.

ಸಾರಾ ಅವರ 'ಚಂದ್ರಗಿರಿ ತೀರದಲ್ಲಿ', 'ಸಹನಾ', 'ವಜ್ರಗಳು', 'ಸುಳಿ' – ಈ ಕಾದಂಬರಿಗಳಲ್ಲಿ ಬರುವ ಪಾತ್ರಗಳೆಲ್ಲ ಅಸಹಾಯಕ ಹೆಣ್ಣು ಮಕ್ಕಳ ಪಾತ್ರಗಳೇ ಆಗಿವೆ.

ಹೆಣ್ಣು ಧಾರ್ಮಿಕವಾಗಿ ಶೋಷಣೆಗೆ ಗುರಿಯಾಗಿಸುತ್ತಿರುವ ಕರಾಳತೆಯ ಸಮಸ್ಯೆಗಳ ಕಡೆ ಚಿಕಿತ್ಸಕ ನೋಟ ಹರಿಸಿದ್ದಾರೆ. ಬಾಲ್ಯ ವಿವಾಹ, ಬಹುಪತ್ನಿತ್ವ, ತಲಾಖ್, ಕುಟುಂಬ ಯೋಜನೆಯ ಕುರಿತಾದ ಅಜ್ಞಾನ, ಶಿಕ್ಷಣದ ಕೊರತೆಯಿಂದ ಕೂಡಿದ ಮುಸ್ಲಿಂ ಮಹಿಳೆಯರ ಬದುಕನ್ನು ಸಾರಾ ಅವರು ಇಲ್ಲಿ ವಿಷಾದದಿಂದ ಕಂಡಿದ್ದಾರೆ. ಹಾಗೂ ಪರಿಹಾರದ ದಿಕ್ಕನ್ನು ಸೂಚಿಸಿ ಬದಲಾವಣೆಯನ್ನು ಬಯಸುತ್ತಾರೆ. ಈ ಎಲ್ಲಾ ಅಂಶಗಳನ್ನು ಕುರಿತು ಈ ನಿಬಂಧದಡಿಯಲ್ಲಿ ವಿವರವಾಗಿ ವಿಶ್ಲೇಷಿಸಲಾಗಿದೆ.

ಇವರ ಕೃತಿಗಳ ವಸ್ತು ಕೆಳಮಧ್ಯಮ ಅಥವಾ ಮಧ್ಯಮ ವರ್ಗದವರನ್ನು ಕುರಿತಾಗಿದ್ದು, ಕರಾವಳಿಯ ಬಡ ಮುಸ್ಲಿಂ ಕೂಲಿಕಾರ ಹೆಣ್ಣುಗಳ ಬದುಕಿನ ನೋವು, ಯಾತನೆ, ಕನಸುಗಳ ಚಿತ್ರಣವೇ ಇವರ ಕೃತಿಗಳ ಕೇಂದ್ರ ಪ್ರಜ್ಞೆಯಾಗಿದೆ. ಅನುಕಂಪ ತುಂಬಿದ ಸರಳ ಹಾಗೂ ನೈಜ ಶೈಲಿಯಲ್ಲಿ ಈ ಎಲ್ಲಾ ವಿವರಗಳನ್ನು ಓದುಗರಿಗೆ ನೀಡುತ್ತಾರೆ. ವ್ಯವಸ್ಥೆಯು ಇವರ ಬದುಕನ್ನು ಹತ್ತಿಕ್ಕುವ, ಬಗೆಯನ್ನು, ನಿಷ್ಠೂರ ವಿಡಂಬನೆಗೆ ಒಳಗು ಮಾಡುವ ಸಾಮರ್ಥ್ಯವನ್ನು ಸಾರಾ ಅವರ ಕಾದಂಬರಿಗಳು ಪಡೆದುಕೊಂಡಿವೆ. ಇವರದು ವ್ಯವಸ್ಥೆಯ ಬದಲಾವಣೆಯತ್ತ ಹಂಬಲವುಳ್ಳ ನಿಲುವು. ಸಾಂಸ್ಕೃತಿಕ ಪರಿಸರ ಒಂದರ ಧಾರ್ಮಿಕ ಆಚರಣೆಗಳನ್ನು ಚರ್ಚೆಗೆ ಒಳಪಡಿಸುವ ಮೂಲಕ, ಅಪರಿಚಿತವಾದ ವಸ್ತು ಒಂದನ್ನು ಸಾಹಿತ್ಯ ಲೋಕಕ್ಕೆ ಪರಿಚಯಿಸುವುದರ ಜೊತೆಗೆ, ಬದುಕನ್ನು ಹಸನುಗೊಳಿಸಲು ತುಡಿಯುವ ಇತ್ಯಾತ್ಮಕ ಚಿಂತನೆಗಳನ್ನು ಹೊಳೆಯಿಸಿರುವುದು ಗಮನಾರ್ಹ ಸಂಗತಿಯಾಗಿದೆ. ಅನುಭವಗಳನ್ನು ತೀವ್ರವಾಗಿ ಅಭಿವ್ಯಕ್ತಿಸುವ, ಪಾತ್ರಗಳ ಒಳಹೊರಗನ್ನು ಸೂಕ್ಷ್ಮವಾಗಿ ಗ್ರಹಿಸುವ ಮತ್ತು ಆಡು ಭಾಷೆಯ ಅರ್ಥಪೂರ್ಣ ಬಳಕೆಯ ಕಲೆ ಸಾರಾ ಅವರ ಬರವಣಿಗೆಯ ವೈಶಿಷ್ಟ್ಯವಾಗಿದೆ.

ಕೌಟುಂಬಿಕ ವಲಯದೊಳಗಿನ ಹಿಂಸೆ ಅದನ್ನು ಶಿಕ್ಷಣವಿಲ್ಲದೆ ಮತ್ತು ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಪ್ರತಿಭಟಿಸಲಾರದ ಅಸಹಾಯಕತೆಯಿಂದ ನರಳುವ ಹೆಣ್ಣಿನ ಚಿತ್ರಣಗಳನ್ನು ಪ್ರಸ್ತುತ ನಿಬಂಧದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹಾಗೆಯೇ ಪ್ರತಿಭಟನಾತ್ಮಕ ಮನೋಧರ್ಮ ಹೊಂದಿದ ಕೆಲವು ಹೆಣ್ಣುಗಳು ಕೌಟುಂಬಿಕ ಚೌಕಟ್ಟನ್ನು ತ್ಯಜಿಸಿ ಹೊರಬಂದು ಆರ್ಥಿಕ ಸ್ವಾವಲಂಬಿಯಾಗಿ, ಸ್ವತಂತ್ರವಾಗಿ ಬದುಕಿ ತೋರಿಸುವ ಚಿತ್ರಣವು ಇಲ್ಲಿದೆ. ತಲಾಖ್ ಅಥವಾ ಬಹುಪತ್ನಿತ್ವದಂತಹ ಪದ್ಧತಿಯಿಂದ ಜೀವಾಂಶವಿಲ್ಲದೆ ಅತಂತ್ರ ಸ್ಥಿತಿಗೆ ತಳ್ಳಲ್ಪಟ್ಟ ಮಹಿಳೆಯರ ಜೀವನೋಪಾಯಕ್ಕೆ, ಕಾನೂನಿನಲ್ಲಿ ಆಗಬೇಕಾದ ಸುಧಾರಣೆಗಳನ್ನು ಲೇಖಕರು ಈ ಮೂಲಕ ಆಶಿಸುತ್ತಾರೆ. ಅಜ್ಞಾನ, ಮೂಡನಂಬಿಕೆಗಳನ್ನು ಹೋಗಲಾಡಿಸಲು ಶಿಕ್ಷಣದ ಅಗತ್ಯತೆಯನ್ನು ಪ್ರತಿಪಾದಿಸುವ ಲೇಖಕರ ನಿಲುವುಗಳನ್ನು ಕುರಿತಾಗಿಯೂ ಇಲ್ಲಿ ಪರಾಮರ್ಶೆ ಕೈಗೊಳ್ಳಲಾಗಿದೆ.

ಮುಸ್ಲಿಂ ಸಮಾಜದ ಸಮಸ್ಯೆಗಳ ಕುರಿತು ಸಾಮಾಜಿಕ ನೆಲೆಯಲ್ಲಿ ಚಳುವಳಿಗಳಾಗಲೀ, ಹೋರಾಟಗಳಾಗಲೀ, ಕಾಣುತ್ತಿಲ್ಲವಾದ್ದರಿಂದ ಬಾಹ್ಯಪ್ರೇರಣೆ ಇಲ್ಲದಿದ್ದರೂ ಸ್ವತಃ ಮಹಿಳೆಯರಿಗೇ ಇಸ್ಲಾಂ ಸಮಾಜದ ಮೌಲ್ಯಗಳು, ಕಾನೂನುಗಳು, ಬದಲಾಗಬೇಕೆಂದು ಅನಿಸಿದೆ. ಈ ಒಂದು ಧ್ವನಿ ಈ ಕೃತಿಗಳ ಮೂಲಕ ವ್ಯಕ್ತವಾಗಿರುವುದನ್ನು ಗಮನಿಸಬಹುದು.

ಆದರೆ ಸಾರಾ ಅವರ ಸಾಹಿತ್ಯವೆಲ್ಲವು ಕೆಲವು ಮಿತಿಗಳಿಗೆ ಒಳಪಟ್ಟು ರೂಪುಗೊಂಡಿದೆ. ಇಲ್ಲಿನ ಸ್ತ್ರೀ ಪಾತ್ರಗಳು ಧರ್ಮದ ಮಿತಿಯೊಳಗೇ ವರ್ತಿಸುತ್ತವೆಯೇ ಹೊರತು ಅವುಗಳನ್ನು ಮೀರುವ ಧೈರ್ಯ ತೋರುವುದಿಲ್ಲ. ಇಲ್ಲಿನ ಸ್ತ್ರೀಯರ ಒಳನೋವುಗಳಿಗೆ ಸಾತ್ವಿಕ ಕ್ರೋಧವನ್ನಷ್ಟೇ ವ್ಯಕ್ತಪಡಿಸುತ್ತಾರೆಯೇ ಹೊರತು ವ್ಯವಸ್ಥೆಯ ವಿರುದ್ಧ ಸಿಡಿದೇಳುವುದಿಲ್ಲ. ಈ ರೀತಿಯ ಕಟುವಲ್ಲದ ವಿರೋಧ ಇವರ ಸಾಹಿತ್ಯದ ಒಂದು ಮುಖ್ಯ ಮಿತಿಯಾಗಿ ಕಂಡುಬರುತ್ತದೆ.

ಹಾಗೆಯೇ ಲೇಖಕರ ಒಟ್ಟಾರೆ ಆಶಯ, ಉದ್ದೇಶ, ಆದರ್ಶ, ಪ್ರತಿಭಟನೆಗಳ ಕುರಿತಾಗಿಯೂ ಘಟನೆಗಳ ಹಿನ್ನೆಲೆಯಲ್ಲಿ ವಿವರವಾಗಿ ಪರಿಶೀಲಿಸಿ ಈ ನಿಬಂಧದ ವ್ಯಾಪ್ತಿಯೊಳಗೆ ವಿಶ್ಲೇಷಿಸಲಾಗಿದೆ. ಅಲ್ಲದೆ ಕಾದಂಬರಿಗಳ ವಿಭಿನ್ನ ದೃಷ್ಟಿಕೋನಗಳನ್ನು ಅರ್ಥೈಸಿಕೊಂಡು ಹಲವು ಆಯಾಮಗಳಲ್ಲಿ ಇವುಗಳನ್ನು ಅಧ್ಯಯನ ಮಾಡಲಾಗಿದೆ. ಸಮಾಜದ ದ್ವಿತೀಯ ಪ್ರಜೆಯಾಗಿ, ಕಾಮದ ವಸ್ತುವಾಗಿ, ಹೆರುವ ಯಂತ್ರವಾಗಿ, ನಾಲ್ಕು ಗೋಡೆಗಳಲ್ಲಿ ಬಂಧಿಯಾಗಿ, ಆರ್ಥಿಕ ಪರಾವಲಂಬನೆಯಲ್ಲಿ ದಾಸ್ಯ ಪ್ರವೃತ್ತಿಯಿಂದ ಅಬಲೆ ಎನಿಸಿಕೊಂಡ ಮುಸ್ಲಿಂ ಸಮಾಜದ ಸ್ತ್ರೀಯರ ಹಲವಾರು ಸಮಸ್ಯೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಸವಿವರವಾಗಿ, ಆಧಾರ ಸಮೇತ ವಿಶ್ಲೇಷಿಸುವ ಪ್ರಯತ್ನ ಕೈಗೊಳ್ಳಲಾಗಿದೆ.

ಅಲ್ಲದೇ ಹಲವಾರು ಧಾರ್ಮಿಕ ಕಟ್ಟುಪಾಡುಗಳ ಇಕ್ಕಟ್ಟಿನಲ್ಲಿ ಸಿಲುಕಿ ಹೆಣಗಾಡುತ್ತಿರುವ, ಹೆಜ್ಜೆ ಹೆಜ್ಜೆಗೂ ಶೋಷಣೆಗೆ ದೂಡಲ್ಪಡುತ್ತಿರುವ ಮುಸ್ಲಿಂ ಸ್ತ್ರೀಯರ ವೇದನೆಗಳನ್ನು ವಿಭಿನ್ನ ನೆಲೆಗಟ್ಟಿನಲ್ಲಿ, ಲೇಖಕರ ಆಶಯವನ್ನು ಮುನ್ನೆಲೆಯಾಗಿಟ್ಟುಕೊಂಡು ಈ ನಿಬಂಧದಡಿಯಲ್ಲಿ ಚರ್ಚಿಸಲಾಗಿದೆ. ಒಟ್ಟಾರೆಯಾಗಿ ಬಂಡಾಯ ಸಂದರ್ಭದಲ್ಲಿ ಹೊರಹೊಮ್ಮಿದ ಮುಸ್ಲಿಂ ಸಂವೇದನಾ ಸಾಹಿತ್ಯದ ಪ್ರಮುಖ ಲೇಖಕರಾಗಿ ಸಾರಾ ಅವರು ತಮ್ಮ ಕೃತಿಗಳ ಮೂಲಕ ತನ್ನ ಸಮಾಜದ, ಧರ್ಮದ ಕುರಿತು ತಿಳಿಸಿಕೊಡುತ್ತಾ ಎಲ್ಲಾ ಅನ್ಯಾಯ, ಮೋಸ, ವಂಚನೆಗಳ ವಿರುದ್ಧ ಮುಸ್ಲಿಂ ಮಹಿಳೆಯರು ಜಾಗೃತರಾಗಬೇಕೆಂಬ ಕರೆಕೊಡುತ್ತಾರೆ. ಮಾನವೀಯ ಮನೋಧರ್ಮ ಹೊಂದಿದ ಇವರು ಸಮಾಜ ಸುಧಾರಣೆಯ ಉದ್ದೇಶವಿಟ್ಟುಕೊಂಡು ಆ ನಿಟ್ಟಿನಲ್ಲಿಯೇ ಬೆಳೆಯುತ್ತಿರುವ ಸಮರ್ಥ, ಯಶಸ್ವಿ ಲೇಖಕಿಯಾಗಿದ್ದಾರೆ ಎನ್ನಬಹುದು.

<u>ಆಕರ ಗ್ರಂಥಗಳು</u>

೧. ಸಾರಾ ಅಬೂಬಕ್ಕರ್ : ಚಂದ್ರಗಿರಿಯ ತೀರದಲ್ಲಿ–೧೯೮೪
ಚಂದ್ರಗಿರಿ ಪ್ರಕಾಶನ
ಮಂಗಳೂರು.

೨. ಸಾರಾ ಅಬೂಬಕ್ಕರ್ : ಸಹನಾ– ೧೯೮೫
ಚಂದ್ರಗಿರಿ ಪ್ರಕಾಶನ
ಮಂಗಳೂರು.

೩. ಸಾರಾ ಅಬೂಬಕ್ಕರ್ : ವಜ್ರಗಳು– ೧೯೮೮
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ.,
ಬೆಂಗಳೂರು.

೪. ಸಾರಾ ಅಬೂಬಕ್ಕರ್ : ಕದನವಿರಾಮ– ೧೯೯೧
ಸ್ನೇಹ ಪ್ರಕಾಶನ
ಬೆಂಗಳೂರು.

೫. ಸಾರಾ ಅಬೂಬಕ್ಕರ್ : ತಳ ಒಡೆದ ದೋಣಿಯಲಿ–೨೦೦೬
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಬೆಂಗಳೂರು.

೬. ಸಾರಾ ಅಬೂಬಕ್ಕರ್ : ಪ್ರವಾಹ–ಸುಳಿ – ೨೦೦೪
ಚಂದ್ರಗಿರಿ ಪ್ರಕಾಶನ
ಮಂಗಳೂರು.

೭. ಸಾರಾ ಅಬೂಬಕ್ಕರ್ : ಪಂಜರ – ೨೦೦೪
ಚಂದ್ರಗಿರಿ ಪ್ರಕಾಶನ
ಮಂಗಳೂರು.

ಪರಾಮರ್ಶನ ಗ್ರಂಥಗಳು

೧. ಉಷಾ.ಎಂ. : ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು–೨೦೦೪
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೨. ಸಿದ್ದಲಿಂಗಯ್ಯ : ಜನ ಸಂಸ್ಕೃತಿ–೨೦೦೭
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೩. ಸುಮಿತ್ರಬಾಯಿ.ಬಿ.ಎನ್. : ಸ್ತ್ರೀವಾದ–೧೯೯೯
ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು.

೪. ಶ್ರೀಮತಿ.ಹೆಚ್.ಎಸ್. : ಸ್ತ್ರೀವಾದ–೨೦೦೪
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೫. ಗೀತಾ ಶೆಣ್ಯೆ : ಸ್ತ್ರೀ ವಿಮುಕ್ತಿ ಚಿಂತನೆ:ಒಂದು ಅಧ್ಯಯನ–೨೦೦೭
ಸ್ವಾಗತ ಸಮಿತಿ, ೬ನೇ ಅಖಿಲ ಭಾರತ
ಕರ್ನಾಟಕ ಲೇಖಕಿಯರ ಸಮ್ಮೇಳನ, ಮಂಡ್ಯ.

೬. ವಿರೂಪಾಕ್ಷಿ ಪೂಜಾರಹಳ್ಳಿ(ಸಂ): ದಲಿತರು ಮತ್ತು ಚರಿತ್ರೆ–೨೦೦೫
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೭. ಮೊಗಳ್ಳಿ ಗಣೇಶ್ : ದಲಿತ ಕಥನ– ೨೦೦೬
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೮. ಶ್ರೀಮತಿ.ಎಚ್.ಎಸ್.
ಶಿವಾನಂದ.ಎಸ್.ವಿರಕ್ತಮಠ
ಕೃಷ್ಣ.ಜೆ. : ಹೆಣ್ಣು ಮತ್ತು ಭಾಷೆ–೨೦೦೭
ಮಹಿಳಾ ಅಧ್ಯಯನ ಕೇಂದ್ರ,
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೯. ಸಾರಾ ಅಬೂಬಕ್ಕರ್ : ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ–೨೦೦೭
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೧೦. ಅರವಿಂದ ಮಾಲಗತ್ತಿ : ಸಾಹಿತ್ಯ, ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ–೨೦೦೩
ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೧೧. ರಾಜಪ್ಪ ದಳವಾಯಿ (ಸಂ): ಕನ್ನಡ ಸಾಹಿತ್ಯ ಕೋಶ
ಶ್ರೀ ರಾಘವೇಂದ್ರ ಪ್ರಕಾಶನ
ಬೆಂಗಳೂರು.

೧೨. ಸಬಿಹಾ ಭೂಮಿಗೌಡ (ಸಂ) : ಮಹಿಳಾ ಸಾಹಿತ್ಯ–೨೦೦೭
ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು.

೧೩. ಷರೀಫಾ.ಕೆ. : ಬಂಡಾಯ ಮುಸ್ಲಿಂ ಸಂವೇದನೆ–೨೦೦೪
ಸಿ.ವಿ.ಜಿ. ಪಬ್ಲಿಕೇಷನ್ಸ್,
ಬೆಂಗಳೂರು.

೧೪. ಶ್ರೀಮತಿ.ಎಚ್.ಎಸ್. (ಸಂ) : ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ–೨೦೦೬
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ,
ಹಂಪಿ.

೧೫. ಪ್ರಭಾವತಿ.ಎಸ್.ವಿ. : ಕನ್ನಡ ಮಹಿಳಾ ಸಾಹಿತ್ಯದಲ್ಲಿ
ಸ್ತ್ರೀವಾದಿ ನೆಲೆಗಳು
ವಸಂತ ಪ್ರಕಾಶನ, ಬೆಂಗಳೂರು.

೧೬. ಸಾರಾ ಅಬೂಬಕ್ಕರ್ (ಅನುವಾದ) : ಬಲೆ–೧೯೯೮
ಮಲೆಯಾಳ ಮೂಲ–ಬಿ.ಎಂ.ಸುಹರಾ
ಚಂದ್ರಗಿರಿ ಪ್ರಕಾಶನ, ಮಂಗಳೂರು.

೧೭. ನಾ.ಕಸ್ತೂರಿ (ಅನುವಾದ) : ಕೆಂಪು ಮೀನು–೧೯೯೦
ಮೂಲ–ತಕಳಿ ಶಿವಶಂಕರ ಪಿಳ್ಳೆ
ಸಾಹಿತ್ಯ ಅಕಾಡೆಮಿ, ಬೆಂಗಳೂರು.

AKSHARA GRANTHALAYA
ACC.NO. 130315